ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಮೂಚಿರಾಂ ಚಂದಾ ಪ.ಪಂಗಾಳದ ಹುತಾತ್ಮ



ಸಂಪುಟ 10 | ಸಂಚಿಕೆ 23 | ಪುಟ 16 | ಜೂನ್ 05, 2016 | ರೂ. 10/-

web: www.janashakthi.co.in e-mail : js_weekly@yahoo.com

1956-2016 ಕರ್ನಾಟಕ ಪ್ರೊವೆನ್ಶಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್



ಪ್ಲಾಂಟೇಶನ್ ಕಾರ್ಮಿಕರ ಯೂನಿಯನ್ನಿಗೆ 60 ಸಂಭ್ರಮ

#DoSaalJantaBehaal



ಹೊಸ ತ್ರಿಮೂರ್ತಿಯ ಹೊಲಸು ಮುಖಗಳು - ಯೆಚೂರಿ

#2_ವರ್ಷ_ತರಲಿಲ್ಲ_ಹರ್ಷ

ಕೇರಳ ಹೊಸ ಬೆಳಕಿನತ್ತ



ಎಡ ಪರ್ಯಾಯಕ್ಕಾಗಿ ಜಿಲ್ಲಾ ಸಮಾವೇಶಗಳು

ಕಾಂಗ್ರೆಸ್ ಸರ್ಜರಿ : ಯಾವುದಕ್ಕೆ, ಯಾರಿಂದ?

ರಾಜ್ಯಸಭೆ ಚುನಾವಣೆ: ಅಪಾಯಕಾರಿ ಪ್ರವೃತ್ತಿಗಳು

"ಮಾನ್ಯ ರವಿಶಂಕರ ಪ್ರಸಾದ್‌ರವರೇ, ನಿಮ್ಮ ಭಾಷೆ ಒಬ್ಬ ಕೇಂದ್ರ ಮಂತ್ರಿಗೆ ತಕ್ಕುದಾಗಿದೆಯೇ?"

ಕೇಂದ್ರ ಮಂತ್ರಿಗಳಿಗೆ ಬೃಂದಾ ಕಾರಟ್ ಪ್ರಶ್ನೆ



ಹಿಂದಿನ ವಾರ 'ಪೋ ಮೋನೆ ಮೋದಿ' (ಮನೆಗ್ಹೋಗು ಮಗನೇ) ಎಂಬ ಸಂದೇಶ ಕೇರಳ ರಾಜ್ಯದಾದ್ಯಂತ ಅನುರಣನಗೊಂಡ ನಂತರ, ಕಳೆದ ವಾರ ಮೇ 19ರಂದು ಕೇರಳದಲ್ಲಿ ಚುನಾವಣಾ ಫಲಿತಾಂಶಗಳನ್ನು ಕಂಡು ಹತಾಶರಾದ ಆರೆಸ್ಸೆಸ್-ಬಿಜೆಪಿ ಮಂದಿ ಹಲವೆಡೆ ಸಿಪಿಐ(ಎಂ) ಮೇಲೆ ದಾಳಿ ನಡೆಸಿದರು. ಈಗ ಕೇರಳದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವ ಪಿಣರಾಯಿ ವಿಜಯನ್ ಅವರ ಊರು ಪಿಣರಾಯಿಯಲ್ಲಿ ಎಲ್‌ಡಿಎಫ್ ವಿಜಯ ರ್‍ಯಾಲಿಯ ಮೇಲೆ ಎಸೆದ ಬಾಂಬಿಗೆ ಸಿ.ವಿ. ರವೀಂದ್ರನ್ ಎಂಬ ಸಿಪಿಐ(ಎಂ) ಕಾರ್ಯಕರ್ತರು ಬಲಿಯಾಗಿದ್ದಾರೆ. ಅವರ ಮಗ ಜಿಶಿನ್ ಮತ್ತು ಇತರ ನಾಲ್ಕು ಮಂದಿ ಗಾಯಗೊಂಡಿದ್ದಾರೆ. ಪೋಲೀಸರು ಎಫ್‌ಐಆರ್‌ನಲ್ಲಿ ಹೆಸರಿಸಿದ 18 ಮಂದಿ ಆರೆಸ್ಸೆಸ್‌ನವರು.

ಮಟ್ಟನೂರ್‌ನಲ್ಲಿ ಸಿಪಿಐ(ಎಂ) ರ್‍ಯಾಲಿಯ ಮೇಲೆ ಎಸೆದ ಬಾಂಬಿನಿಂದ ನಾಲ್ಕು ಮಂದಿ ಗಾಯಗೊಂಡಿದ್ದಾರೆ.



ರವೀಂದ್ರನ್ ಮೃತದೇಹದ ಎದುರು ರೋದಿಸುತ್ತಿರುವ ಪತ್ನಿ ಗೀತಾ

ಕಾಸರಗೋಡು ಜಿಲ್ಲೆಯ ಕಾಂಜಂಗಾಡ್ ಕ್ಷೇತ್ರದಲ್ಲಿ ಗೆದ್ದ ಸಿಪಿಐ ಅಭ್ಯರ್ಥಿ ಅವರ ವಿಜಯದ ಮೆರವಣಿಗೆಯ ಮೇಲ ನಡೆಸಿದ ದಾಳಿಯಲ್ಲಿ ಸ್ವತಃ ಹೊಸದಾಗಿ ಚುನಾಯಿತರಾದ ಇ.ಚಂದ್ರಶೇಖರನ್ ಸೇರಿದಂತೆ ಹಲವರ ಕೈಮುರಿದು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ.

ಬಿಜೆಪಿ ಗೆದ್ದ ಏಕೈಕ ಕ್ಷೇತ್ರ ನೇಮಂನಲ್ಲಿ ಬಿಜೆಪಿ ಕಾರ್ಯಕರ್ತರು ಸಿಪಿಐ(ಎಂ) ಕಚೇರಿಯ ಮೇಲೆ ದಾಳಿ ನಡೆಸಿದ್ದಾರೆ.

ಆದರೂ ಕೇರಳದಲ್ಲಿ ಸಿಪಿಐ(ಎಂ) ಬಿಜೆಪಿಯ ಮೇಲೆ ದಾಳಿ ಮಾಡುತ್ತಿದೆ ಎಂದು ದಿಲ್ಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿ ಮುಂದೆ ಬಿಜೆಪಿ ಮಂದಿ ಧಾಂಧಲೆ ನಡೆಸಿದರು. ಕೇಂದ್ರ ಮಂತ್ರಿ ರವಿಶಂಕರ್ ಪ್ರಸಾದ್ ಅವರು ರಾಷ್ಟ್ರೀಯ ಟೆಲಿವಿಶನ್‌ನಲ್ಲಿ ಬೆದರಿಸಿದರು–"ನಾವು ಅವರನ್ನು ಬೀದಿಯಲ್ಲಿ ಎದುರಿಸುತ್ತೇವೆ, ಭಾರತವನ್ನು ಆಳುತ್ತಿರುವುದು ಬಿಜೆಪಿ ಎಂಬುದನ್ನು ಅವರು ನೆನಪಿಟ್ಟುಕೊಳ್ಳಬೇಕು"!

ಇದಕ್ಕೆ ಉತ್ತರಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ "ನಿಮ್ಮ ಭಾಷೆ ಒಬ್ಬ ಕೇಂದ್ರ ಮಂತ್ರಿಗೆ ತಕ್ಕುದಾಗಿದೆಯೇ?" ಎಂದು ಪ್ರಶ್ನಿಸಿದ್ದಾರೆ.

"ಪ್ರಿಯ ಶ್ರೀಯುತ ರವಿಶಂಕರ್ ಪ್ರಸಾದ್ ಅವರೇ, ಒಬ್ಬ ಕೇಂದ್ರ ಮಂತ್ರಿಯಂತೆ ಮಾತಾಡಿ, ಒಬ್ಬ ಆರೆಸ್ಸೆಸ್ ಶಾಖೆಯ ಸದಸ್ಯನಂತಲ್ಲ. ಸಿಪಿಐ(ಎಂ) ಕೇಂದ್ರ ಕಚೇರಿ ಎದುರು ಮತಪ್ರದರ್ಶನ ಏರ್ಪಡಿಸುವ ಮತ್ತು ನಿಮ್ಮ ಮಂದಿ ಧಾಂಧಲೆಗಳನ್ನು ನಡೆಸಲು ಪ್ರೋತ್ಸಾಹಿಸುವ ಮೊದಲು ಸತ್ಯಾಂಶಗಳನ್ನು ತಿಳಿದುಕೊಳ್ಳಿ" ಎಂದು ಅವರು ಈ ಕೇಂದ್ರ ಮಂತ್ರಿಗಳಿಗೆ ಕಿವಿಮಾತು ಹೇಳಿದ್ದಾರೆ.

ಎರಡು ವಿರುದ್ಧ ರಾಜಕೀಯ ಶಕ್ತಿಗಳಿಗೆ ಸೇರಿದವರಂತೆ ಕಾಣುವ ಹಿರಿಯ ಮುಖಂಡರು, ಒಂದೆಡೆ ಆರೆಸ್ಸೆಸ್-ಬಿಜೆಪಿ ಕೂಟದ ರವಿಶಂಕರ ಪ್ರಸಾದ್ ಮತ್ತು ಅತ್ತ ಬಂಗಾಲದ ಮುಖ್ಯಮಂತ್ರಿ ಮತ್ತು ತೃಣಮೂಲ ಕ್ಯಾಂಗ್ರೆಸಿನ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಎಷ್ಟು ಸುಲಭವಾಗಿ ವಿರೋಧಿ ದನಿಗಳನ್ನು ಹಿಂಸಾಚಾರದಿಂದ ಅಡಗಿಸುವ ತಂಡದೊಳಕ್ಕೆ ಜಾರಿ ಬೀಳುತ್ತಾರೆ ಎಂಬುದೊಂದು ವಿಚಿತ್ರ ಸಂಗತಿ, ಗೆಲ್ಲಲಿ, ಸೋಲಲಿ, ನಾವೇ ಪರಮಪ್ರಭುಗಳು ಎಂಬುದನ್ನು ಒಪ್ಪಿಕೊಳ್ಳಿ ಎಂಬುದು ಅವರ ಆಟದ ಹೆಸರು ಎನ್ನುತ್ತಾರೆ ಬೃಂದಾ ಕಾರಟ್.

ಇಲ್ಲಿ ಜನರು ತಿರಸ್ಕರಿಸಿದವರ ಹತಾಶೆಯ ಪ್ರದರ್ಶನ ನಡೆದರೆ, ಅತ್ತ ಪಶ್ಚಿಮ ಬಂಗಾಲದಲ್ಲಿ ವಿಜೇತರ ಅಟಾಟೋಪ ನಡೆದಿದೆ. ದೇಶವನ್ನು ಆಳುತ್ತಿದ್ದೇವೆ ಎಂದು ಮೆರೆಯುವ ಪಕ್ಷದ ಪ್ರಮುಖ ರಾಜ್ಯ ಮುಖಂಡರೂ ಮತ್ತು ಚಿತ್ರ ಕಲಾವಿದೆಯೂ ಆದ ರೂಪಾ ಗಂಗೂಲಿಯವರ ಕಾರಿನ ಮೇಲೆಯೇ ಟಿಎಂಸಿ ಗೂಂಡಾಗಳು ದಾಳಿ ಮಾಡಿದರೂ ಆ ಬಗ್ಗೆ ಈ ಮಂತ್ರಿಗಳಾಗಲೀ, ದಿಲ್ಲಿಯಲ್ಲಿರುವ ಬೇರಾವ ಅವರ ರಾಷ್ಟ್ರೀಯ ಮುಖಂಡರೇ ಆಗಲಿ ತುಟಿ ಪಿಟಕ್ಕೆನ್ನಲಿಲ್ಲ ಏಕೆ, ಏಕೆಂದರೆ ದಿಲ್ಲಿಯಲ್ಲಿ ಅವರಿಗೆ ಮಮತಾ ಬ್ಯಾನರ್ಜಿ ಬೆಂಬಲ ಬೇಕಾಗಿದೆ ಎಂದು ಬೃಂದಾ ಕಾರಟ್ ನೆನಪಿಸುತ್ತಾರೆ.

ಇದರ ಹಿಂದೆ ಇನ್ನೂ ಆಳವಾದ ಸಂಗತಿ ಇದೆ, ಸರ್ವಾಧಿಕಾರಶಾಹಿ ಮತ್ತು ಪ್ರಜಾಪ್ರಭುತ್ವದ ಬಗ್ಗೆ ತುಚ್ಛೀಕಾರ ಈ ಎರಡು ರಾಜಕೀಯ ಶಕ್ತಿಗಳನ್ನು ಮತ್ತು ಇಬ್ಬರು ಉನ್ನತ ಮುಖಂಡರನ್ನು ಒಟ್ಟಿಗೆ ಬೆಸೆಯುವ ಸಂಗತಿ. ಹೀಗಿರುವಾಗ ಬಹುಶಃ ಎರಡು ವಿರುದ್ಧ ರಾಜಕೀಯ ಶಕ್ತಿಗಳಿಗೆ ಸೇರಿದವರಂತೆ ಕಾಣುವ ಹಿರಿಯ ಮುಖಂಡರು, ಎಷ್ಟು ಸುಲಭವಾಗಿ ವಿರೋಧಿ ದನಿಗಳನ್ನು ಹಿಂಸಾಚಾರದಿಂದ ಅಡಗಿಸುವ ತಂಡದೊಳಕ್ಕೆ ಜಾರಿ ಬೀಳುತ್ತಾರೆ ಎಂಬುದು ವಿಚಿತ್ರ ಸಂಗತಿಯಾಗಿ ಕಾಣುವುದಿಲ್ಲ ಎನ್ನುತ್ತಾರೆ ಬೃಂದಾ ಕಾರಟ್.

aÀiÀvEAzAgEEzAA

ಆಧುನಿಕ ಬಂಡವಾಳವಾದೀ ಸಮಾಜವು
ಅದ್ಭುತ ಸೃಷ್ಟಿಯ ಮಂತ್ರವಾದಿಯಂತೆ
ತನ್ನದೇ ಆದ ಉತ್ಪಾದನಾ, ವಿನಿಮಯ ಮತ್ತು
ಆಸ್ತಿ ಸಂಬಂಧಗಳೊಂದಿಗೆ ಭಾರಿ ಪ್ರಮಾಣದ
ಉತ್ಪಾದನಾ ಸಾಧನಗಳನ್ನು,
ವಿನಿಮಯ ಸಾಧನಗಳನ್ನು ಸೃಷ್ಟಿಮಾಡಿದೆ.
ಆದರೆ ತನ್ನ ಮಂತ್ರಶಕ್ತಿಯಿಂದ ಪಾತಾಳದಿಂದ
ಹೊರತಂದ ಪಿಶಾಚಿಗಳನ್ನು ತಾನೇ
ನಿಯಂತ್ರಿಸಲಾಗದ ಮಂತ್ರವಾದಿಯ ಸ್ಥಿತಿಯನ್ನು
ಬಂಡವಾಳವಾದ ತಲುಪಿದೆ.

–ಮಾರ್ಕ್ಸ್ ಮತ್ತು ಎಂಗೆಲ್ಸ್
(ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ)

ಪಶ್ಚಿಮ ಬಂಗಾಲ: ಚುನಾವಣೋತ್ತರ ಹಿಂಸಾಚಾರದ ವಿರುದ್ಧ ಬೀದಿಗಿಳಿಯಲು ಎಡರಂಗದ ನಿರ್ಧಾರ



ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಫಲಿತಾಂಶಗಳ ನಂತರದ ಹಿಂಸಾಚಾರದ ವಿರುದ್ಧ ಎಡರಂಗದ ಎರಡು ದಿನಗಳ ಧರಣಿ ಮೇ 24 ಮತ್ತು 25ರಂದು ಕೊಲ್ಕತಾದಲ್ಲಿ ನಡೆದಿದೆ. ಇದರಲ್ಲಿ ಭಾಗವಹಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ.ಸೂರ್ಯಕಾಂತ್ ಮಿಶ್ರ ಪ್ರತಿದ್ವಂದ್ವಿಗಳ ಮೇಲಿನ ಅಮಾನವೀಯ ದಾಳಿಗಳನ್ನು ತಡೆಯುವ ರಾಜಕೀಯ ಇಚ್ಛಾಶಕ್ತಿ ಆಳುವ ಪಕ್ಷಕ್ಕಿಲ್ಲ, ಬದಲಿಗೆ ಅದೇ ಪ್ರತಿಪಕ್ಷಗಳನ್ನು ನಿರ್ಮೂಲಗೊಳಿಸುವ ಉದ್ದೇಶದಿಂದಲೇ ಈ ದಾಳಿಗಳಿಗೆ ನೇತೃತ್ವ ನೀಡುತ್ತಿದೆ ಎಂದರು.

ಎಡರಂಗದ ಅಧ್ಯಕ್ಷ ಬಿಮನ್ ಬಸು ಆಳುವ ಟಿಎಂಸಿ ನಡೆಸುತ್ತಿರುವ ಹಿಂಸಾಚಾರದ ವಿರುದ್ಧ ಪ್ರತಿಯೊಂದು ಜಿಲ್ಲೆಯಲ್ಲೂ ಬೀದಿಗಳಿಯಲು ಎಡರಂಗ ನಿರ್ಧರಿಸಿದೆ, ಇದರಲ್ಲಿ ಪಾಲ್ಗೊಳ್ಳಿ ಎಂದು ಎಲ್ಲ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತರಿಗೆ ಮನವಿ ಮಾಡಿದರು. ಪರಿಸ್ಥಿತಿ ಸುಧಾರಿಸದಿದ್ದರೆ ರ್‍ಯಾಲಿಗಳು, ಧರಣಿಗಳು, ತಡೆಗಳು ಮುಂತಾದವುಗಳ ಮೂಲಕ ಪ್ರತಿಭಟನೆಗಳನ್ನು ರಾಜ್ಯಾದ್ಯಂತ ಕ್ರಮೇಣ ತೀವ್ರಗೊಳಿಸಲಾಗುವುದು ಎಂದು ಅವರು ಹೇಳಿದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಮತದಾನ ಮುಗಿದ ನಂತರ, ವಿಶೇಷವಾಗಿ ಚುನಾವಣಾ ಫಲಿತಾಂಶಗಳು ಪ್ರಕಟವಾದ ನಂತರ ಟಿಎಂಸಿ ಹರಿಯ ಬಿಟ್ಟಿರುವ ಹಿಂಸಾಚಾರವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ಮತ್ತು ಎಡರಂಗ ಜನತೆಯ ತೀರ್ಪನ್ನು ವಿನಯದಿಂದ ಒಪ್ಪಿಕೊಂಡಿದೆ. ಹೊಸದಾಗಿ ಚುನಾಯಿತ ಸರಕಾರ ತನ್ನ ಸಾಂವಿಧಾನಿಕ ಹೊಣೆಗಾರಿಕೆಗಳನ್ನು ನಿಭಾಯಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯರೊ ಹೇಳಿದೆ. (ಈ ಕುರಿತ ಹಿರಿಯ ಸಿಪಿಐ(ಎಂ) ಮುಖಂಡರಾದ ಪ್ರಕಾಶ ಕಾರಟ್ ಅವರ ಲೇಖನ ಈ ಸಂಚಿಕೆಯ ಪುಟ 7ರಲ್ಲಿ ನೋಡಿ). ಪೊಲಿಟ್‌ಬ್ಯುರೊ ಕರೆಯ ಮೇರೆಗೆ ದೇಶದ ಹಲವೆಡೆ ಸಿಪಿಐ(ಎಂ) ಘಟಕಗಳು ಟಿಎಂಸಿ ಹಿಂಸಾಚಾರದ ವಿರುದ್ಧ ಮತಪ್ರದರ್ಶನ ನಡೆಸಿ ಪಶ್ಚಿಮ ಬಂಗಾಲದ ತಮ್ಮ ಸಂಗಾತಿಗಳಿಗೆ ಅವರ ಹೋರಾಟದಲ್ಲಿ ಸೌಹಾರ್ದವನ್ನು ವ್ಯಕ್ತಪಡಿಸಿವೆ.



ದಿವ್ಯಾಂಗಜನ ಎಂಬ ಹೆಸರು ಬದಲಾವಣೆ ಬೇಡ, ದೈವತ್ವದ ಅನುಗ್ರಹ ಬೇಡ ಸಮಾನ ಹಕ್ಕುಳ್ಳವರು ಎಂಬ ಘನತೆಯ ಬದುಕಿನ ಮಾನ್ಯತೆ ಬೇಕು

ಪ್ರಧಾನಿಗಳಿಗೆ ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆಯ ಆಗ್ರಹ

ಕಳೆದ ವರ್ಷ ಡಿಸೆಂಬರ್ 27 ರ 'ಮನ್ ಕೀ ಬಾತ್' ಭಾಷಣದಲ್ಲಿ ಪ್ರಧಾನಿಗಳು ವಿಕಲಾಂಗ ವ್ಯಕ್ತಿಗಳು 'ದಿವ್ಯಾಂಗ'ರು, ಏಕೆಂದರೆ ಅವರಲ್ಲಿ 'ದೈವತ್ವ' ಇದೆ ಎಂದಿದ್ದರು. ಮೂಲ ಸಮಸ್ಯೆಯನ್ನು ಮಾತಿನ ಮಂಟದಲ್ಲಿ ಮುಳುಗಿಸಿ ತೇಲಿಸಿ ಬಿಡುವವರಿಗೆ ಇದು ಒಂದು ಹೊಸ ಅವಕಾಶವಾಗಿ ಕಂಡಿತ್ತು. ಎಲ್ಲರೂ 'ದಿವ್ಯಾಂಗ'ದ ಮಂತ್ರವನ್ನೇ ಪಠಿಸಲಾರಂಭಿಸಿದರು. ಇದನ್ನು ಗಮನಿಸಿದ ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆ ಪ್ರಧಾನಿಗಳಿಗೆ ಪತ್ರ ಬರೆದು ಅಂಗವಿಕಲತೆ ದೈವದತ್ತ ಕೊಡುಗೆ ಅಲ್ಲ, ದೈವತ್ವವನ್ನು ಆರೋಪಿಸುವುದರಿಂದ ಹೊಸ ಮಿಥ್ಯೆಗಳು ಸೃಷ್ಟಿಯಾಗುತ್ತವೆಯೇ ಹೊರತು ಈ ವ್ಯಕ್ತಿಗಳಿಗೆ ಸಮಾಜ ಹಚ್ಚಿರುವ ಕಳಂಕ, ತೋರುತ್ತಿರುವ ಪಕ್ಷಪಾತದ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ, ಅವರಿಗೆ ನಿಜವಾಗಿ ಬೇಕಿರುವುದು ದೈವತ್ವವನ್ನು ದಯಪಾಲಿಸುವ ಕರುಣೆಯಲ್ಲ, ಸಮಾನ ಹಕ್ಕುಗಳನ್ನು ಹೊಂದಿರುವ ನಾಗರಿಕರೆಂಬ ಮಾನ್ಯತೆ, ಆದ್ದರಿಂದ ಇಂತಹ ಅನುಗ್ರಹದ ಪದಗಳನ್ನು ಬಳಕೆಗೆ ತರಬೇಡಿ ಎಂದು ಸೂಚಿಸಿತ್ತು. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಇತರ ಹಲವು ಸಂಘಟನೆಗಳೂ ಈ ಪದಬಳಕೆಗೆ ಆಕ್ಷೇಪವನ್ನು ವ್ಯಕ್ತಪಡಿಸಿದ್ದವು.

ಆದರೂ ಮೇ 17ರಂದು 'ಅಂವಿಕಲತೆಯಿರುವ ವ್ಯಕ್ತಿಗಳ ಸಬಲೀಕರಣದ ಇಲಾಖೆ' ಎಂಬ ಹೆಸರನ್ನು 'ಅಂವಿಕಲತೆಯಿರುವ ವ್ಯಕ್ತಿಗಳ ಸಬಲೀಕರಣದ ಇಲಾಖೆ(ದಿವ್ಯಾಂಗಜನ)' ಎಂದು ಬದಲಿಸುವ ನೋಟಿಫಿಕೇಶನ್ ಮೇ 17ರಂದು ಹೊರ ಬಿದ್ದಿದೆ. ಇದನ್ನು ಪ್ರತಿಭಟಿಸಿರುವ ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆ ಮೇ 25ರಂದು ಪ್ರಧಾನ ಮಂತ್ರಿಗಳಿಗೆ ಮತ್ತೆ ಪತ್ರ ಬರೆದು ಈ ವಿಷಯವನ್ನು ಮತ್ತೆ ಅವರಿಗೆ ನೆನಪಿಸುತ್ತ ಈ ನೋಟಿಫಿಕೇಶನನ್ನು ಹಿಂತೆಗೆದು ಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ರಾಜ್ಯಸಭಾ ಚುನಾವಣೆ: ಅನಾರೋಗ್ಯಕರ ಪ್ರವೃತ್ತಿಗಳು

ರಾಜ್ಯಸಭಾ ಚುನಾವಣೆ ಸದ್ಯದಲ್ಲೇ ನಡೆಯಲಿದೆ. ಕರ್ನಾಟಕದಿಂದ 13 ರಾಜ್ಯಸಭಾ ಸದಸ್ಯರಿದ್ದು ಅವರ ಅವಧಿ 6 ವರ್ಷಗಳು. ಪ್ರತಿ 2 ವರ್ಷಕ್ಕೊಮ್ಮೆ ಅವರಲ್ಲಿ ಮೂರನೇ ಒಂದರಷ್ಟು (ಅಂದರೆ 4) ಸದಸ್ಯರು ನಿವೃತ್ತರಾಗಿ, 4 ಹೊಸ ಸದ್ಯರು ಆಯ್ಕೆಯಾಗುತ್ತಾರೆ. ರಾಜ್ಯದ ವಿಧಾನಸಭೆ ರಾಜ್ಯಸಭಾ ಸದಸ್ಯರನ್ನು ಚುನಾಯಿಸುತ್ತದೆ. ಈ ಚುನಾವಣೆ ಪ್ರಮಾಣಾತ್ಮಕ ಪ್ರಾತಿನಿಧ್ಯದ ಆಧಾರದ ಮೇಲೆ ನಡೆಯುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಕರ್ನಾಟಕ ವಿಧಾನಸಭೆಯ 45 ಸದಸ್ಯರ ಮತ ಗಳಿಸಿದ ಅಭ್ಯರ್ಥಿ ರಾಜ್ಯಸಭೆಗೆ ಚುನಾಯಿತರಾಗುತ್ತಾರೆ. ಕರ್ನಾಟಕದಿಂದ ನಡೆಯುವ ರಾಜ್ಯಸಭಾ ಚುನಾವಣೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಹಲವು ಅನಾರೋಗ್ಯಕರ ಪ್ರವೃತ್ತಿಗಳು ತಲೆದೋರಿವೆ.

ಕೇಂದ್ರದಲ್ಲಿ ರಾಜ್ಯಗಳ ಆರ್ಥಿಕ ರಾಜಕೀಯ ಸಾಮಾಜಿಕ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಮತ್ತು ಅವುಗಳ ದನಿ ಕೇಳುವಂತೆ ಮಾಡುವ ವೇದಿಕೆಯಾಗಿ ರಾಜ್ಯಸಭೆಯನ್ನು ಪಾರ್ಲಿಮೆಂಟಿನ ಮೇಲ್ಮನೆಯಾಗಿ ನಮ್ಮ ಸಂವಿಧಾನದಲ್ಲಿ ಅಳವಡಿಸಲಾಗಿದೆ. ರಾಜ್ಯಸಭೆ ನಮ್ಮ ಫೆಡರಲ್ ಸ್ವರೂಪದ ಸರಕಾರದ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯಸಭೆ 'ಶಾಶ್ವತ' ಸದನವಾಗಿದ್ದು ಇಡಿಯಾಗಿ ಒಮ್ಮೆಲೇ ಬದಲಾಗುವುದಿಲ್ಲ. ಪ್ರತಿ ವರ್ಷ ಮೂರನೇ ಒಂದು ಭಾಗದ ಸದಸ್ಯರು ನಿವೃತ್ತರಾಗಿ, ಹೊಸ ಸದಸ್ಯರು ಆಯ್ಕೆಯಾಗುತ್ತಾರೆ. ಇದು ಲೋಕಸಭೆಯಲ್ಲಿ ಭಾರೀ ಬಹುಮತ ಪಡೆದ ಪಕ್ಷವೊಂದು ಬೇರೆ ರಾಜಕೀಯ ಅಭಿಪ್ರಾಯವನ್ನು ತುಳಿಯುವ ಅಥವಾ ನಿರ್ಲಕ್ಷ್ಯ ಮಾಡುವ ಅಪಾಯವನ್ನೂ ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಇಂತಹ ರಾಜ್ಯಸಭೆಗೆ ಅಭ್ಯರ್ಥಿಯಾಗಿರುವವರಿಗೆ ರಾಜ್ಯದ ಆರ್ಥಿಕ ರಾಜಕೀಯ ಸಾಮಾಜಿಕ ಅಭಿಪ್ರಾಯಗಳ ಬಗ್ಗೆ ಆಳವಾದ ಜ್ಞಾನ ಇದ್ದು ಅವನ್ನು ಸದನದಲ್ಲಿ ಸಮರ್ಥವಾಗಿ ಮಂಡಿಸುವ ಸಾಮರ್ಥ್ಯ ಇರಬೇಕು. ಇವೆಲ್ಲವನ್ನು ಮಾಡಲು ಆಯಾ ರಾಜ್ಯದಲ್ಲಿ ಕೆಲಸ ಮಾಡಿ ದೀರ್ಘ ಅನುಭವ ಇರುವವರು ಬೇಕಾಗುತ್ತಾರೆ. ಹಿಂದೆ ರಾಜ್ಯಸಭೆಯ ಅಭ್ಯರ್ಥಿಗಳು ರಾಜ್ಯದಲ್ಲಿ ವಾಸ ಇದ್ದು ಅಲ್ಲಿನ ಮತದಾರರಾಗಿರಬೇಕೆಂಬ ನಿಯಮ ಇತ್ತು. ಆಸ್ಸಾಮಿನಿಂದ ಡಾ. ಮನಮೋಹನ ಸಿಂಗ್ ಅವರ ರಾಜ್ಯಸಭಾ ಸದಸ್ಯತ್ವ ಕೋರ್ಟಿನಲ್ಲಿ ಪ್ರಶ್ನಿಸಲ್ಪಟ್ಟಾಗ ಈ ನಿಯಮವನ್ನು ಬದಲಿಸಲಾಯಿತು. ಅದು ಏನೇ ಇದ್ದರೂ ರಾಜ್ಯವನ್ನು ಪ್ರತಿನಿಧಿಸಲು ರಾಜ್ಯದ ಬಗ್ಗೆ ದೀರ್ಘ ಅನುಭವ ಇರಬೇಕೆಂಬುದು ಸ್ವಯಂವಿದಿತ.

ಕರ್ನಾಟಕದಿಂದ ನಡೆಯುವ ರಾಜ್ಯಸಭಾ ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ಆರಿಸುವಲ್ಲಿ ಮೂರೂ ಪ್ರಮುಖ ರಾಜಕೀಯ (ಕಾಂಗ್ರೆಸ್, ಬಿಜೆಪಿ, ಜೆಡಿ–ಎಸ್) ಪಕ್ಷಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮೂರು ಪ್ರಮುಖ ಅನಾರೋಗ್ಯಕರ ಪ್ರವೃತ್ತಿಗಳು ತಲೆದೋರಿವೆ. ಮೊದಲನೆಯದಾಗಿ ಲೋಕಸಭೆಯಲ್ಲಿ ಸೋತ ರಾಜ್ಯದ ಅಥವಾ (ಹೆಚ್ಚಾಗಿ) ಇತರ ರಾಜ್ಯಗಳ ರಾಷ್ಟ್ರ ಮಟ್ಟದ ನಾಯಕರಿಗೆ ಪಾರ್ಲಿಮೆಂಟ್ ಪ್ರವೇಶಿಸಲು ಸುರಕ್ಷಿತ ವಿಧಾನವಾಗಿದೆ. ಹೆಚ್ಚಾಗಿ ಇವರಿಗೆ ರಾಜ್ಯದ ಬಗ್ಗೆ ಏನೂ ತಿಳಿದಿರುವುದಿಲ್ಲ. ಮಾತ್ರವಲ್ಲ ನೆರೆ ರಾಜ್ಯದವರಾಗಿದ್ದಾಗ ಮತ್ತು ನೆರೆ ರಾಜ್ಯಗಳ ಜತೆ ವಿವಾದ ಇದ್ದಾಗ ರಾಜ್ಯದ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದು ಬಿಟ್ಟು ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯೇ ಹೆಚ್ಚು. ರಾಜ್ಯಸಭಾ ಅಭ್ಯರ್ಥಿಗಳಾಗಿ ಹೆಸರು ಕೇಳಿ ಬರುತ್ತಿರುವ ಆಂಧ್ರದ ಬಿಜೆಪಿಯ ವೆಂಕಯ್ಯ ನಾಯುಡು, ಕಾಂಗ್ರೆಸಿನ ಜೈರಾಮ್ ರಮೇಶ್, ತಮಿಳುನಾಡಿನ ಕಾಂಗ್ರೆಸಿನ ಪಿ ಚಿದಂಬರಂ ಅವರು ಈ ಸಾಲಿಗೆ ಸೇರಿರುವವರು. ಬಿಜೆಪಿಯ ವೆಂಕಯ್ಯ ನಾಯುಡು ಅವರನ್ನು ಬಿಜೆಪಿ 4ನೇ ಬಾರಿಗೆ ಕರ್ನಾಟಕದಿಂದ ಕಣಕ್ಕಿಳಿಸಲಿದೆ.

ಎರಡನೆಯದು ಈ ಪಕ್ಷಗಳಲ್ಲಿ (ರಾಜ್ಯ, ಕೇಂದ್ರಗಳಲ್ಲಿ ಯಾವುದೇ ಸ್ಥಾನ ಪಡೆಯಲಾಗದ ಮುಂತಾದ) ವಿವಿಧ ಕಾರಣಗಳಿಗೆ ಅತೃಪ್ತ ರಾದವರನ್ನೂಗುಂಪುಗಾರಿಕೆ ಶಮನಗೊಳಿಸಲೂ ರಾಜ್ಯಸಭಾ ಅಭ್ಯರ್ಥಿಗಳಾಗಿ ಆಯ್ಕೆ ಮಾಡುವುದು. ಇದರ ಜತೆಗೆ ರಾಜ್ಯದ ಅಥವಾ ದೇಶದ ಯಾವುದೇ ವಿದ್ಯಮಾನಗಳ ಬಗ್ಗೆ ಅರಿವು ಇಲ್ಲದ ಯಾವುದೇ ಪರಿಣತಿ ಇಲ್ಲದ ಆದರೆ ಪಕ್ಷದ ಪ್ರಚಾರಕ್ಕೆ ಮಾತ್ರ ಪ್ರಯೋಜನಕಾರಿಯಾದವರನ್ನು ಸಮಾಧಾನ ಪಡಿಸಲು ಅಭ್ಯರ್ಥಿಯಾಗಿಸುವುದು. ಹೇಮಮಾಲಿನಿಯಂತಹ ನಟ/ನಟಿಯರು ಇದಕ್ಕೆ ಉದಾಹರಣೆ.

ಮೂರನೇಯ ಮತ್ತು ಅತ್ಯಂತ ಅಪಾಯಕಾರಿ ಅನಾರೋಗ್ಯಕರ ಪ್ರವೃತ್ತಿ ಎಂದರೆ ರಾಜ್ಯಸಭಾ ಸೀಟುಗಳನ್ನು ಉದ್ಯಮಿಗಳು ಸ್ಥಾಪಿತ ಹಿತಾಸಕ್ತಿಗಳಿಗೆ 'ಮಾರಾಟ' ಮಾಡುವುದು ಅಥವಾ ಅವರು ಸ್ಪರ್ಧಿಸಿದಾಗ ಅವರಿಗೆ ಪರೋಕ್ಷ ಬೆಂಬಲ ನೀಡುವುದು. ಕೆಲವೊಮ್ಮೆ ಪಕ್ಷಗಳು ಇಡಿಯಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಬೆಂಬಲ ನಿಡದಿದ್ದಾಗಲೂ, ಈ ಪಕ್ಷಗಳ ಸದಸ್ಯರಿಂದ ತಮ್ಮ ಮತವನ್ನು ಈ ಪ್ರಭಾವಿ ಉದ್ಯಮಿಗಳು 'ಕೊಂಡುಕೊಳ್ಳುವುದು' ಕಂಡು ಬಂದಿದೆ. ಈ ಪ್ರವೃತ್ತಿ ಮೂರೂ ಪಕ್ಷಗಳಲ್ಲೂ ಕಂಡು ಬಂದಿದೆ. ಆದರೆ ಜೆಡಿ–ಎಸ್ ಇದನ್ನು ಒಂದು (ಅ)'ನೀತಿ'ಯಾಗಿ ಅಂಗೀಕರಿಸಿದೆಯೋ ಎಂಬಂತೆ ಸತತವಾಗಿ ಪಾಲಿಸುತ್ತಿದೆ. ಇದಕ್ಕೆ 'ಅತ್ಯುತ್ತಮ' ಉದಾಹರಣೆ ವಿಜಯ ಮಲ್ಯ. ರಾಜ್ಯ ಮೂಲದ ವ್ಯಕ್ತಿಯಾಗಿದ್ದರೂ ಈತ ರಾಜ್ಯದ ವಿದ್ಯಮಾನಗಳ ಬಗ್ಗೆ ಅರಿವು ಇದ್ದವರೂ ಅಲ್ಲ. ಅದರ ಬಗ್ಗೆ ತಲೆ ಕೆಡಿಸಿಕೊಂಡವರೂ ಅಲ್ಲ. ತನ್ನ ಮತ್ತು ತನ್ನ ಉದ್ಯಮದ ಹಿತಾಸಕ್ತಿಯನ್ನು ಕಾಪಾಡಲು, ತನ್ನ ಕಾನೂನುಬಾಹಿರ ಭಾನಗಡಿಗಳನ್ನು ರಾಜಾರೋಷವಾಗಿ ಮುಂದುವರೆಸಲು ಸರಕಾರಗಳ ಪ್ರಮುಖ ಪಕ್ಷಗಳ ಪ್ರಭಾವ ಬಳಸಿಕೊಳ್ಳಲಷ್ಟೇ ಈ ಸದಸ್ಯತ್ವವನ್ನು ಬಳಸುವವರು. ಮೊದಲ ಬಾರಿಗೆ ಮಲ್ಯರನ್ನು ಕಾಂಗ್ರೆಸ್ ಮತ್ತು ಜೆಡಿ–ಎಸ್ ಬೆಂಬಲಿಸಿದರೆ, ಎರಡನೇ ಬಾರಿ ಅವರು ಬಿಜೆಪಿ ಮತ್ತು ಜೆಡಿ–ಎಸ್ ಬೆಂಬಲ ಪಡೆದುಕೊಂಡರು. ಮಲ್ಯರ ಭಾನಗಡಿಗಳು ಹೊಸದಲ್ಲದಿದ್ದರೂ ಆತ ದೇಶ ಬಿಟ್ಟು ಪರಾರಿಯಾಗಿ ಸುದ್ದಿಯಾದದ್ದರಿಂದ ಮತ್ತು ರಾಜಿನಾಮೆ ಕೊಡಬೇಕಾಗಿದ್ದರಿಂದಷ್ಟೇ ಈ ಪಕ್ಷಗಳು ಸುಮ್ಮನಿವೆ. ಇವೆಲ್ಲ ಇಲ್ಲದಿದ್ದರೆ ಮಲ್ಯ ರಾಜ್ಯಸಭೆಗೆ ಪುನರಾಯ್ಕೆ ಆಗಿದ್ದರೆ ಏನೂ ಆಶ್ಚರ್ಯ ಪಡಬೇಕಾಗಿಲ್ಲ. ಅದೇ ರೀತಿ ತಮಿಳುನಾಡಿನ ಉದ್ಯಮಿ ಎಂ.ಎ.ಎಂ. ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿದ್ದರು.

ಈ ಬಾರಿಯೂ ಹಲವು ರಾಜ್ಯದ ಹಾಗೂ ಹೊರ ರಾಜ್ಯದ ಉದ್ಯಮಿಗಳ ರೀಯಲ್ ಎಸ್ಟೇಟ್ ಕುಳಗಳ ಹೆಸರುಗಳು ಕೇಳಿ ಬರುತ್ತಿವೆ. ಜೆಡಿ–ಎಸ್ ಉದ್ಯಮಿಗಳಿಗೆ ಸೀಟು ಕೊಡುವ ತನ್ನ 'ನೀತಿ' ಮುಂದುವರೆಸಲಿದೆಯೆಂದು ಹೇಳಿದೆ. ಹೊರ ರಾಜ್ಯದ ರಾಜಕಾರಣಿಗಳಿಗೆ ಮತ್ತು ಉದ್ಯಮಿಗಳಿಗೆ ಸೀಟು ಕೊಡುವ ಪ್ರವೃತ್ತಿ ಬಗ್ಗೆ ರಾಜ್ಯದಲ್ಲಿ ಚರ್ಚೆ ಎದ್ದಿದೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿ ಇದನ್ನು ಕೇರ್ ಮಾಡದೆ ಜೈರಾಮ್ ರಮೇಶ್ ಮತ್ತು ವೆಂಕಯ್ಯ ನಾಯುಡು ಅವರಿಗೆ ಸೀಟು ಕೊಡುವುದು ಖಚಿತವಾಗಿದೆ. ಜೆಡಿ–ಎಸ್ (ಮತ್ತು ಬಹುಮಟ್ಟಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಕೂಡಾ) ಉದ್ಯಮಿಗಳಿಗೆ ಸೀಟು ಕೊಡುವುದಾದರೆ ರಾಜ್ಯ ಮೂಲದ ಕುಳಗಳಿಗೆ ಮಾತ್ರ ಸೀಟು ಕೊಡುವ ಇಂಗಿತ ವ್ಯಕ್ತಪಡಿಸಿವೆ. ಉದ್ಯಮಿಗಳಿಗೆ ಸೀಟು ಕೊಡುವ ಬಗ್ಗೆ ಚರ್ಚೆ ಆಗಬೇಕಾದ್ದು ಬರಿಯ ಅವರ ಮೂಲ ನೆಲೆಯ ಬಗ್ಗೆ ಮಾತ್ರವಲ್ಲ. ಅವರು ಎಷ್ಟರ ಮಟ್ಟಿಗೆ ರಾಜ್ಯದ ಜನತೆಯ ಸಾರ್ವಜನಿಕ ಹಿತಾಸಕ್ತಿಗಳ ಬಗ್ಗೆ ಕಾಳಜಿ, ಪರಿಣತಿ ಹೊಂದಿದವರು ಎಂಬುದು ಮುಖ್ಯ ಚರ್ಚೆಯಾಗಬೇಕು. ಇಂತಹ ಹೆಚ್ಚಿನ ಉದ್ಯಮಿಗಳು (ರಾಜ್ಯದವರಿರಲಿ ಅಥವಾ ಹೊರ ರಾಜ್ಯದವರಿರಲಿ) ತಮ್ಮ ಉದ್ಯಮದ ಹಿತಾಸಕ್ತಿಗಳನ್ನು ಕಾಪಾಡಲು, ತಮಗೆ ಅನುಕೂಲಕರವಾದ ನೀತಿ ರೂಪಿಸಲು, ತಮ್ಮ ಕಾನೂನುಬಾಹಿರ ಅಕ್ರಮಗಳ ವಿರುದ್ಧ ಸರಕಾರಿ ಕ್ರಮಗಳಿಂದ ರಕ್ಷಣೆ ಪಡೆಯಲು ಪಾರ್ಲಿಮೆಂಟು ಪ್ರವೇಶ ಪಡೆಯ ಬಯಸುತ್ತಾರೆ. ಇದು ಪ್ರಮುಖ ಚರ್ಚೆಯ ವಿಷಯ ಆಗಬೇಕು.

ರಾಜ್ಯಸಭೆಯ ಅಭ್ಯರ್ಥಿಗಳ ಆಯ್ಕೆಯಲ್ಲಿ ಮೂಡಿಬರುತ್ತಿರುವ ಈ ಮೂರು ಅನಾರೋಗ್ಯಕರ ಅಪಾಯಕಾರಿ ಪ್ರವೃತ್ತಿಗಳ ವಿರುದ್ಧ ರಾಜಕೀಯ ಎಚ್ಚರ ಮೂಡಿಸುವ ಪ್ರಚಾರಾಂದೋಲನ ಅಗತ್ಯ.

ಹೊರ ರಾಜ್ಯದ ರಾಜಕಾರಣಿಗಳಿಗೆ ಮತ್ತು ಉದ್ಯಮಿಗಳಿಗೆ ಸೀಟು ಕೊಡುವ ಪ್ರವೃತ್ತಿ ಬಗ್ಗೆ ರಾಜ್ಯದಲ್ಲಿ ಚರ್ಚೆ ಎದ್ದಿದೆ. ಉದ್ಯಮಿಗಳಿಗೆ ಸೀಟು ಕೊಡುವ ಬಗ್ಗೆ ಚರ್ಚೆ ಆಗಬೇಕಾದ್ದು ಬರಿಯ ಅವರ ಮೂಲ ನೆಲೆಯ ಬಗ್ಗೆ ಮಾತ್ರವಲ್ಲ. ಅವರು ಎಷ್ಟರ ಮಟ್ಟಿಗೆ ರಾಜ್ಯದ ಜನತೆಯ ಸಾರ್ವಜನಿಕ ಹಿತಾಸಕ್ತಿಗಳ ಬಗ್ಗೆ ಕಾಳಜಿ, ಪರಿಣತಿ ಹೊಂದಿದವರು ಎಂಬುದು ಮುಖ್ಯ ಚರ್ಚೆಯಾಗಬೇಕು. ಇಂತಹ ಹೆಚ್ಚಿನ ಉದ್ಯಮಿಗಳು (ರಾಜ್ಯದವರಿರಲಿ ಅಥವಾ ಹೊರ ರಾಜ್ಯದವರಿರಲಿ) ತಮ್ಮ ಉದ್ಯಮದ ಹಿತಾಸಕ್ತಿಗಳನ್ನು ಕಾಪಾಡಲು, ತಮಗೆ ಅನುಕೂಲಕರವಾದ ನೀತಿ ರೂಪಿಸಲು, ತಮ್ಮ ಕಾನೂನುಬಾಹಿರ ಅಕ್ರಮಗಳ ವಿರುದ್ಧ ಸರಕಾರಿ ಕ್ರಮಗಳಿಂದ ರಕ್ಷಣೆ ಪಡೆಯಲು ಪಾರ್ಲಿಮೆಂಟು ಪ್ರವೇಶ ಪಡೆಯ ಬಯಸುತ್ತಾರೆ. ಇದು ಪ್ರಮುಖ ಚರ್ಚೆಯ ವಿಷಯ ಆಗಬೇಕು.

ಪೋಲಿಸ್ ಜೂನ್ 4 ಪ್ರತಿಭಟನೆಗೆ ಸಿಪಿಐ(ಎಂ) ಬೆಂಬಲ

ವೇತನ ತಾರತಮ್ಯ, ರಜೆ ಸೌಲಭ್ಯ, ಹಿರಿಯ ಅಧಿಕಾರಿಗಳ ದುರ್ವರ್ತನೆ ಗೃಹ ಕೃತ್ಯಗಳಿಗೆ ಬಳಕೆ ಮುಂತಾದ ವಿಷಯಗಳ ಬಗ್ಗೆ ಪ್ರತಿಭಟಿಸಿ, ತನ್ನ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ, ಕರ್ನಾಟಕ ಪೋಲೀಸ್ ಮಹಾ ಸಂಘ ಜೂನ್ 4 ರಂದು ಸಾರ್ವತ್ರಿಕ ಸಿ.ಎಲ್. ರಜೆ ಪಡೆಯುವ ಮೂಲಕ ಪ್ರತಿಭಟನೆ ವ್ಯಕ್ತಪಡಿಸಲು ನಿರ್ಧರಿಸಿದೆ. ತಮ್ಮ ಹಕ್ಕೊತ್ತಾಯಗಳನ್ನು ಈಡೇರಿಸಬೇಕೆಂದು ಪ್ರತಿಭಟಿಸುವುದು ಪೋಲೀಸರ ಮೂಲಭೂತ ಹಕ್ಕು. ಅವರ ಈ ಕ್ರಮಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಬೆಂಬಲಿಸಿದೆ. ರಾಜ್ಯ ಸರ್ಕಾರವು ತಕ್ಷಣವೇ ಮಧ್ಯ ಪ್ರವೇಶಿಸಿ ಪೋಲೀಸರ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಒತ್ತಾಯಿಸಿದೆ.

ಪ್ರೊ. ಕೆ.ಎಸ್. ಭಗವಾನ್ ಗೆ ಬೆಂಬಲ

ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಪ್ರೊ. ಕೆ.ಎಸ್. ಭಗವಾನ್‌ರವರು ಸ್ಪರ್ಧಿಸುತ್ತಿದ್ದಾರೆ. ಸಿಪಿಐ(ಎಂ) ರಾಜ್ಯ ಸಮಿತಿ ಅವರಿಗೆ ಬೆಂಬಲ ಸೂಚಿಸಿ ಅವರನ್ನು ಗೆಲ್ಲಿಸಲು ತನ್ನ ಘಟಕಗಳಿಗೆ ಹಾಗೂ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕರೆ ನೀಡಿದೆ.

ಸೋಲಿನಿಂದ ಪಾಠ ಕಲಿಯಲು ನಿರಾಕರಿಸುವ ಕಾಂಗ್ರೆಸ್‌ಗೆ ಸರ್ಜರಿ ಮಾಡುವವರಾರು?

ಎಸ್.ವೈ.ಗುರುಶಾಂತ್

ಇತ್ತೀಚಿಗಿನ ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ನೂತನ ಸರಕಾರಗಳ ಸಚಿವ ಸಂಪುಟಗಳು ಅಸ್ತಿತ್ವಕ್ಕೆ ಬಂದಾಗಿದೆ. ಫಲಿತಾಂಶಗಳು ಪ್ರಕಟಗೊಂಡ ಲಾಗಾಯ್ತಿನಿಂದಲೂ ಇಲ್ಲಿಯವರೆಗೂ 'ಭಾರತ ಕಾಂಗ್ರೆಸ್ ಮುಕ್ತ'ವಾಗಲಿದೆಯೇ ಎಂಬ ಚರ್ಚೆ ನಿಂತಿಲ್ಲ.

ಬಿಜೆಪಿ ಭಾಗಿತ್ವದ ಎನ್.ಡಿ.ಎ. ಸರಕಾರಗಳು ಇರುವುದು 13 ರಾಜ್ಯಗಳಲ್ಲಿ. ಆದರೆ ಇಡೀ ದೇಶವನ್ನೇ ಕಾಂಗ್ರೆಸ್ ಮುಕ್ತ ಅರ್ಥಾತ್ ಎಡ ಶಕ್ತಿಗಳನ್ನೂ ಒಳಗೊಂಡು ಇತರ ಯಾವುದೇ ವಿರೋಧ ಪಕ್ಷಗಳ ಸರಕಾರಗಳೇ ಇಲ್ಲದಂತೆ ನಿರ್ಮಾಮ ಮಾಡುವ ಸರ್ವಾಧಿಕಾರತ್ವದ ಬೆದರಿಕೆಯ ದುರಹಂಕಾರದ ಮಾತುಗಳಿಗೆ ಕೊನೆಯಿಲ್ಲ. ಇಂತಹ ಚರ್ಚೆಗಳು ಬಿಜೆಪಿಯ ರಾಜಕೀಯ ಅಜೆಂಡಾವನ್ನು ಮತ್ತಷ್ಟು ಬಲಗೊಳಿಸುವ ಪ್ರಯತ್ನಗಳು ಎಂಬುದರಲ್ಲಿ ಅನುಮಾನವಿಲ್ಲ. ಅಂತಹವರಿಗೆ ದೇಶದ ಪ್ರಜಾಪ್ರಭುತ್ವದ ಇತಿಹಾಸವಾಗಲೀ, ಜನ ಪರಂಪರೆಯಾಗಲೀ ಗೊತ್ತಿಲ್ಲವೆಂದೇ ಎಚ್ಚರಿಸಬೇಕಾಗುತ್ತದೆ.

ಹಾಗೆಯೇ, ಈ ಸುತ್ತಿನ ಚುನಾವಣೆಯಲ್ಲಿ ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್‌ನ್ನು ಜನತೆ ಸೋಲಿಸಿದ್ದಾರೆ. ಇದೂ ಕೂಡ ರಾಜಕೀಯ ವಲಯಗಳಲ್ಲಿ ಭಾರೀ ಚರ್ಚೆಯನ್ನು ಹುಟ್ಟು ಹಾಕಿದೆ. ಇದರಿಂದಾಗಿ ದೇಶದಲ್ಲಿ ಕಾಂಗ್ರೆಸ್ ಕೇವಲ 6 ರಾಜ್ಯಗಳಲ್ಲಿ ಅಧಿಕಾರದಲ್ಲಿ ಮಾತ್ರ ಉಳಿದಂತೆ ಆಗಿದೆ. ಅದರಲ್ಲಿಯೂ ಕರ್ನಾಟಕವೊಂದೇ ರಾಜಕೀಯವಾಗಿ ಮತ್ತು 'ಸಂಪನ್ಮೂಲ'ಗಳ ಲೆಕ್ಕದಲ್ಲಿಯೂ ಅವರಿಗೆ ದೊಡ್ಡ ರಾಜ್ಯ. ಕರ್ನಾಟಕದಲ್ಲಿಯೂ ಮೂರು ವರುಷಗಳನ್ನು ಪೂರೈಸಿರುವ, ಮುಂದಿನ ಚುನಾವಣೆ ಎದುರಿಸಬೇಕಿರುವ ಕಾಂಗ್ರೆಸ್‌ಗೆ ಇದು ಸವಾಲಿನ ಸಂದರ್ಭವಾಗಿಯೂ ಇದೆ. ಒಟ್ಟಾರೆ ಕಾಂಗ್ರೆಸ್ ಮನಶ್ಚೇತನಗೊಳ್ಳುವುದೇ? ಈ ಕುಸಿತ ಮತ್ತಷ್ಟು ಪ್ರಪಾತಕ್ಕೆ ಹೋಗದಂತೆ ತಡೆಯಬಹುದೇ? ಆ ಸಾಮರ್ಥ್ಯ ನಾಯಕತ್ವಕ್ಕೆ ಇದೆ–

ಪುಟ 4 ಕ್ಕೆ

ಸಿಪಿಐ(ಎಂ) ಪಕ್ಷದ ಕಛೇರಿ ಮತ್ತು ಕಾರ್ಯಕರ್ತರ ಮೇಲೆ
ಬಿಜೆಪಿ–ಆರೆಸ್ಸೆಸ್ ಕ್ರೂರ ದಾಳಿಗೆ ವ್ಯಾಪಕ ಖಂಡನೆ







ಐದು ರಾಜ್ಯಗಳಲ್ಲಿ ವಿಧಾನ ಸಭಾ ಚುನಾವಣೆ ಮುಗಿದ ನಂತರ ಬಿಜೆಪಿ ಮತ್ತು ಆರ್.ಎಸ್. ಎಸ್ ಗೂಂಡಾ ದಾಳಿ ಭಯಾನಕ ವಾತಾವರಣ ಸೃಷ್ಟಿಸುತ್ತಿದ್ದು, ಅಧಿಕಾರ ಬಲ, ತೋಳ್ಬಲ ಮತ್ತು ಹಣಬಲದಿಂದ ಕಾನೂನು ಸುವ್ಯವಸ್ಥೆಯನ್ನು ಧಿಕ್ಕರಿಸಿ ವ್ಯಾಪಕ ಹಿಂಸಾಚಾರ ನಡೆಸುತ್ತಿದೆ.

ಮೇ 23ರಂದು ದೆಹಲಿಯಲ್ಲಿರುವ ಸಿಪಿಐ(ಎಂ) ಕೇಂದ್ರ ಕಛೇರಿ ಎಕೆಜಿ ಭವನದ ಮೇಲೆ ತನ್ನ ಕೇಸರಿ ಗೂಂಡಾಪಡೆಯಿಂದ ದಾಳಿ ನಡೆಸಿದೆ. ರಾಜಕೀಯ ಮತ್ತು ಸೈದ್ಧಾಂತಿಕ ದ್ವೇಷದಿಂದ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಹಾಗೂ ವಿರೋಧ ಪಕ್ಷಗಳ ಕಛೇರಿಗಳ ಮೇಲೆ ದಾಳಿ ಮಾಡುವುದು, ಕಾರ್ಯಕರ್ತರ ಮತ್ತು ಹಿತೈಷಿಗಳ ಮೇಲೆ ಎಗ್ಗಿಲ್ಲದೇ ಎರಗಿ ಕೊಲೆ ಮಾಡುತ್ತಿರುವ ಅನಾಗರಿಕ ಘಟನೆಗಳು ಸಾಗುತ್ತಿವೆ. ಸಿಪಿಐ(ಎಂ) ಘಟಕಗಳು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ದಾಳಿ ಖಂಡಿಸಿ ಪ್ರತಿಭಟನೆ ನಡೆಸಿವೆ.

ಬೆಂಗಳೂರು :

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಮೇ 24ರಂದು ಸಿಪಿಐ(ಎಂ) ನೂರಾರು ಕಾರ್ಯರ್ತರು ಪ್ರತಿಭಟನೆ ನಡೆಸಿ ಸಂಘಪರಿವಾರದ ಧಾಳಿಯನ್ನು ಖಂಡಿಸಿದರು. ಪ್ರತಿಭಟನೆಯಲ್ಲಿ ಬೆಂ. ಉತ್ತರ ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಸಮಿತಿ ಸದಸ್ಯರಾದ ಕೆ.ಎಸ್.ಲಕ್ಷ್ಮಿ ಮುಂತಾದ ಮುಖಂಡರು ಭಾಗವಹಿಸಿದ್ದರು.

ತುಮಕೂರು :

ನಗರದ ಬಿ.ಎಸ್.ಎನ್.ಎಲ್. ಕಛೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಉಮೇಶ್, ಮುಖಂಡರಾದ ಲೋಕೇಶ್, ರಾಮಚಂದ್ರು, ಶ್ರೀಧರ್, ನಗರ ಕಾರ್ಯದರ್ಶಿ ಎಸ್. ರಾಘವೇಂದ್ರ, ಇ. ಶಿವಣ್ಣ, ಜಿ.ದರ್ಶನ್, ಮಂಜು, ಮುತ್ತುರಾಜ್, ಉಬೇದುಲ್ಲಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ದಾವಣಗೆರೆಯಲ್ಲಿ ಎಡಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಲಬುರಗಿ ಜಿಲ್ಲೆ ಹಾಗೂ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಭೂತ ದಹನ ಮಾಡಿ ಪ್ರತಿಭಟಿಸಿದರು.





ಸೋಲಿನಿಂದ ಪಾಠ ಕಲಿಯಲು ನಿರಾಕರಿಸುವ........

ಪುಟ 3 ರಿಂದ

ಯೇ? ಹೀಗೆ ಪ್ರಶ್ನೆಗಳನ್ನು ವ್ಯಕ್ತಿನಿಷ್ಠಗೊಳಿಸುತ್ತಲೂ ಗೋಜಲಿನ ಸ್ಥಿತಿಯೂ ಎದುರಾಗಿವೆ. ಅಂದರೆ ಒಟ್ಟಾರೆ ಪ್ರಮುಖ ಅಂಶವೆಂದರೆ ಕಾಂಗ್ರೆಸ್ ಈ ಸೋಲುಗಳಿಂದ ಪಾಠ ಕಲಿಯುವುದೇ? ಎಂಬುದು.

'ಸೋಲಿನ ಕುರಿತು ಪರಾಮರ್ಶೆ ಮಾಡುತ್ತೇವೆ. ಜನ ಸೇವೆಯಲ್ಲಿ ತೊಡಗುತ್ತೇವೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ಮುಂತಾದ ನಾಯಕರು ಹೇಳಿದರು. ಪ್ರಶ್ನೆಯೆಂದರೆ ಕಾಂಗ್ರೆಸ್ ಪಕ್ಷ ನಿಜಕ್ಕೂ ಸೋಲಿನಿಂದ ಪಾಠ ಕಲಿಯುವುದೇ? ಕಲಿತಿದೆಯೇ? ಹಾಗೆ ಕಲಿತ ಇತಿಹಾಸ ಕಾಂಗ್ರೆಸ್ಸಿಗೆ ಇಲ್ಲ. ಅದು ಬೇಕಾಗಿಯೂ ಇಲ್ಲ. ಜನತೆಯ ತೀರ್ಪನ್ನು ಗೌರವಿಸಿ ಬಂಡವಾಳಗಾರರ, ಭೂಮಾಲಕರ ಪರವಾದ, ಜನದ್ರೋಹಿ ದುರಾಡಳಿತ ನೀತಿಗಳನ್ನು ಅದು ಎಂದೂ ಕೈ ಬಿಡಲೇ ಇಲ್ಲ. ಈಗಲೂ ಇಂದು ಹೈಕಮಾಂಡ್‌ನ ಕೇಂದ್ರದ ಸಭೆ ಸೋಲಿನ ಪರಾಮರ್ಶೆಗೆಂದು ದೆಹಲಿಯಲ್ಲಿ ಸೇರುತ್ತಿದೆ. ಅಲ್ಲೂ ಖಂಡಿತ ಅದೇ ತೇಲು ರಾಗ. ಬೀಸೋ ದೊಣ್ಣೆ ತಪ್ಪಿದರೆ ನೂರು ವರುಷಗಳ ಆಯುಷ್ಯ ಎಂಬ ತತ್ವದಲ್ಲೇ ಅದಕ್ಕೆ ನಂಬಿಕೆ.

ನಿಜಕ್ಕೂ ಹಾಗೆ ನೋಡಿದರೆ ಈ ಚುನಾವಣಾ ಫಲಿತಾಂಶದ ಬಳಿಕ ಕರ್ನಾಟಕದ ಕಾಂಗ್ರೆಸ್ ನಾಯಕರು ಹೆಚ್ಚು ಮಾತನಾಡ ತೊಡಗಿದ್ದಾರೆ. ಮೂರು ವರುಷಗಳ ಆಡಳಿತ ಇಲ್ಲಿಯವರೆಗೂ ಅಹಿಂದ ಮಂತ್ರದ ಮಂಕುಬೂದಿ ಎರಚುತ್ತಾ ಸಾಗಿಸಿದ್ದಾಯ್ತು, ಮುಂದೇನು? ರಾಜ್ಯದಲ್ಲಿ ಹಲವು ಗುಂಪುಗಳಾಗಿ, ಅಧಿಕಾರ ವಂಚಿತರ ಅತೃಪ್ತಿ ಬಹಿರಂಗ ಆಕ್ರೋಶವಾಗಿ ಹರಿದಿರುವ ಕಾಂಗ್ರೆಸ್‌ನಲ್ಲಿಯೂ ವಿಭಿನ್ನ ಪ್ರತಿಕ್ರಿಯೆಗಳನ್ನು ಹೊರಡಿಸಿದೆ. ಈ ರಾಜ್ಯಗಳ ಚುನಾವಣಾ ಫಲಿತಾಂಶದ ಸೋಲು ಹಾಗೂ ಕರ್ನಾಟಕ ಸರಕಾರದ ಭವಿಷ್ಯದ ಮೇಲೆ ಪರಿಣಾಮ ಕುರಿತು ಪ್ರತಿಕ್ರಿಯಿಸಿದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆಯವರ ಮಾತುಗಳು ಗಮನಾರ್ಹ. 'ಸರಿಯಾಗಿ ರಿಪೇರಿ ಮಾಡಬೇಕಿದೆ' ಎಂದದ್ದು. ಇದು ರಾಜ್ಯದ ವಿದ್ಯಮಾನಗಳನ್ನೇ ಆಧರಿಸಿದೆ ಎಂಬ ವ್ಯಾಖ್ಯಾನವೂ ಇದೆ. ರಿಪೇರಿ ಅಂದರೆ ಏನನ್ನು? ಎಲ್ಲಿ? ಎಂಬ ಕುತೂಹಲ ಹುಟ್ಟಿಸಿದೆ. ಹಾಗೆಯೇ ದಿಗ್ವಿಜಯ್ ಸಿಂಗ್ ಸಹ ಕಾಂಗ್ರೆಸ್‌ನಲ್ಲಿ ತಳದಿಂದಲೇ ಮೇಲಿನ ವರೆಗೆ ಬದಲಾವಣೆ ಮಾಡಬೇಕಾದ ಅಗತ್ಯವನ್ನು ಹೇಳಿದ್ದಾರೆ. ಆದರೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 'ಸೋಲು ನಿರೀಕ್ಷಿತ. ಇದು ಸಾಮಾನ್ಯ ವಿಷಯ. ಅಸ್ಸಾಂನಲ್ಲಿ 15 ವರ್ಷಗಳ ಆಡಳಿತದ ಬಳಿಕ ಅಧಿಕಾರ ವಿರೋಧಿ ಮನೋಭಾವದಿಂಧ ಸೋತಿದ್ದರೆ ಕೇರಳದಲ್ಲಿ ಐದು ವರುಷಗಳಿಗೆ ಒಮ್ಮೆ ಬದಲಾಗುವ ಸಹಜ ಪ್ರಕ್ರಿಯೆಯಂತೆ ಆಗಿದೆ. ಪರಾಮರ್ಶೆ ಮಾಡುವೆವು' ಎಂದು ತಣ್ಣಗೆ ಹೇಳಿ 'ಸೋಲು ಅದರ ಪರಿಣಾಮ ತಮಗೇನೂ ಅನ್ವಯಿಸುವುದಿಲ್ಲ' ಎನ್ನುವ ಇಂಗಿತ ನೀಡಿದ್ದಾರೆ. ಜನರ ತೀರ್ಪಿನಿಂದ ಕಲಿಯುವುದು ಅಂತಹದ್ದೇನೂ ಇಲ್ಲವೆನ್ನುವಂತೆ ಮಾತು ಮುಗಿಸಿದ್ದಾರೆ.

ವಿಮರ್ಶೆ ಮಾಡಿಕೊಳ್ಳುವುದು, ಕಲಿಯುವುದು–ಬಿಡುವುದು ಅವರಿಗೆ, ಅವರ ಪಕ್ಷಕ್ಕೆ ಬಿಟ್ಟ ವಿಷಯ. ಮುಖ್ಯ ವಿಷಯ ಈ ಸೋಲಿನ ಬಳಿಕ ರಾಜ್ಯದ ಕಾಂಗ್ರೆಸ್ ಸರಿದಾರಿಗೆ ಬರಬಹುದೇ ಇಲ್ಲ ಒಳ ಜಗಳ, ಗುಂಪುಗಾರಿಕೆ, ಬದಲಾಗದ ನೀತಿಗಳ ಶಿಥಿಲ ಆಡಳಿತ ಮುಂದುವರಿಯುವುದೇ ಎಂಬುದಾಗಿದೆ. ಖರ್ಗೆಯವರ ಮಾತುಗಳನ್ನು ಕೇಳಿದರೆ ಮುಂದೆ ಕಾಂಗ್ರೆಸ್ ಪಕ್ಷದಲ್ಲಿ ಈಗಾಗಲೇ ಹೆಪ್ಪುಗಟ್ಟಿರುವ ಅತೃಪ್ತಿ, ಭಿನ್ನಮತಗಳು ಮತ್ತೇ ಭುಗಿಲೇಳಬಹುದು. ಹೈಕಮಾಂಡ್ ಏನನ್ನಾದರೂ ಮಾಡಬಹುದು. ಆಗಲೇ ಸಿದ್ಧರಾಮಯ್ಯನವರ ಅಧಿಕಾರದ ಅವಧಿ ಮುಗಿದಾಗಿದೆ! ಜಾಗ ಖಾಲಿ ಮಾಡಿ ಎಂಬ ಬೇಡಿಕೆಗೆ ಮತ್ತಷ್ಟೂ ಚಾಲನೆ ಪಡೆಯಬಹುದು. ಮೇಲಾಗಿ ಮಂತ್ರಿ ಮಂಡಲದ ವಿಸ್ತರಣೆಗೆ ಮುಹೂರ್ತಗಳನ್ನು ತೋರಿಸುತ್ತಲೇ ಕಾಲ ತಳ್ಳಲಾಗುತ್ತಿದೆ ಹೊರತು ಖಚಿತ ಕ್ರಮ ಸಾಧ್ಯವೇ ಆಗುತ್ತಿಲ್ಲ. ಈ ಬಗ್ಗೆ ಹಾಲಿ ಮತ್ತು ಸಚಿವಾಕಾಂಕ್ಷಿಗಳ ನಡುವೆ ತೀವ್ರ ಅತೃಪ್ತಿಯೂ ಹೆಚ್ಚುತ್ತಿದೆ. ಕೆಲವು ಸಚಿವರ ಹೇಳಿಕೆಗಳೂ ಅನಿಯಂತ್ರಿತವೆಂಬಂತೆ, ಅದಕ್ಕೆ ಸ್ವಪಕ್ಷೀಯರಿಂದಲೇ ವಿರೋಧ ವ್ಯಕ್ತವಾಗುವುದು, ಹಿರಿಯ ನಾಯಕರು ಸಹ ತಮ್ಮ ಅತೃಪ್ತಿಗಳು, ಸರಕಾರದ ಬಗೆಗಿನ ಟೀಕೆಗಳನ್ನು ಸಾರ್ವಜನಿಕವಾಗಿಯೇ ಎಗ್ಗಿಲ್ಲದೇ ಮಾಡುತ್ತಿದ್ದಾರೆ. ಹೈಕಮಾಂಡ್ ವರ್ತನೆಗಳು ಸಹ ಇಂತಹವುಗಳಿಗೆ ಕುಮ್ಮಕ್ಕು ನೀಡುತ್ತಿವೆ. ರಾಜ್ಯ ಸಭೆಗೆ ಅಭ್ಯರ್ಥಿಗಳ ಆಯ್ಕೆಯೂ ಈ ಕದನವನ್ನು ಇಲ್ಲವೇ ಅಂತರವನ್ನು ಹೆಚ್ಚಿಸಲೂ ಬಹುದು.

ಕಾಂಗ್ರೆಸ್ ಸರಕಾರದ ವೈಫಲ್ಯದ ವಿರುದ್ಧ ಬಿಜೆಪಿ–ಸಂಘಪರಿವಾರ ನಿತ್ಯವೂ ಹತ್ತು ರೂಪಗಳಲ್ಲಿ ದಾಳಿ ನಡೆಸುತ್ತಾ ತನ್ನ ರಾಜಕೀಯ, ಸಂಘಟನಾ ಬಲವನ್ನು ವಿಸ್ತರಿಸುವ ಪ್ರಯತ್ನದಲ್ಲಿ ಮಗ್ನವಾಗಿದೆ. ಮೂರನೆಯ ಸೆಕ್ಯುಲರ್ ಶಕ್ತಿಗಳ ದುರ್ಬಲತೆಗಳನ್ನೇ ಬಿಜೆಪಿ ಬಳಸಿ ತಾನೇ ಪರ್ಯಾಯವೆಂದೂ ಬಿಂಬಿಸಿಕೊಳ್ಳುತ್ತಿದೆ. ಇದು ರಾಜ್ಯದಲ್ಲಿ ಮೂಲ ನೆಲೆಯಲ್ಲಿ ಗಂಭೀರ ರಾಜಕೀಯ ಬೆಳವಣಿಗೆಗಳನ್ನು ಕಾಣುತ್ತಿರುವ ಸಮಯ. ಇವಾವುಗಳ ಪರಿವೆಯೇ ಇಲ್ಲದ ಕಾಂಗ್ರೆಸ್ ನಾಯಕರ ವರ್ತನೆ ಹೊಣೆಗೇಡಿತನದ್ದು ಎಂಬುದರಲ್ಲಿ ಅನುಮಾನವಿಲ್ಲ. ಇದರಲ್ಲಿ ಬಲಿಯಾಗುವುದು ಸಾಮಾನ್ಯ ಜನತೆ. ಅಸ್ಸಾಂನಲ್ಲಾದಂತೆ ಇಲ್ಲಿಯೂ ಆದರೆ ಗತಿಯೇನು?

ಕಾಂಗ್ರೆಸ್‌ನ ಒಟ್ಟು ಸ್ಥಿತಿಯು ರಾಜ್ಯದಲ್ಲಿ ಕೆಲವು ಬಲಿಷ್ಠ ನಾಯಕರ ಬಲದ ರಾಜಕಾರಣವನ್ನು ಬಲಗೊಳಿಸಬಹುದು. ಖರ್ಗೆಯವರು ಹೇಳಿದಂತೆ ಮೇಜರ್ ಸರ್ಜರಿ ಆಗಬೇಕು ನಿಜ. ಆದರೆ ಎಲ್ಲಿ? ಯಾರಿಗೆ? ಅದನ್ನು ಮಾಡುವವರು ಯಾರು? ಶಸ್ತ್ರಚಿಕಿತ್ಸಕನಿಗೇ ಚಿಕಿತ್ಸೆ ಮಾಡಬೇಕಾಗಿರುವಾಗ! ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ.

ಇನ್ನಾದರೂ ರಾಜ್ಯದ ಕಾಂಗ್ರೆಸ್ ಸರಕಾರ ಮುಂದಿನ ಅವಧಿಯಲ್ಲಾದರೂ ಜನತೆಯ ಬವಣೆಗಳನ್ನು ನೀಗುವತ್ತ ಕ್ರಮಗಳನ್ನು ವಹಿಸಲಿ. ಈಗಲೂ ಪಾಠ ಕಲಿಯದಿದ್ದರೆ ಜನ ಪಾಠ ಕಲಿಸುವುದು ಖಂಡಿತ. ಆದರೆ ಕರ್ನಾಟಕ ಅಸ್ಸಾಂ ಆಗುವುದು ಬೇಡ.

PEÃ½ZÀÄÝ

ತತ್ವಜ್ಞಾನಿ ಸೇಂಟ್ ಅಗಸ್ಟೈನ್ ಹೇಳುವ ಘಟನೆಯೊಂದನ್ನು ನೋಮ್ ಚಾಮ್ಸ್ಕಿ ಉಲ್ಲೇಖಿಸುತ್ತಾರೆ. ಗ್ರೀಕ್ ಚಕ್ರವರ್ತಿ ಅಲೆಕ್ಸಾಂಡರ್ ಕಡಲುಗಳ್ಳನೊಬ್ಬನನ್ನು ಕೇಳುತ್ತಾನೆ: 'ಈ ಕಡಲಿನ ಮೇಲೆ ಅತ್ಯಾಚಾರ ಮಾಡಲು ನಿನಗೆಷ್ಟು ಧೈರ್ಯ' ಅದಕ್ಕೆ ಕಡಲುಗಳ್ಳನ ಉತ್ತರ: 'ಇಡೀ ಜಗತ್ತಿನ ಮೇಲೆ ಅತ್ಯಾಚಾರ ಮಾಡಲು ನಿನಗೆಷ್ಟು ಧೈರ್ಯ' ನಾನು ಒಂದು ಪುಟ್ಟ ಹಡಗನ್ನಿಟ್ಟುಕೊಂಡು ಈ ಕೆಲಸ ಮಾಡಿದರೆ ನನ್ನನ್ನು ಕಡಲುಗಳ್ಳ ಅನ್ನುತ್ತಾರೆ; ಅದೇ ನೀನು ಒಂದು ದೊಡ್ಡ ಹಡಗುಪಡೆಯನ್ನೇ ಇಟ್ಟುಕೊಂಡು ಇದೇ ಕೆಲಸ ಮಾಡಿದರೆ ನಿನ್ನನ್ನು ಚಕ್ರವರ್ತಿ ಅನ್ನುತ್ತಾರೆ!?

ಚಾಮ್ಸ್ಕಿಯವರ ಪ್ರಕಾರ, 'ಶಾಂತಿಸ್ಥಾಪನೆ' 'ಭಯೋತ್ಪಾದನೆಯ ವಿರುದ್ಧ ಯುದ್ಧ' ಮುಂತಾದ ಮುಖವಾಡಗಳನ್ನು ಬಳಸಿ ಅಮೆರಿಕ ಮಾಡುತ್ತಿರುವ ಕೆಲಸ ಕೂಡ ಇದೇ! ಇವತ್ತು ಜಗತ್ತಿನ ಅತ್ಯಂತ ಪ್ರಭಾವಶಾಲಿ ಚಿಂತಕರಾದ ಚಾಮ್ಸ್ಕಿಯವರ ಇತ್ತೀಚಿನ ಪುಸ್ತಕ 'ಬಿಕಾಸ್ ವಿ ಸೇ ಸೋ' (ಪ್ರ: ಹ್ಯಾಮಿಷ್ ಹ್ಯಾಮಿಲ್ಟನ್, ಪೆಂಗ್ವಿನ್), ಕಳೆದ ಐವತ್ತು ವರ್ಷಗಳಲ್ಲಿ ಜಗತ್ತಿನ ಮೇಲೆ ತನ್ನ ಹಿಡಿತ ಸಾಧಿಸಲು ಅಮೆರಿಕ ಮಾಡಿರುವ ಹೊಂಚು, ದಬ್ಬಾಳಿಕೆ, ಹುಸಿಪ್ರಚಾರಗಳ ಭಯಾನಕ ಮುಖಗಳನ್ನು ಅಂಕಿ–ಅಂಶ, ಆಧಾರಗಳ ಮೂಲಕ ತೋರಿಸಿಕೊಡುತ್ತದೆ.

ಒಂದು ನಿರ್ದಿಷ್ಟ ಸಿದ್ಧಾಂತವನ್ನು, ಅದರಲ್ಲೂ ಕಮ್ಯುನಿಸಮ್ಮನ್ನು ಒಪ್ಪದಿದ್ದಾಗ ಒಂದು ದೇಶ ಹೇಗೆ ವರ್ತಿಸಬಹುದು? ಆ ಸಿದ್ಧಾಂತದ ದೋಷಗಳನ್ನು ಎಲ್ಲರಿಗೆ ಮನದಟ್ಟು ಮಾಡಿಕೊಡಬಹುದು; ತನ್ನ ದೇಶ ಆ ಸಿದ್ಧಾಂತದತ್ತ ವಾಲದಂತೆ ಮಾಡಬಹುದು? ಇತ್ಯಾದಿ. ಆದರೆ ಅಮೆರಿಕ ಹಾಗಲ್ಲ. ಅದು ಮಾನವ ಹಕ್ಕುಗಳ ರಕ್ಷಣೆಯ ವಕ್ತಾರನಂತೆ ಯಾವುದೋ ನೆವದಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಪ್ರವೇಶ ಮಾಡಲೆತ್ನಿಸುತ್ತದೆ. ತನ್ನ ಪಕ್ಕದ ಕ್ಯೂಬಾವನ್ನು ತೆಕ್ಕೆಗೆ ತೆಗೆದುಕೊಳ್ಳಲು, ಕ್ಯೂಬಾದ ನಾಯಕ ಫಿಡೆಲ್ ಕ್ಯಾಸ್ಟ್ರೋರನ್ನು ಮುಗಿಸಲು ಅಮೆರಿಕದ ಸಿಐಎ ಮಾಡಿರುವ ಹೊಂಚುಗಳು ಒಂದೆರಡಲ್ಲ.

– ನಟರಾಜ್ ಹುಳಿಯಾರ್

ಎಡಪಕ್ಷಗಳು ಪರ್ಯಾಯ ರಾಜಕೀಯ ಶಕ್ತಿಯಾಗಿ ಹೊಮ್ಮಬೇಕು: ಶ್ರೀರಾಮರೆಡ್ಡಿ



ರೈತರು ಕಾರ್ಮಿಕರು, ಜನಸಾಮಾನ್ಯರ ಬದುಕನ್ನು ಬೀದಿಪಾಲು ಮಾಡುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಜನಸಾಮಾನ್ಯರ ನೀತಿಗಳಿಗಾಗಿ ಪ್ರಬಲ ರಾಜಕೀಯ ಶಕ್ತಿಯನ್ನು ರಾಜ್ಯದಲ್ಲಿ ಬಲಗೊಳಿಸಲು ಪರ್ಯಾಯ ರಾಜಕೀಯ ಶಕ್ತಿಯಾಗಿ ಎಡಪಕ್ಷಗಳು ಮುಂದಾಗಬೇಕಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಕರೆ ನೀಡಿದರು.

ಅವರು ತುಮಕೂರು ನಗರದ ರಂಗತಾಲೀಮು ಕೇಂದ್ರದಲ್ಲಿ ಮೇ 21ರಂದು ಹಮ್ಮಿಕೊಂಡಿದ್ದ ಎಡಪಕ್ಷಗಳ ರಾಜಕೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ ದೇಶದಲ್ಲಿ ಅಧಿಕಾರಕ್ಕೆ ಬಂದ ನರೇಂದ್ರಮೋದಿ ಸರ್ಕಾರ ಜನತೆಯಲ್ಲಿ ಸಾಕಷ್ಟು ಭರವಸೆಗಳನ್ನು ನೀಡಿ ಕುರ್ಚಿಗಿಟ್ಟಿಸಿಕೊಂಡು ಬಿಜೆಪಿಯು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅನುಸರಿಸಿದ ನೀತಿಗಳನ್ನು ಬಲು ವೇಗವಾಗಿ ಜಾರಿಗೆ ತರುತ್ತಿದೆ, ನವಉದಾರವಾದಿ ಆರ್ಥಿಕ ನೀತಿಗಳು ಮತ್ತು ದೇಶದ ಐಕ್ಯತೆಯನ್ನು ಒಡೆಯುತ್ತಿರುವ ಕೋಮುವಾದಿ ಶಕ್ತಿಗಳ ಆಕ್ರಮಣದಿಂದ ದೇಶದ ಜನತೆಯ ಸಮಸ್ಯೆಗಳನ್ನು ಮರೆಮಾಚಲಾಗುತ್ತಿದೆ ಎಂದು ಹೇಳಿದರು.

ಸಂವಿಧಾನದ ಆಶಗಳ ಮೇಲೆ ದಾಳಿ ನಡೆ–ಯುತ್ತಿದ್ದು ಜನರು ತಿನ್ನುವ ಆಹಾರ ಪದ್ದತಿ ಹೇಗಿರಬೇಕು, ಉಡುವ ಬಟ್ಟೆ ಯಾವುದು, ಪಡೆಯಬೇಕಾದ ಶಿಕ್ಷಣ ಯಾವುದು, ಯಾವ ರೀತಿಯಾಗಿ ಮಾತನಾಡಬೇಕು ಎನ್ನುವ ಎಲ್ಲ ಅಂಶಗಳ ಮೇಲೂ ದಾಳಿಗಳು ನಡೆಯುತ್ತಿದೆ. ಅನಾರೋಗ್ಯ ಪೀಡಿತ ಜನರು ಔಷಧಿಗಳನ್ನು ಕೊಂಡುಕೊಳ್ಳಲಾರದ ಸ್ಥಿತಿ ನಿರ್ಮಾಣವಾಗುತ್ತಿದೆ ಇದು ನರೇಂದ್ರಮೋದಿಯವರ ಆಡಳಿತ ವೈಖರಿಯಾಗಿದೆ.

ಅಹಿಂದಪರ ಎಂದು ಹೇಳಿಕೊಳ್ಳುವ ರಾಜ್ಯದ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ರೈತ ವಿರೋಧಿ ನೀತಿಗಳನ್ನು ಜಾರಿಗೆತರುತ್ತಿದೆ. ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿದ್ದು ಇದನ್ನು ತಡೆಯುವಲ್ಲಿ ಸಿದ್ದರಾಮಯ್ಯ ಸರ್ಕಾರ ಮತ್ತು ಗೃಹಮಂತ್ರಿ ಪರಮೇಶ್ವರ್ ವಿಫಲರಾಗಿದ್ದಾರೆ ಎಂದು ಸರ್ಕಾರಗಳ ಜನವಿರೋಧಿ ನೀತಿಗಳನ್ನು ಜನತೆಯ ಮುಂದೆ ತಿಳಿಸಲು ಎಡಪಕ್ಷಗಳು ರಾಜಕೀಯ ಪ್ರಚಾರಾಂದೋಲನವನ್ನು ಹಮ್ಮಿಕೊಂಡಿದ್ದು ಜೂನ್‌ನಲ್ಲಿ ರಾಜ್ಯಮಟ್ಟದ ರ್‍ಯಾಲಿ ನಡೆಸಲಾಗುವುದು ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶೀ ಮಂಡಳಿ ಸದಸ್ಯ ಎನ್. ಶಿವಣ್ಣ ಮಾತನಾಡಿ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ಜನರ ಸಮಸ್ಯೆಗಳನ್ನು ಬಗೆಹರಿಸುವ ಬದಲು ಸರ್ಕಾರದ ನೀತಿಗಳ ವಿರುದ್ದ ಮಾತನಾಡುವವರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಲಾಗುತ್ತಿದ್ದು ಎಂದರು.

ಎಸ್‌ಯುಸಿಐ(ಸಿ)ನ ರಾಜ್ಯ ಸಮಿತಿ ಸದಸ್ಯ ಕೆ. ಸೋಮಶೇಖರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಂಬೇಗೌಡ, ಎಸ್‌ಯುಸಿಐ(ಸಿ) ನಗರ ಕಾರ್ಯದರ್ಶಿ ಎಸ್.ಎನ್.ಸ್ವಾಮಿ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಸೈಯದ್‌ಮುಜೀಬ್ ಸಿಪಿಐ ಗಿರೀಶ್ ಉಪಸ್ಥಿತರಿದ್ದರು.

ವರದಿ : ಎಸ್. ರಾಘವೇಂದ್ರ

ರಾಜ್ಯದ ವಿವಿದೆಡೆ ನಡೆದ ಎಡ ಪಕ್ಷಗಳ ಸಮಾವೇಶ

ದಾವಣಗೆರೆ:

ಪ್ರಧಾನಿಯಾದ ನಂತರ 37 ಬಾರಿ ವಿದೇಶಗಳಿಗೆ ಬೇಟಿ ಕೊಟ್ಟು, ದೇಶದಲ್ಲಿ 219 ಮತ್ತು ವಿದೇಶದಲ್ಲಿ 140 ಕ್ಕೂ ಅಧಿಕ ಭಾಷಣ ಮಾಡಿದ ಪ್ರಧಾನಿ ಮೋದಿಯವರಿಗೆ 250ಕ್ಕೂ ಹೆಚ್ಚಿನ ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಒಂದೂ ಜಿಲ್ಲೆಗೆ ಭೇಟಿ ಮಾಡಿಲ್ಲ, ಬರ ಪೀಡಿತ ಜನರ ಬಗ್ಗೆ ಭಾಷಣ ಮಾಡಿಲ್ಲ. ಇದು ಮೋದಿಯವರ ವಿಕಾಸ ಪರ್ವ. ರಾಜ್ಯದಲ್ಲಿ 30 ಕೆ.ಜಿ ಅಕ್ಕಿ ಕೊಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಸರ್ಕಾರ ರೇಷನ್ ಕಡಿತ ಮಾಡಿದೆ. ಲೋಕಾಯುಕ್ತವನ್ನು ಬಲಗೊಳಿಸುವ ಬದಲು ಭ್ರಷ್ಟ ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಹಿತವಾಗುವ ಎ.ಸಿ.ಬಿ ರಚನೆ ಮಾಡಿರುವುದು ಖಂಡನೀಯ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ॥ಕೆ. ಮಹಾಂತೇಶ್ ಹೇಳಿದರು.

ಅವರು ಮೇ 25ರಂದು ಎಡಪಕ್ಷಗಳ ಜನಾಂದೋಲನ ಹಾಗೂ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನ ಜಾರಿಗೆ ಮತ್ತು ಬರ ನಿರ್ವಹಣೆಗೆ ತಾತ್ಸಾರ ಮಾಡಿದ ಬಗ್ಗೆ ಸರ್ವೋಚ್ಚ ನ್ಯಾಯಲಾಯದಿಂದ ತಪರಾಕಿ ಹಾಕಿಸಿಕೊಂಡಿರುವುದು ಮೋದಿ ಸರ್ಕಾರದ ವಿನಾಶ ಪರ್ವದ 2 ವರ್ಷಗಳ ಸಾಧನೆ. ಚುನಾವಣೆ ಬಂದಾಗ ಬಿ.ಜೆ.ಪಿ ಸೋಲಿಸಲು ಎಡ ಪಕ್ಷಗಳ ಬೆಂಬಲ ಬಯಸುವ ಕಾಂಗ್ರೆಸ್ ಪಕ್ಷವು ಜನ ಪರ ನೀತಿಗಳನ್ನು ಜಾರಿಗೆ ತಾರದೆ ಇರುವುದು ಸರಿಯಲ್ಲ ಎಂದು ಸಿ.ಪಿ.ಐ ಪಕ್ಷದ ಮುಖಂಡರಾದ ಡಾ॥ ಸಿದ್ದನಗೌಡ ಪಟೀಲ್ ತಿಳಿಸಿದರು.

ಸಮಾವೇಶವನ್ನು ಉದ್ದೇಶಿಸಿ ಎಸ್.ಯು.ಸಿ.ಐ(ಸಿ) ಪಕ್ಷದ ರಾಜ್ಯ ಮುಖಂಡರಾದ ಕಾಂ॥ ಸೋಮಶೇಖರ್ ಮತ್ತು ಸಿ.ಪಿ.ಐ–ಎಂ.ಎಲ್ ಪಕ್ಷದ ಕಾಂ॥ ಮಾರುತಿ ಸಭೆಯಲ್ಲಿ ಮಾತನಾಡಿದರು ಸಭೆಯ ಅಧ್ಯಕ್ಷತೆಯನ್ನು ಸಿ.ಪಿ.ಐ ಪಕ್ಷದ ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಕಾಂ॥ಹೆಚ್.ಕೆ. ರಾಮಚಂದ್ರಪ್ಪ ವಹಿಸಿದ್ದರು.

ಆರಂಭದಲ್ಲಿ ಸಿ.ಪಿ.ಐ ನ ಕಾಂ॥ಅವರಗೆರೆ ಚಂದ್ರು ಸ್ವಾಗತ ಮಾಡಿ ಕಾರ್ಯಕ್ರಮ ನಿರೂಪಿಸಿದರು. ಸಿ.ಪಿ.ಐ(ಎಂ) ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಎಲ್.ಭಟ್ ಪ್ರಾಸ್ತಾವಿಕವಾಗಿ ಮಾತಾನಾಡಿದರು. ವೇದಿಕೆಯಲ್ಲಿ ಸಿ.ಪಿ.ಐ ನ ನಗರಪಾಲಿಕೆ ಸದಸ್ಯ ಕಾಂ॥ ಹೆಚ್.ಜಿ. ಉಮೇಶ್, ಕಾಂ॥ ಆನಂದ್‌ರಾಜ್, ಎಸ್.ಯು.ಸಿ.ಐ.ನ ಕಾಂ॥ ಮಂಜುನಾಥ್ ಕೈದಾಳೆ ಮತ್ತು ಸಿ.ಪಿ.ಐ (ಎಂ.ಎಲ್) ನ ಇದ್ಲಿ ರಾಮಪ್ಪ ಇವರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಕಟ್ಟಡ ಕಾರ್ಮಿಕರು, ಬಿಸಿಯೂಟ–ಅಂಗನವಾಡಿ ಕಾರ್ಯಕರ್ತೆಯರು, ಆಟೋ ರಿಕ್ಷಾ ಸಂಘದ ಸದಸ್ಯರು, ಕೆ.ಪಿ.ಆರ್.ಎಸ್– ಡಿ.ವೈ.ಎಫ್.ಐ ಕಾರ್ಯಕರ್ತರು, ಕೊಳಚೆಪ್ರದೇಶ ನಿವಾಸಿಗಳು ಸೇರಿದಂತೆ ಸುಮಾರು 200 ಜನ ಸಭೆಯಲ್ಲಿ ಭಾಗವಹಿಸಿದ್ದರು.

ಚಿತ್ರದುರ್ಗ :

ಮೇ 24ರಂದು ಜಿಲ್ಲೆಯ ಎಡಪಕ್ಷಗಳ ನೇತೃತ್ವದಲ್ಲಿ ಜಿಲ್ಲಾ ಸಮಾವೇಶವು ಪತ್ರಕರ್ತರ ಸಭಾಂಗಣದಲ್ಲಿ ನಡೆಯಿತು. ಸಮಾವೇಶದಲ್ಲಿ ಸಿಪಿಐ ರಾಜ್ಯ ಮುಖಂಡರಾದ ಎಚ್. ಕೆ.ರಾಮಚಂದ್ರಪ್ಪ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕೆ.ಮಹಾಂತೇಶ, ಎಸ್.ಯು.ಸಿ.ಐ.(ಸಿ) ಮುಖಂಡರಾದ ಡಾ.ಸುನೀತಕುಮಾರರವರು ಮಾತನಾಡಿದರು. ಸಮಾವೇಶದಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಎಲ್.ಭಟ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ಶಿವರುದ್ರಪ್ಪ, ಎಸ್.ಯು.ಸಿ.ಐ ಮುಖಂಡರಾದ ರವಿಕುಮಾರ, ಸಿಪಿಐ(ಎಂ) ಮುಖಂಡರಾದ ಡಿ.ಎಂ.ಮಲಿಯಪ್ಪ, ತಿಪ್ಪೇಸ್ವಾಮಿ, ವೀರಭದ್ರಪ್ಪ, ನಿಂಗಣ್ಣ, ಗೌಸಫೀರ ಮೊದಲಾದವರು ಭಾಗವಹಿಸಿದ್ದರು.

ಮೈಸೂರು :

ಜಿಲ್ಲೆಯ ಟಿ.ನರಸಿಪುರ ತಾಲ್ಲೂಕಿನಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ಬಹಿರಂಗ ಸಭೆಯನ್ನು ಆಯೋಜಿಸಲಾಗಿತ್ತು. ಸಿಪಿಐ, ಸಿಪಿಐ(ಎಂ), ಎಸ್‌ಯುಸಿಐ(ಸಿ), ಸಿಪಿಐ(ಎಂಎಲ್) ಲಿಬರೇಷನ್ ವತಿಯಿಂದ ಮುಖಂಡರು ಮಾತನಾಡಿದರು.



“ನಾಯಕರು ಬದಲಾದರೇ ಸಾಲದು, ನೀತಿಗಳು ಬದಲಾಗಬೇಕು”



ಅಭಿವೃದ್ಧಿಯ ಹೆಸರಲ್ಲಿ ಅಧಿಕಾರಕ್ಕೆ ಬಂದ ಕೇಂದ್ರದ ಮೋದಿ ಸರ್ಕಾರ ಬಹುಸಂಸ್ಕೃತಿಯ ನಾಡಿನಲ್ಲಿ ಜನರ ಒಗ್ಗಟ್ಟು ಮುರಿಯುವ ಕೆಲಸ ಮಾಡುತ್ತಿದೆ. ಕೇವಲ ನಾಯಕ ಬದಲಾದರೇ ಸಾಲದು. ಇಂದು ದೇಶದ ಜನತೆಯ ತೀವ್ರ ಸಂಕಷ್ಟಕ್ಕೆ ಕಾರಣವಾಗಿರುವ ಸರಕಾರದ ಜನವಿರೋಧಿ ನೀತಿಗಳು ಬದಲಾಗಬೇಕು. ಪರ್ಯಾಯ ನೀತಿಗಳಿಗಾಗಿ ದೇಶದ ಎಡಪಕ್ಷಗಳು ಒಂದಾಗಿ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಅಗತ್ಯತೆ ಇದೆ ಎಂದು ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯ ಎಸ್. ವೈ ಗುರುಶಾಂತ ಕರೆ ನೀಡಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ–ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ, ಸಿಪಿಐ(ಎಂ), ಸಿಪಿಐ, ಹಾಗೂ ಎಸ್‌ಯುಸಿಐ(ಸಿ) ಪಕ್ಷಗಳು ಜಂ–ಟಿಯಾಗಿ ಧಾರವಾಡದ ನಿವೃತ್ತ ನೌಕರರ ಭವನದಲ್ಲಿ ಮೇ 17ರಂದು ಆಯೋಜಿಸಿದ್ದ ರಾಜಕೀಯ ಸಮಾವೇಶದಲ್ಲಿ ಅವರು ಮಾತನಾಡಿದರು.

ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಬಿ.ಎಸ್ ಸೊಪ್ಪಿನ ಮಾತನಾಡಿ ಬರಗಾಲ, ಬೆಲೆ ಏರಿಕೆ, ನಿರುದ್ಯೋಗ ಮತ್ತು ಇನ್ನಿತರ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರಬಲ ಜನ ಹೋರಾಟಗಳನ್ನು ಬೆಳೆಸುತ್ತಿರುವ ಎಡ ಪ್ರಗತಿಪರ ಸಂಘಟನಾ ಶಕ್ತಿಗಳನ್ನು ತುಳಿಯುವ ಪ್ರಯತ್ನ ನಡೆದಿದೆ. ಜನಪರ ಹೋರಾಟಗಳ ನಿರಂತರತೆಯೇ ಇದಕ್ಕೆ ಪರಿಹಾರ ಎಂದು ಅಭಿಪ್ರಾಯಪಟ್ಟರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಎಸ್‌ಯುಸಿಐ(ಸಿ) ಪಕ್ಷದ ಜಿಲ್ಲಾ ಕಾರ್ಯದರ್ಶಿ ರಾಮಾಂಜನಪ್ಪ ಆಲ್ದಳ್ಳಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಸೀರ ಮುದೋಳ, ಮಹೇಶ ಪತ್ತಾರ, ಆರ್.ಎಚ್ ಆಯಿ, ಡಿ.ಎಚ್ ಕರಿಯಣ್ಣವರ್, ಬಿ.ಎನ್.ಪೂಜಾರಿ, ಕೆ.ಎಚ್.ಪಾಟೀಲ, ಬಿ.ಐ.ಈಳಿಗೇರ, ಎಚ್.ಜಿ ದೇಸಾಯಿ, ಲಕ್ಷ್ಮಣ ಜಡಗನ್ನವರ ಸೇರಿದಂತೆ ಎಡಪಕ್ಷಗಳ ನೂರಾರು ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪ್ರಚಾರಾಂದೋಲನ: ಕೇಂದ್ರ–ರಾಜ್ಯ ಸರಕಾರಗಳ ಜನ ವಿರೋಧಿ ನೀತಿಗಳ ವಿರುದ್ಧ ಎಡಪಕ್ಷದ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಮೇ–25 ರಂದು ಧಾರವಾಡದಲ್ಲಿ, ಮೇ–27 ರಂದು ಹುಬ್ಬಳ್ಳಿಯಲ್ಲಿ ಪ್ರಚಾರಾಂದೋಲನ ಹಾಗೂ ಪ್ರತಿಭಟನಾ ಸಭೆ ನಡೆಸಲಾಯಿತು.

ಅವಳಿ ನಗರದಲ್ಲಿ ವಿವಿಧ ಮಾರ್ಗವಾಗಿ ಜನರಿಗೆ ಕರಪತ್ರಗಳನ್ನು ವಿತರಿಸಿ ನಂತರ ಧಾರವಾಡದ ವಿವೇಕಾನಂದ ಸರ್ಕಲ್‌ನಲ್ಲಿ ಹಾಗೂ ಹುಬ್ಬಳ್ಳಿಯ ದುರ್ಗದಬೈಲ ವೃತ್ತದಲ್ಲಿ ಸೇರಿದ ಎಡಡಪಕ್ಷಗಳ ಕಾರ್ಯಕರ್ತರು ಸಭೆಗಳನ್ನು ನಡೆಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮುಖಂಡ ಆರ್.ಎಚ್.ಆಯಿ ಎಸ್‌ಯುಸಿಐ(ಸಿ) ಜಿಲ್ಲಾ ಮುಖಂಡ ಎಚ್.ಜಿ.ದೇಸಾಯಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಸೀರ ಮುಧೋಳ ಮಾತನಾಡಿದರು. ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ವರದಿ: ಮಹೇಶ ಪತ್ತಾರ

ಈ ವಾರ ಚರಿತ್ರೆಯಲ್ಲಿ

28 ಮೇ 1875

ಪ್ಯಾರೀಸ್ ಕಮ್ಯೂನ್ ಪತನವಾದ ದಿನ

ಪ್ಯಾರೀಸ್ ಕಮ್ಯೂನ್ ಕಾರ್ಮಿಕರೇ ನಡೆಸುವ ಸರಕಾರದ ಮೊದಲ ಪ್ರಯೋಗವಾಗಿತ್ತು. ಜರ್ಮನಿಯ ಸೈನ್ಯ ಪ್ಯಾರಿಸಿಗೆ ಮುತ್ತಿಗೆ ಹಾಕಿ ದೇಶದ ಸರಕಾರ ಸೈನ್ಯ ಶರಣಾಗತಿ ಹಂತ ತಲುಪಿದಾಗ ಕಾರ್ಮಿಕರ ಪಡೆ ಪ್ಯಾರಿಸಿನಲ್ಲಿ ಸರಕಾರ ರಚಿಸಿ ಜರ್ಮನಿಯ ಸೈನ್ಯಕ್ಕೆ ಪ್ರತಿರೋಧ ತೋರಿತು. ಭೀಕರ ಹಿಂಸಾಚಾರ ಬಳಸಿ ಕಾರ್ಮಿಕರ ಸಮಾಜವಾದಿ ಸರಕಾರದ ಮೂಲ ಮಾದರಿ ರೂಪಿಸಿದ ಈ ಪ್ರಯೋಗವನ್ನು ಹತ್ತಿಕ್ಕಲಾಯಿತು. ಇದು ಕಾರ್ಮಿಕರ ಪ್ರಭುತ್ವದ ಬಗ್ಗೆ ಕಾರ್ಲ್ ಮಾರ್ಕ್ಸ್ ಅವರ ಆಗಿನ ಚಿಂತನೆಯನ್ನು ಬದಲಿಸಿತು. ಹೊಸತಾಗಿ ರೂಪಿಸಿತು. ಪ್ಯಾರೀಸ್ ಕಮ್ಯೂನ್ ಅನುಭವದ ಆಧಾರದ ಮೇಲೆ ‘ಕಾರ್ಮಿಕರ ಸರ್ವಾಧಿಕಾರ’ದ ಪರಿಕಲ್ಪನೆಯನ್ನು ಕಾರ್ಲ್ ಮಾರ್ಕ್ಸ್ ಬೆಳೆಸಿದರು. ಇಂದಿಗೂ ಪ್ಯಾರೀಸ್ ಕಮ್ಯೂನ್ ನ ಸಫಲತೆಗಳೂ ವೈಫಲ್ಯಗಳೂ ಕಾರ್ಮಿಕರ ಸಮಾಜವಾದಿ ಪ್ರಭುತ್ವಕ್ಕೆ ಮಾದರಿಯೂ ಸ್ಫೂರ್ತಿಯ ಸೆಲೆಯೂ ಆಗಿವೆ.

ಕರ್ನಾಟಕದ 14 ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕವು 0.5ಕ್ಕಿಂತ ಅಧಿಕವಾಗಿದ್ದು ಮುಂದುವರಿದ ಸ್ಥಿತಿಯಲ್ಲಿದ್ದರೆ ಉಳಿದ 16 ಜಿಲ್ಲೆಗಳ ಸೂಚ್ಯಂಕ 0.5ಕ್ಕಿಂತ ಕೆಳಮಟ್ಟದಲ್ಲಿದ್ದು ಹಿಂದುಳಿದ ಸ್ಥಿತಿಯಲ್ಲಿವೆ. ಮುಂದುವರಿದ ಜಿಲ್ಲೆಗಳ ಪೈಕಿ 12 ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ 2 ಮಾತ್ರ ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಇದಕ್ಕೆ ಪ್ರತಿಯಾಗಿ ಹಿಂದುಳಿದ 16 ಜಿಲ್ಲೆಗಳ ಪೈಕಿ 5 ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ 11 ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಕರ್ನಾಟಕದಲ್ಲಿ ಯಾವ ಜಿಲ್ಲೆಯಲ್ಲಿಯೂ ದಲಿತ ಅಭಿವೃದ್ಧಿ ಸೂಚ್ಯಂಕದ ಮೌಲ್ಯ 0.3 ಮೀರಿಲ್ಲ. ಈ ಸೂಚ್ಯಂಕದಲ್ಲಿ 1.00 ಅಭಿವೃದ್ಧಿಯ ಪೂರ್ಣ ಮೌಲ್ಯವಾದರೆ ಅದಕ್ಕಿಂತ ಕಡಿಮೆ ಮೌಲ್ಯವು ದಲಿತರ ಬದುಕಿನ ದುಸ್ಥಿತಿಯನ್ನು ತೋರಿಸುತ್ತವೆ. ಒಟ್ಟಾರೆ ಕರ್ನಾಟಕವು ಪ್ರಕಟಿಸಿರುವ 30 ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ಜಿಲ್ಲೆ ಮತ್ತು ತಾಲ್ಲೂಕ ಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚಿಗಳಾದ ಸಾಕ್ಷರತೆ, ಆರೋಗ್ಯ, ಆಹಾರ ಭದ್ರತೆ, ಮಕ್ಕಳ ಅಭಿವೃದ್ಧಿ, ಲಿಂಗ ಅಸಮಾನತೆ ಮುಂತಾದ ಸಂಗತಿಗಳ ಸ್ಥಿತಿಗತಿ ಯಾವ ಮಟ್ಟದಲ್ಲಿದೆ ಎಂಬುದನ್ನು ತೋರಿಸುತ್ತವೆ. ಈ ವರದಿಗಳನ್ನು ಆಧಾರವಾಗಿಟ್ಟುಕೊಂಡು ಜಿಲ್ಲಾ ಪಂಚಾಯತಿಗಳು ತಮ್ಮ ಜಿಲ್ಲೆಯ ಅಭಿವೃದ್ಧಿ ಯೋಜನೆಯನ್ನು ರೂಪಿಸುವಂತಾಗಬೇಕು. ಈ ವರದಿಗಳ ಬಗ್ಗೆ ಚರ್ಚೆ ನಡೆಯಬೇಕು. ಇವುಗಳನ್ನು ಅಧ್ಯಯನ ಮಾಡಿ ಜನ ಚಳುವಳಿಗಳು ಸರಕಾರದ ಅಭಿವೃದ್ಧಿ ನೀತಿಗಳ ವಿಶ್ಲೇಷಣೆಗೆ, ವಿಮರ್ಶೆಗೆ ಮತ್ತು ತಮ್ಮ ಹೋರಾಟಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು.

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ




ಪ್ರೊ. ಟಿ.ಆರ್. ಚಂದ್ರಶೇಖರ

'ಕೇರಳ ರಾಜ್ಯದ ಬುಡಕಟ್ಟು ಸಮುದಾಯದಲ್ಲಿನ ಶಿಶು ಮರಣ ಪ್ರಮಾಣ ಸೋಮಾಲಿಯಾಕ್ಕಿಂತ ಅಧಿಕವಾಗಿದೆ' ಎಂಬ ಒಂದು ಹೇಳಿಕೆಯ ಬಗ್ಗೆ ಇಂದು ದೇಶಾದ್ಯಂತ ತೀವ್ರ ಚರ್ಚೆ ನಡೆದಿದೆ. ಇಲ್ಲಿ ಎರಡು ಸಂಗತಿಗಳಿವೆ. ಮೊದಲನೆಯದಾಗಿ ಶಿಶು ಮರಣ ಪ್ರಮಾಣ ಅನ್ನುವ ಆರೋಗ್ಯ-ಕ್ಕೆ ಸಂಬಂಧಿಸಿದ ಸಂಗತಿಯು ಅಭಿವೃದ್ಧಿ ಸೂಚಿ ಎಂಬುದನ್ನು ಒಪ್ಪಿಕೊಂಡಿದ್ದರಿಂದ ಇದೊಂದು ಸಕಾರಾತ್ಮಕ ಸಂಗತಿಯಾಗಿದೆ. ಎರಡನೆಯದಾಗಿ ಮಾನವ ಅಭಿವೃದ್ಧಿ ಸೂಚಿಗಳಲ್ಲಿ ಭಾರತದಲ್ಲಿ ಮಾತ್ರವಲ್ಲ ಜಗತ್ತಿನಲ್ಲಿಯೇ ಉತ್ತಮ ಸ್ಥಾನದಲ್ಲಿರುವ ಕೇರಳವನ್ನು ಸೋಮಾಲಿಯಾಕ್ಕೆ ಹೋಲಿಸಿದ್ದು ನಕಾರಾತ್ಮಕ ಸಂಗತಿಯಾಗಿದೆ. ಮಾನವ ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಭಾರತದಲ್ಲಿ ಮೊದಲನೆಯ ಸ್ಥಾನದಲ್ಲಿರುವ ಕೇರಳವನ್ನು ಮೀರಿಸುವುದು ಗುಜರಾತನ್ನೂ ಸೇರಿಸಿಕೊಂಡು ದೇಶದ ಯಾವ ರಾಜ್ಯಕ್ಕೂ ಸಾಧ್ಯವಾಗಿಲ್ಲ. ಏನೇ ಆಗಲಿ ಮೇಲಿನ ಹೇಳಿಕೆಯಿಂದಾಗಿ ಇಂದು ಮಾನವ ಅಭಿವೃದ್ಧಿ ಪ್ರಣಾಳಿಕೆಯ ಬಗೆಗಿನ ಚರ್ಚೆ ಮುಂಚೂಣಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಜಿಲ್ಲೆಗಳು ಮತ್ತು ತಾಲ್ಲೂಕುಗಳಿಗೆ ಸಂಬಂಧಿಸಿದ ಮಾನವ ಅಭಿವೃದ್ಧಿ ಕುರಿತಂತೆ ಚರ್ಚಿಸುವುದು ಪ್ರಸ್ತುತವಾಗಿದೆ. ನಮ್ಮ ದೇಶದಲ್ಲಿ ರಾಜ್ಯವೊಂದು ತನ್ನ ಎಲ್ಲ ಜಿಲ್ಲೆಗಳ ಮತ್ತು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಒಳಗೊಂಡ ಮೂವತ್ತು ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಏಕಕಾಲದಲ್ಲಿ ಪ್ರಕಟಿಸಿದ ಕೀರ್ತಿಯು ಕರ್ನಾಟಕ್ಕೆ ಸಲ್ಲುತ್ತದೆ. ಈ ಎಲ್ಲ ವರದಿಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ದೊರೆಯುತ್ತವೆ.

ಮಾನವ ಅಭಿವೃದ್ಧಿಯ ಮಹತ್ವ

ಮಾನವ ಅಭಿವೃದ್ಧಿ ಪ್ರಣಾಳಿಕೆಯ ಆಗಮನದೊಂದಿಗೆ ಅಭಿವೃದ್ಧಿಯನ್ನು ಕುರಿತ ಚರ್ಚೆಯ ವಿನ್ಯಾಸ ಜಗತ್ತಿನಲ್ಲಿ ಬದಲಾಗಿದೆ. ಅಭಿವೃದ್ಧಿಯನ್ನು ಲಾಗಾಯ್ತಿನಿಂದ ವರಮಾನದ ಏರಿಕೆಗೆ(ಜಿಡಿಪಿ) ಸಂವಾದಿಯನ್ನಾಗಿ ಮಾಡಿಕೊಂಡು ಬರಲಾಗಿತ್ತು. ನಮ್ಮ ಹಣಕಾಸು ಮಂತ್ರಿಯವರು ಜಿಡಿಪಿ ಬೆಳವಣಿಗೆ ಬಗ್ಗೆ ವ್ಯಸನದಂತೆ ಮಾತನಾಡುತ್ತಿದ್ದಾರೆ. ಮಾನವ ಅಭಿವೃದ್ಧಿ ಪ್ರಣಾಳಿಕೆಯ ರೂವಾರಿಗಳಾದ ಮೆಹಬೂಬ್ ಉಲ್ ಹಕ್ ಮತ್ತು ಅಮರ್ತ್ಯ ಸೇನ್ ಮತ್ತೆ ಮತ್ತೆ ಪ್ರತಿಪಾದಿಸಿದಂತೆ ವರಮಾನವೇ ಜನರ ಬದುಕಿನ ಮೊತ್ತವಲ್ಲ. ಅವರ ಪ್ರಕಾರ ಅಭಿವೃದ್ಧಿಯಲ್ಲಿ ಜನರ ಬದುಕಿನ ಸಮೃದ್ಧತೆ ಉತ್ತಮವಾಗುವುದು ಮುಖ್ಯವೇ ವಿನಾ ಆರ್ಥಿಕತೆಯ ಸಮೃದ್ಧತೆಯು ಉತ್ತಮವಾಗುವುದಲ್ಲ. ಅಭಿವೃದ್ಧಿಯಲ್ಲಿ ವರಮಾನದ ಏರಿಕೆಯೇ ಅಂತಿಮ ಗಂತವ್ಯವಲ್ಲ. ಅಭಿವೃದ್ಧಿಗೆ ವರಮಾನದಲ್ಲಿ ಏರಿಕೆ ಮುಖ್ಯ. ಆದರೇ ಅದೇ ಅಭಿವೃದ್ಧಿಯಲ್ಲ.

ಉದಾಹರಣೆಗೆ ಕರ್ನಾಟಕದಲ್ಲಿ ವರಮಾನದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯು ರಾಜ್ಯದ 30 ಜಿಲ್ಲೆಗಳ ಪೈಕಿ ಜೀವನಾಧಾರ(ವರಮಾನ, ಉತ್ಪಾದನೆ ಇತ್ಯಾದಿ ಸಂಗತಿಗಳ ಸಂಯುಕ್ತ ಸೂಚಿ) ಸೂಚಿಯಲ್ಲಿ 11ನೆಯ ಸ್ಥಾನದಲ್ಲಿದೆ. ಆದರೆ ಶಿಕ್ಷಣ ಮತ್ತು ಆರೋಗ್ಯ ಸೂಚಿಗಳನ್ನು ತೆಗೆದುಕೊಂಡರೆ ಅದರ ಸ್ಥಾನ ಕ್ರಮವಾಗಿ 26 ಮತ್ತು 28. ಇದಕ್ಕೆ ಪ್ರತಿಯಾಗಿ ಹಾಸನ ಜಿಲ್ಲೆಯು ಜೀವನಾಧಾರದಲ್ಲಿ 15ನೆಯ ಸ್ಥಾನದಲ್ಲಿದ್ದರೆ ಶಿಕ್ಷಣ ಮತ್ತು ಆರೋಗ್ಯಗಳಲ್ಲಿ ಅದು ಕ್ರಮವಾಗಿ 9 ಮತ್ತು 4ನೆಯ ಸ್ಥಾನದಲ್ಲಿದೆ. ಅದೇ ರೀತಿಯಲ್ಲಿ ಮೈಸೂರು ಜಿಲ್ಲೆಯು ಜೀವನಾಧಾರದಲ್ಲಿ 5ನೆಯ ಸ್ಥಾನದಲ್ಲಿದ್ದರೆ ಶಿಕ್ಷಣ ಮತ್ತು ಆರೋಗ್ಯ



ಸೂಚಿಗಳಲ್ಲಿ ಅದರ ಸ್ಥಾನ ಕ್ರಮವಾಗಿ 21 ಮತ್ತು 20. ಇದಕ್ಕೆ ಪ್ರತಿಯಾಗಿ ಉತ್ತರ ಕನ್ನಡ ಜಿಲ್ಲೆಯು ಜೀವನಾಧರ ಸೂಚಿಯಲ್ಲಿ 14ನೆಯ ಸ್ಥಾನದಲ್ಲಿದ್ದರೆ ಶಿಕ್ಷಣದಲ್ಲಿ 12ನೆಯ ಸ್ಥಾನದಲ್ಲಿ ಮತ್ತು ಆರೋಗ್ಯದಲ್ಲಿ 6ನೆಯ ಸ್ಥಾನದಲ್ಲಿದೆ.

ಇವೆಲ್ಲ ಏನನ್ನು ಸೂಚಿಸುತ್ತವೆ? ಅಭಿವೃದ್ಧಿಯಲ್ಲಿ ವರಮಾನ, ಉತ್ಪಾದನೆ, ಬಂಡವಾಳ ಮುಂತಾದವು 'ಸಾಧನ'ಗಳೇ ವಿನಾ ಅವೇ ಅಭಿವೃದ್ಧಿಯಲ್ಲ. ಅಭಿವೃದ್ಧಿಯಲ್ಲಿ ಜನರು, ಮಹಿಳೆಯರನ್ನು ಸೇರಿಸಿಕೊಂಡು ಜನರ ಬದುಕು ಮುಖ್ಯ. ಜನರ ಬದುಕು ಸಮೃದ್ಧವಾಗ ಬೇಕಾದರೆ ವರಮಾನದ ಜೊತೆಯಲ್ಲಿ ಅಕ್ಷರ ಸಂಸ್ಕೃತಿ, ಆರೋಗ್ಯ, ಮಹಿಳೆಯರ ಬದುಕಿನ ಸ್ಥಿತಿಗತಿ, ಕುಡಿಯುವ ನೀರಿನ ಲಭ್ಯತೆ, ಆಹಾರ, ವಸತಿ ಮುಂತಾದವು ಮುಖ್ಯವಾಗುತ್ತವೆ. ಅಭಿವೃದ್ಧಿ ಅನ್ನುವುದು ಜನರು ಅನುಭವಿಸಬೇಕಾದ ಒಂದು ಸಂಗತಿ. ಅದು ಕೇವಲ ಅಂಕಿಅಂಶಗಳ ಕೋಶವಲ್ಲ. ಅಭಿವೃದ್ಧಿಯನ್ನು ಅನುಭವಿಸುವುದಕ್ಕೆ ಜನರ ಧಾರಣ ಸಾಮರ್ಥ್ಯ ಉತ್ತಮವಾಗಿರಬೇಕು. ಜನರ ಧಾರಣಾ ಸಾಮರ್ಥ್ಯವು ವರಮಾನವನ್ನು ಸೇರಿಸಿಕೊಂಡು ಶಿಕ್ಷಣ, ಆರೋಗ್ಯ, ಆಹಾರ, ಪರಿಸರ ಸಮತೋಲನ ಮುಂತಾದವುಗಳನ್ನು ಅವಲಂಬಿಸಿದೆ.

ಮಾನವ ಅಭಿವೃದ್ಧಿಯಲ್ಲಿನ ಸಾಧನೆ ಬಗ್ಗೆ ನಮ್ಮ ದೇಶದಲ್ಲಿ ಕೇರಳದ ಉದಾಹರಣೆಯನ್ನು ಸಾಮಾನ್ಯವಾಗಿ ನೀಡಲಾಗುತ್ತದೆ. ಏಕೆಂದರೆ ಅದರ ತಲಾ ವರಮಾನವು ಹರಿಯಾಣ, ಪಂಜಾಬ್, ಮಹಾರಾಷ್ಟ್ರ ಮುಂತಾದ 'ಮುಂದುವರಿದ' ರಾಜ್ಯಗಳಲ್ಲಿನ ತಲಾ ವರಮಾನಕ್ಕಿಂತ ಕೆಳಮಟ್ಟದಲ್ಲಿದೆ. ಆದರೆ ಆರೋಗ್ಯ(ಜೀವನಾಯುಷ್ಯ, ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ ಇತ್ಯಾದಿ ಸೂಚಿಗಳು), ಶಿಕ್ಷಣ(ಸಾಕ್ಷರತಾ ಪ್ರಮಾಣ, ಮಕ್ಕಳ ಶಾಲಾ ದಾಖಲಾತಿ ಇತ್ಯಾದಿ ಸೂಚಿಗಳು), ಆಹಾರ ಭದ್ರತೆ, ಲಿಂಗ ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮುಂತಾದ ಸೂಚಿಗಳಲ್ಲಿ ಕೇರಳವು ಅತ್ಯಂತ ಉನ್ನತ ಸ್ಥಾನದಲ್ಲಿದೆ. ಕೇರಳದ ಈ ವಿಶಿಷ್ಟ ಸಾಧನೆ ಈವತ್ತಿನ ಸಂಗತಿಯಲ್ಲ. ಅದು ಕಳೆದ ಮೂರು ದಶಕಗಳಿಂದ ಮಾನವ ಅಭಿವೃದ್ಧಿಯಲ್ಲಿ ಉನ್ನತ ಸ್ಥಾನವನ್ನು ಕಾಯ್ದು-ಕೊಂಡು ಬಂದಿದೆ. ಈ ಕಾರಣಕ್ಕೆ 'ಕೇರಳ ಅಭಿವೃದ್ಧಿ ಮಾದರಿ'ಯು ವಿಶ್ವಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ನಮ್ಮ ದೇಶದಲ್ಲಿ ಕಳೆದ ಹತ್ತಾರು ವರ್ಷಗಳಿಂದ ವರಮಾನದಲ್ಲಿ ಉತ್ತಮ ಸಾಧನೆ ಮಾಡಿರುವ ಗುಜರಾತ್ ಮಾದರಿಯ ಬಗ್ಗೆ ಮಾಧ್ಯಮಗಳಲ್ಲಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಚರ್ಚೆ ಮಾಡಲಾಗುತ್ತಿದೆಯೇ ವಿನಾ ಜನರ ಬದುಕುನ್ನು ಸಮೃದ್ಧಗೊಳಿಸಿರುವ ಕೇರಳ ಸಾಧನೆಯ ಬಗ್ಗೆ ಮಾತುಗಳನ್ನಾಡುತ್ತಿಲ್ಲ.

ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕದ ಸಾಧನೆ

ಅಭಿವೃದ್ಧಿ ದೃಷ್ಟಿಯಿಂದ ಕರ್ನಾಟಕವು ದೇಶದಲ್ಲಿ ಮಧ್ಯಮಗತಿ ಆರ್ಥಿಕತೆಯ ಸ್ಥಾನ ಪಡೆದಿದೆ. ಅದು ಹರಿಯಾಣ, ಪಂಜಾಬ್, ಮಹಾರಾಷ್ಟ್ರ ಮುಂತಾದ ರಾಜ್ಯಗಳಂತೆ ಅತ್ಯಂತ ಮುಂದುವರಿದ ರಾಜ್ಯವೂ ಅಲ್ಲ ಅಥವಾ ಬಿಹಾರ, ಜಾರ್ಖಂಡ, ಒರಿಸ್ಸಾ, ಮಧ್ಯ ಪ್ರದೇಶಗಳಂತೆ ಅತ್ಯಂತ ಹಿಂದುಳಿದ ರಾಜ್ಯವೂ ಅಲ್ಲ. ಅದರ ಅಭಿವೃದ್ಧಿಯು ಮಧ್ಯಮಗತಿಯಲ್ಲಿ ನಡೆದಿದೆ. ಕರ್ನಾಟಕದ ಜಿಲ್ಲೆಗಳ ಮಾನವ ಅಭಿವೃದ್ಧಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಎದ್ದು ಕಾಣುವ ಸಂಗತಿಯೆಂದರೆ ಪ್ರಾದೇಶಿಕ ಅಸಮಾನತೆ. ಕರ್ನಾಟಕದ 14 ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕವು 0.5ಕ್ಕಿಂತ ಅಧಿಕವಾಗಿದ್ದು ಮುಂದುವರಿದ ಸ್ಥಿತಿಯಲ್ಲಿದ್ದರೆ ಉಳಿದ 16 ಜಿಲ್ಲೆಗಳ ಸೂಚ್ಯಂಕ 0.5ಕ್ಕಿಂತ ಕೆಳಮಟ್ಟದಲ್ಲಿದ್ದು ಹಿಂದುಳಿದ ಸ್ಥಿತಿಯಲ್ಲಿವೆ. ಮುಂದುವರಿದ ಜಿಲ್ಲೆಗಳ ಪೈಕಿ 12 ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ 2 ಮಾತ್ರ ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಇದ-ಕ್ಕೆ ಪ್ರತಿಯಾಗಿ ಹಿಂದುಳಿದ 16 ಜಿಲ್ಲೆಗಳ ಪೈಕಿ 5 ದಕ್ಷಿಣ ಕರ್ನಾಟಕ ಪ್ರದೇಶಕ್ಕೆ ಸೇರಿದ್ದರೆ 11 ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಕಲಬುರಗಿ ವಿಭಾಗದ ಎಲ್ಲ ಆರು ಜಿಲ್ಲೆಗಳು ಹಿಂದುಳಿದ ವರ್ಗಕ್ಕೆ ಸೇರುತ್ತವೆ. ಅದರಲ್ಲೂ ಕೊಪ್ಪಳ, ಯಾದಗೀರ್ ಮತ್ತು ರಾಯಚೂರು ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕ 0.3ಕ್ಕಿಂತ ಕೆಳಮಟ್ಟದಲ್ಲಿದೆ. ಈ ಮೂರು ಜಿಲ್ಲೆಗಳು ರಾಜ್ಯದಲ್ಲಿ ಕ್ರಮವಾಗಿ 28, 29 ಮತ್ತು 30ನೆಯ ಸ್ಥಾನ ಪಡೆದಿವೆ. ಇದಕ್ಕೆ ಪ್ರತಿಯಾಗಿ ಬೆಂಗಳೂರು ನಗರ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕ್ರಮವಾಗಿ 0.928, 0.691 ಮತ್ತು 0.675 ಸೂಚ್ಯಂಕ ಮೌಲ್ಯಗಳ ಮೂಲಕ ಮೊದಲ ಮೂರು ಸ್ಥಾನಗಳಲ್ಲಿವೆ.

ಲಿಂಗ ಅಸಮಾನತೆ ಸೂಚ್ಯಂಕ

ಸಾಂಪ್ರದಾಯಿಕ ಅಭಿವೃದ್ಧಿ ಪ್ರಣಾಳಿಕೆ ಮತ್ತು ಮಾನವ ಅಭಿವೃದ್ಧಿ ಪ್ರಣಾಳಿಕೆಗಳ ನಡುವಿನ ಒಂದು ಪ್ರಮುಖ ಭಿನ್ನತೆಯೆಂದರೆ ಮೊದಲನೆಯದು ಲಿಂಗ ನಿರಪೇಕ್ಷವಾಗಿದ್ದರೆ ಎರಡನೆಯದು ಲಿಂಗ ಸ್ಪಂದಿ ಸಿದ್ಧಾಂತವಾಗಿದೆ. ಅಭಿವೃದ್ಧಿಯಲ್ಲಿ ಮಹಿಳೆಯರನ್ನು ಕೇವಲ ಅನುಭೋಗಿಗಳೆಂದು ಪರಿಗಣಿಸಿಕೊಂಡು ಬರಲಾಗಿತ್ತು. ಆದರೆ ಮಾನವ ಅಭಿವೃದ್ಧಿ ಪ್ರಣಾಳಿಕೆಯು ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ನಿರ್ಣಾಯಕ ಅನ್ನುವುದನ್ನು ಸೋದಾಹರಣವಾಗಿ ತೋರಿಸಿಕೊಟ್ಟಿತು. ವಿಶ್ವಬ್ಯಾಂಕು ತನ್ನ 2012ನೆಯ ವಿಶ್ವ ಅಭಿವೃದ್ಧಿ ವರದಿಯಲ್ಲಿ ಲಿಂಗ ಸಮಾನತೆಯನ್ನು 'ಸ್ಮಾರ್ಟ್ ಎಕನಾಮಿಕ್ಸ್' ಎಂದು ಘೋಷಿಸಿತು. ಮಹಿಳೆಯರು ನಿರ್ವಹಿಸುವ ಮನೆವಾರ್ತೆ, ಸ್ವಂತ ಹೊಲ-ಗದ್ದೆ-ತೋಟಗಳಲ್ಲಿ ಮಾಡುವ ದುಡಿಮೆ ಮುಂತಾದವು ಕೂಡ ಉತ್ಪಾದನೆ ಚಟುವಟಿಕೆ ಎಂದು ಪರಿಗಣಿಸಬೇಕೆಂದು ಅಮರ್ತ್ಯ ಸೇನ್ ಪ್ರತಿಪಾದಿಸುತ್ತಿದ್ದಾರೆ. ಆದರೆ ಅವರು ಅನೇಕ ಬಗೆ-ಯ ಅಸಮಾನತೆಯನ್ನು ಎದುರಿಸಬೇಕಾಗಿದೆ. ಇದರಿಂದಾಗಿ ಅವರ ಕರ್ತೃತ್ವಶಕ್ತಿಯು ಅಭಿವೃದ್ಧಿಗೆ ಪೂರ್ಣವಾಗಿ ಲಭಿಸುತ್ತಿಲ್ಲ. ಈ ಸಂಗತಿಯನ್ನು ಕರ್ನಾಟಕದ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ತೋರಿಸಿಕೊಟ್ಟಿವೆ. ನಮ್ಮ ರಾಜ್ಯದಲ್ಲಿ ಮಹಿಳೆಯರನ್ನು ಕಾಡುತ್ತಿರುವ ಅಪೌಷ್ಟಿಕತೆ-ಅನಿಮಿಯಾ ಪ್ರಮಾಣವನ್ನು ಇಲ್ಲಿ ಮಾಪನ ಮಾಡಲಾಗಿದೆ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಲಿಂಗ ಅಸಮಾನತೆಯು ಹಿಂದುಳಿದ ಜಿಲ್ಲೆಗಳಲ್ಲಿ ಮುಂದುವರಿಗೆ ಜಿಲ್ಲೆಗಳಲ್ಲಿಗಿಂತ ಅಧಿಕವಾಗಿದೆ. ಹಿಂದುಳಿದ ಜಿಲ್ಲೆಗಳಲ್ಲಿ ದುಡಿಮೆ ವರ್ಗದಲ್ಲಿರುವ ಮಹಿಳೆಯರ ಪ್ರಮಾಣವೂ ಅಧಿಕ. ಈ ವರದಿಗಳು ರಾಜ್ಯದಲ್ಲಿ ಮಹಿಳೆಯರು ಎದುರಿಸುತ್ತಿರುವ ಎಲ್ಲ ಬಗೆಯ ತಾರತಮ್ಯ, ಅಸಮಾನತೆ, ಶೋಷಣೆ ಬಗ್ಗೆ ಬೆಳಕು ಚೆಲ್ಲುತ್ತವೆ. ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು ಶೇ50ರಷ್ಟಿರುವ, ಮತದಾರರಲ್ಲಿ ಶೇ50ರಷ್ಟಿರುವ ಮತ್ತು ದುಡಿಮೆಗಾರರಲ್ಲಿ ಶೇ35ರಷ್ಟಿರುವ ಮಹಿಳೆಯರ ಪಾತ್ರ ಅಭಿವೃದ್ಧಿಯಲ್ಲಿ ನಿರ್ಣಾಯಕವಾಗಿದೆ.

ದಲಿತ ಅಭಿವೃದ್ಧಿ ಸೂಚ್ಯಂಕ

ನಮ್ಮ ರಾಜ್ಯದಲ್ಲಿ ಪ್ರಥಮ ಬಾರಿಗೆ ದಲಿತರ ಅಭಿವೃದ್ಧಿಗೆ ಸಂಬಂಧಿಸಿದಂತೆ ಡಾ. ಎಂ. ಚಂದ್ರ







ಪಶ್ಚಿಮ ಬಂಗಾಲದಲ್ಲಿ ನಡೆದಿದೆ ಪ್ರಜಾಪ್ರಭುತ್ವ ಮತ್ತು ಮೂಲಭೂತ ಹಕ್ಕುಗಳ ಮೇಲೆ ಸರ್ವವ್ಯಾಪಿ ದಾಳಿ

ಪಶ್ಚಿಮ ಬಂಗಾಲ ಇಂದು ಒಂದು ಕಾನೂನುರಹಿತ ರಾಜ್ಯವಾಗಿದೆ. ಪೋಲೀಸರು ಒಂದೋ ಮೂಕಪ್ರೇಕ್ಷಕ ರಾಗಿದ್ದಾರೆ, ಇಲ್ಲವೇ, ದಾಳಿಗೆ ಬಲಿಯಾದವರ ಮೇಲೆಯೇ ಸುಳ್ಳು ಕೇಸುಗಳನ್ನು ಹಾಕುತ್ತಿದ್ದಾರೆ. ಈ ಟಿಎಂಸಿ ಧಾಂಧಲೆಗಳ ಒಂದು ಅಸಹ್ಯ ಲಕ್ಷಣ ಎಂದರೆ ಮಹಿಳಾ ಕಾರ್ಯಕರ್ತೆಯರು ಮತ್ತು ಬೆಂಬಲಿಗರ ಮೇಲೆ ವಿಶೇಷ ಗುರಿ ಇಟ್ಟಿರುವುದು. ಈ ಬರ್ಬರ ದಾಳಿಗಳನ್ನು ಪ್ರತಿರೋಧಿಸಬೇಕಾಗಿದೆ,



ಪ್ರಕಾಶ ಕಾರಟ್

ತೃಣಮೂಲ ಕಾಂಗ್ರೆಸ್ ಪಶ್ಚಿಮ ಬಂಗಾಲದಲ್ಲಿ ವಿಧಾನ ಸಭೆಯಲ್ಲಿ 72ಶೇಕಡಾ ಸೀಟುಗಳನ್ನು ಪಡೆದು ಒಂದು ನಿರ್ಣಾಯಕ ಗೆಲುವು ಗಳಿಸಿದೆ. ಆದರೆ ಮಮತಾ ಬ್ಯಾನರ್ಜಿಯವರಿಗೆ ಇಷ್ಟೇ ಸಾಲದು ಎಂಬಂತೆ ಕಾಣುತ್ತಿದೆ. ಅವರಿಗೆ, ಸಿಪಿಐ(ಎಂ) ಮತ್ತು ಎಡರಂಗವನ್ನು ಚುನಾವಣಾ ಕಣದಲ್ಲಿ ಸೋಲಿಸುವುದು ಮಾತ್ರವಲ್ಲ, ಒಂದು ರಾಜಕೀಯ ಶಕ್ತಿಯಾಗಿ ನಿರ್ಮೂಲ ಮಾಡಬೇಕಾಗಿದೆ. ಆದ್ದರಿಂದಲೇ ಚುನಾವಣೆಯ ನಂತರ ಇಂಚಿಂಚಾಗಿ ಪ್ರತ್ಯುತ್ತರ ಕೊಡುವುದಾಗಿ ಚುನಾವಣಾ ಪ್ರಚಾರದ ವೇಳೆಯಲ್ಲಿ ಹೇಳಿದ್ದನ್ನು ಆಕೆ ಈಡೇರಿಸುತ್ತಿದ್ದಾರೆ.

ತೃಣಮೂಲ ಕಾಂಗ್ರೆಸ್(ಟಿಎಂಸಿ) ಮಂದಿ ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಅಭೂತಪೂರ್ವ ಭಯೋತ್ಪಾದನೆಯನ್ನು ಹರಿಯ ಬಿಟ್ಟಿದ್ದಾರೆ. ಇತರ ಪ್ರತಿಪಕ್ಷಗಳನ್ನೂ ಅವರು ಬಿಟ್ಟಿಲ್ಲ. ಮೇ 19ರಂದು ಚುನಾವಣಾ ಫಲಿತಾಂಶಗಳನ್ನು ಘೋಷಿಸಿದಂದಿನಿಂದ ತೃಣಮೂಲ ಗ್ಯಾಂಗ್‌ಗಳು ರಾಜ್ಯಾದ್ಯಂತ ದಾಳಿಗಳನ್ನು ನಡೆಸುತ್ತಿದ್ದಾರೆ. ಸಿಪಿಐ(ಎಂ) ಮತ್ತು ಎಡರಂಗದ ಪೋಲಿಂಗ್ ಏಜೆಂಟರುಗಳು, ಕಾರ್ಯಕರ್ತರು, ಬೆಂಬಲಿಗರು ಮತ್ತು ಮತದಾರರ ಮೇಲೂ ಗುರಿಯಿಟ್ಟಿದ್ದಾರೆ. ಹಳ್ಳಿಯ ವಿಧಾನ ಎಲ್ಲೆಡೆಗಳಲ್ಲೂ ಒಂದೇ– ಪಕ್ಷದ ಕಚೇರಿಯನ್ನು ಸುಡುವುದು ಅಥವ ಹಾಳುಗೆಡಹುವುದು; ಪ್ರತಿಪಕ್ಷಗಳ ಕಾರ್ಯಕರ್ತರ ಮನೆಗಳ ಮೇಲೆ ದಾಳಿ ಮಾಡಿ ಮನೆ ಸಾಮಾನುಗಳನ್ನೆಲ್ಲ ಧ್ವಂಸ ಮಾಡುವುದು; ಪ್ರತಿಪಕ್ಷಗಳ ಕಾರ್ಯಕರ್ತರ ಮೇಲೆ ದೈಹಿಕವಾಗಿ ದಾಳಿ ಮಾಡುವುದು, ಅವರ ಮನೆಗಳಲ್ಲಿ ಮಹಿಳೆಯರು, ಮಕ್ಕಳನ್ನೂ ಅವರು ಬಿಡುವುದಿಲ್ಲ; ಹಲವು ಸ್ಥಳಗಳಲ್ಲಿ ಜೀವನೋಪಾಯದ ದಾರಿಯನ್ನೇ ಕಡಿದು ಹಾಕಿದ್ದಾರೆ.

ಈ ಧಾಂಧಲೆಗಳ ಒಂದು ಅಸಹ್ಯ ಲಕ್ಷಣ ಎಂದರೆ ಮಹಿಳಾ ಕಾರ್ಯಕರ್ತೆಯರು ಮತ್ತು ಬೆಂಬಲಿಗರ ಮೇಲೆ ವಿಶೇಷ ಗುರಿಯಿಟ್ಟಿರುವುದು. ಈ ಹಿಂದೆ, ಪಂಚಾಯತು ಚುನಾವಣೆಗಳು ಇತ್ಯಾದಿ ಸಂದರ್ಭಗಳಲ್ಲಿ ಅತ್ಯಾಚಾರಕ್ಕೊಳಗಾದ ಮಹಿಳೆಯರು ಹಾಕಿದ್ದ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಆಪಾದಿತ ತೃಣಮೂಲ ಮಂದಿ ಬೆದರಿಸುತ್ತಿದ್ದಾರೆ.

ಪಶ್ಚಿಮ ಬಂಗಾಲ ಇಂದು ಒಂದು ಕಾನೂನುರಹಿತ ರಾಜ್ಯವಾಗಿದೆ. ಪೋಲೀಸರು ಒಂದೋ ಮೂಕಪ್ರೇಕ್ಷಕ ರಾಗಿದ್ದಾರೆ, ಇಲ್ಲವೇ, ದಾಳಿಗೆ ಬಲಿಯಾದವರ ಮೇಲೆಯೇ ಸುಳ್ಳು ಕೇಸುಗಳನ್ನು ಹಾಕುತ್ತಿದ್ದಾರೆ. ಚುನಾವಣಾ ಪ್ರಚಾರದ ವೇಳೆಯಲ್ಲಿ ಮುಖ್ಯಮಂತ್ರಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಿದ ಪೋಲೀಸ್ ಮತ್ತು ಸರಕಾರೀ ಸಿಬ್ಬಂದಿಗಳಿಗೆ ಪ್ರತೀಕಾರದ ಬೆದರಿಕೆ ಹಾಕಿದ್ದರು.

ಒಂದು ಎಡರಂಗದ ನಿಯೋಗ ರಾಜ್ಯಪಾಲರನ್ನು ಭೇಟಿಯಾಗಿ ರಾಜ್ಯವನ್ನು ಆವರಿಸಿರುವ ಹಿಂಸಾಚಾರ ಮತ್ತು ಭಯೋತ್ಪಾದನೆಯ ವಿವರಗಳಿರುವ ಒಂದು ಸಮಗ್ರ ಮನವಿಯನ್ನು ಸಲ್ಲಿಸಿದೆ. ಸಾಂವಿಧಾನಿಕ ಅಧಿಕಾರಿಗಳು, ಅತ್ಯುನ್ನತ ನ್ಯಾಯಾಂಗ ಕೂಡ ಮಧ್ಯಪ್ರವೇಶಿಸಿ ರಾಜ್ಯದ ನಾಗರಿಕರ ಜೀವ ಮತ್ತು ಆಸ್ತಿಗಳ ರಕ್ಷಣೆಯಾಗುವಂತೆ ಮಾಡಬೇಕಾಗಿದೆ.

ಕೇರಳದಲ್ಲಿ ಬಿಜೆಪಿ ಮೇಲೆ ಸಿಪಿಐ(ಎಂ) ಹಿಂಸಾಚಾರ ನಡೆಸುತ್ತಿದೆ ಎಂದು ಬೊಬ್ಬಿಡುವ ಕೇಂದ್ರ ಸರಕಾರ, ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಕಾರ್ಯಕರ್ತರನ್ನೂ ಬಿಡದ ಮಾರಣಾಂತಿಕ ಧಾಂಧಲೆಗಳ ಬಗ್ಗೆ ದಿವ್ಯಮೌನ ತಳೆದಿದೆ.

ಪಶ್ಚಿಮ ಬಂಗಾಲದಲ್ಲಿ ಈಗ ನಡೆದಿರುವುದು ಪ್ರಜಾಪ್ರಭುತ್ವ ಮತ್ತು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಸರ್ವತೋಮುಖ ದಾಳಿ. ಈ ಬರ್ಬರ ದಾಳಿಗಳನ್ನು ಪ್ರತಿರೋಧಿಸಬೇಕಾಗಿದೆ, ಎಲ್ಲ ರಾಜಕೀಯ ಪಕ್ಷಗಳು ಮತ್ತು ಜನವಿಭಾಗಗಳು ಇದನ್ನು ವಿರೋಧಿಸಬೇಕಾಗಿದೆ. ಈ ಅಗ್ನಿ ಪರೀ–ಕ್ಷೆಯ ಸಮಯದಲ್ಲಿ ದೇಶದ ಸಮಸ್ತ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪಶ್ಚಿಮ ಬಂಗಾಳದ ಎಡರಂಗದ ಜೊತೆಗೆ ನಿಲ್ಲುತ್ತಾರೆ. ಎಷ್ಟೇ ಹಿಂಸಾಚಾರ ಮತ್ತು ಭಯೋತ್ಪಾದನೆ ನಡೆಸಿದರೂ ಪಶ್ಚಿಮ ಬಂಗಾಲದಲ್ಲಿ ಎಡ ಆಂದೋಲನದ ಸಿದ್ಧಾಂತ ಮತ್ತು ರಾಜಕೀಯವನ್ನು ನಿರ್ಮೂಲ ಮಾಡುವುದು ಸಾಧ್ಯವಿಲ್ಲ.

600ಕ್ಕೂ ಹೆಚ್ಚು ಎಡಪಕ್ಷಗಳ ಕಚೇರಿಗಳು 440 ಕಾರ್ಯಕರ್ತರ ಮನೆಗಳು ಧ್ವಂಸ

ಎಡಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ 600ಕ್ಕೂ ಹೆಚ್ಚು ಕಚೇರಿಗಳನ್ನು ಧ್ವಂಸಗೊಳಿಸಲಾಗಿದೆ. ಸುಮಾರಾಗಿ ಎಲ್ಲ ಜಿಲ್ಲೆಗಳಲ್ಲಿ ಸಿಪಿಐ(ಎಂ) ಕಚೇರಿಗಳ ಮೇಲೆ ದಾಳಿ ನಡೆದಿದೆ. ಪಶ್ಚಿಮ ಮೇದಿನಿಪುರ ಜಿಲ್ಲೆಯೊಂದರಲ್ಲೇ ಐದು ದಿನಗಳಲ್ಲಿ 7 ವಲಯ ಸಮಿತಿ ಕಚೇರಿಗಳು, 27 ಸ್ಥಳೀಯ ಸಮಿತಿ ಕಚೇರಿಗಳು ಮತ್ತು 42 ಶಾಖಾ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ, ಅಥವ ಭಸ್ಮಗೊಳಿಸಲಾಗಿದೆ. ಕೊಲ್ಕತ ನಗರದಲ್ಲಿದು ದಿನಗಳಲ್ಲಿ 440 ಎಡ ಕಾರ್ಯಕರ್ತರು ಮತ್ತು ಬೆಂಬಲಿಗರ ಮನೆ ಇಲ್ಲದವರಾಗಿದ್ದಾರೆ. ಅಲ್ಲಿ 52, ಹೂಗ್ಲಿಯಲ್ಲಿ 44, ಪೂರ್ವ ಮೇದಿನಿಪುರದಲ್ಲಿ 20 ಪಕ್ಷದ ಕಚೇರಿಗಳನ್ನು ಟಿಎಂಸಿ ಗೂಂಡಾಗಳು ವಶಪಡಿಸಿಕೊಂಡಿದ್ದಾರೆ, ಧ್ವಂಸಪಡಿಸಿದ್ದಾರೆ.

ಹೊಸ ಪ್ರದೇಶಗಳವರಲ್ಲಿ ಭೀತಿಯ ವಾತಾವರಣ

ಕಳೆದ ಜುಲೈ 15ರಂದು 51 ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ಸೇರಿಕೊಂಡಿದ್ದ ಪ್ರದೇಶಗಳು ವಿಧ್ಯುಕ್ತವಾಗಿ ಭಾರತದ ಭಾಗವಾದವ ಮತ್ತು ಅಲ್ಲಿಯ ಸುಮಾರು 14 ಸಾವಿರ ಮಂದಿ ಮೊದಲ ಬಾರಿಗೆ ಚುನಾವಣೆಗಳಲ್ಲಿ ಮತದಾನ ಮಾಡಿದರು. ಇಲ್ಲಿ 91ಶೇ. ಮತದಾನವಾಗಿತ್ತು. ಮೊದಲ ಬಾರಿಗೆ ಮತದಾನ ಮಾಡಿದ ಸಂತಸದಲ್ಲಿದ್ದ ಈ ಜನರಿಗೆ ಮೇ19 ರಂದು ಆಶ್ಚರ್ಯ ಕಾದಿತ್ತು. ಏಕೆಂದರೆ ಟಿಎಂಸಿ ಗೂಂಡಾಗಳು 35 ಮನೆಗಳಿಗೆ ನುಗ್ಗಿ ಲೂಟಿ ನಡೆಸಿದರು, 400 ಕುಟುಂಬಗಳಿಗೆ 10,000ರೂ. ಮೇಲ್ಪಟ್ಟು 'ದಂಡ' ಹಾಕಿದರು. ಅವರ ಅಪರಾಧ? ಅವರಲ್ಲಿ ಬಹಳಷ್ಟು ಮಂದಿ ಎಡಪಕ್ಷಗಳಿಗೆ ಮತ ನೀಡಿದ್ದರು. ಎಡಪಕ್ಷಗಳ ಕಾರ್ಯಕರ್ತರು ಬಹಳ ವರ್ಷಗಳಿಂದ ಅವರ ಸುಖ–ದುಃಖಗಳನ್ನು ವಿಚಾರಿಸುತ್ತಿದ್ದುದರಿಂದ ಅವರಿಗೆ ಸಮೀಪವಾಗಿದ್ದರು. ಈಗ ಅವರು ಭೀತಿಯಲ್ಲಿ ಬದುಕುತ್ತಿದ್ದಾರೆ. ಹಲವರು ತಮ್ಮ ಗುರುತು ಚೀಟಿಗಳನ್ನು ಹಿಂದಕ್ಕೆ ತಗೊಳ್ಳಿ ಎಂದು ಅಧಿಕಾರಿಗಳಿಗೆ ಹೇಳುತ್ತಿದ್ದಾರಂತೆ.

➡ ಪೂಜಾರಿ ಅವರು ರೂಪಿಸಿರುವ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳಲ್ಲಿ ಬಳಸಿ ಮಾಪನ ಮಾಡಲಾಗಿದೆ. ಈ ಸೂಚ್ಯಂಕಕ್ಕೆ ಆನುಷಂಗಿಕ ದತ್ತಾಂಶಗಳು ಲಭ್ಯವಿಲ್ಲದುದರಿಂದ ಪ್ರತಿ ಜಿಲ್ಲೆಯಲ್ಲಿ ಒಂದು ಗ್ರಾಮವನ್ನು ಆಯ್ಕೆ ಮಾಡಿಕೊಂಡು 50 ದಲಿತ ಕುಟುಂಬ ಘಟಕಗಳನ್ನು ಸಮೀಕ್ಷೆ ಮಾಡಿ ಸಂಗ್ರಹಿಸಿದ ದತ್ತಾಂಶದ ಆಧಾರದ ಮೇಲೆ 30 ಜಿಲ್ಲೆಗಳಿಗೆ ದಲಿತ ಅಭಿವೃದ್ಧಿ ಸೂಚ್ಯಂಕವನ್ನು ಅಳತೆ ಮಾಡಲಾಗಿದೆ. ಅದರ ಪ್ರಕಾರ ಕರ್ನಾಟಕದಲ್ಲಿ ಯಾವ ಜಿಲ್ಲೆಯಲ್ಲಿಯೂ ಸದರಿ ಸೂಚ್ಯಂಕದ ಮೌಲ್ಯ 0.3 ಮೀರಿಲ್ಲ. ಈ ಸೂಚ್ಯಂಕದಲ್ಲಿ 1.00 ಅಭಿವೃದ್ಧಿಯ ಪೂರ್ಣ ಮೌಲ್ಯವಾದರೆ ಅದಕ್ಕಿಂತ ಕಡಿಮೆ ಮೌಲ್ಯವು ದಲಿತರ ಬದುಕಿನ ದುಸ್ಥಿತಿಯನ್ನು ತೋರಿಸುತ್ತವೆ. ಕರ್ನಾಟಕದ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಮಹತ್ವದ ಕೊಡುಗೆ ಇದಾಗಿದೆ. ಸೂಚ್ಯಂಕ ಮೌಲ್ಯ 0.3 ಅನ್ನುವುದು ಒಂದು ಅಖಂಡ ಚಿತ್ರವನ್ನು ಮಾತ್ರ ನೀಡುತ್ತದೆ. ಆದರೆ ಈ ವರದಿಗಳಲ್ಲಿ ದಲಿತರು ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ದುಸ್ಥಿತಿ ಅನುಭವಿಸುತ್ತಿದ್ದಾರೆ ಎಂಬುದನ್ನು ತೋರಿಸಲಾಗಿದೆ. ಈ ಸೂಚ್ಯಂಕವು ಸರ್ಕಾರಕ್ಕೆ ದಲಿತರ ಅಭಿವೃದ್ಧಿ ನೀತಿಯನ್ನು ರೂಪಿಸುವುದಕ್ಕೆ ಉಪಯುಕ್ತವಾಗಿದೆ. ದಲಿತರ ಹಿಂದುಳಿದಿರುವಿಕೆಯ ಮೂಲದಲ್ಲಿ ಸಾಮಾಜಿಕ ತಾರತಮ್ಯದ ಪಾತ್ರ ಆಯಕಟ್ಟಿನದಾಗಿದೆ. ಒಂದು ವೇಳೆ ಸಾಮಾಜಿಕ ತಾರತಮ್ಯ ಅನ್ನುವುದು ಇಲ್ಲದೇ ಹೋಗಿದ್ದರೆ ದಲಿತರ ಅಭಿವೃದ್ಧಿ ಸ್ಥಿತಿಗತಿಯು ಉಳಿದವರ ಸ್ಥಿತಿಗತಿಗೆ ಸಮನಾಗಿರಬೇಕಾಗಿತ್ತು. ಉದಾಹರಣೆಗೆ ರಾಜ್ಯದಲ್ಲಿ ಒಟ್ಟು ಸಾಕ್ಷರತಾ ಪ್ರಮಾಣ ಶೇ75ರಷ್ಟಿದ್ದರೆ ದಲಿತರ ಸಾಕ್ಷರತಾ ಪ್ರಮಾಣ ಶೇ 55ರಷ್ಟಿದೆ. ಇಲ್ಲಿನ ಶೇ20ರಷ್ಟು ಅಂತರವು ತಾರತಮ್ಯದ ಮಾಪನವಾಗಿದೆ. ಎಲ್ಲಿಯವರೆಗೆ ಸಾಮಾಜಿಕ ತಾರತಮ್ಯವನ್ನು ತೊಡೆದು ಹಾಕುವುದು ನಮಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ದಲಿತರ ದುಸ್ಥಿತಿಯನ್ನು ನಿವಾರಿಸುವುದು ಕಷ್ಟದಾಯಕವಾಗುತ್ತದೆ.

ಒಟ್ಟಾರೆ ಕರ್ನಾಟಕವು ಪ್ರಕಟಿಸಿರುವ 30 ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳು ಜಿಲ್ಲೆ ಮತ್ತು ತಾಲ್ಲೂಕ ಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚಿಗಳಾದ ಸಾಕ್ಷರತೆ, ಆರೋಗ್ಯ, ಆಹಾರ ಭದ್ರತೆ, ಮಕ್ಕಳ ಅಭಿವೃದ್ಧಿ, ಲಿಂಗ ಅಸಮಾನತೆ ಮುಂತಾದ ಸಂಗತಿಗಳ ಸ್ಥಿತಿಗತಿ ಯಾವ ಮಟ್ಟದಲ್ಲಿದೆ ಎಂಬುದನ್ನು ತೋರಿಸುತ್ತವೆ. ಈ ವರದಿಗಳನ್ನು ಆಧಾರವಾಗಿಟ್ಟುಕೊಂಡು ಜಿಲ್ಲಾ ಪಂಚಾಯತಿಗಳು ತಮ್ಮ ಜಿಲ್ಲೆಯ ಅಭಿವೃದ್ಧಿ ಯೋಜನೆಯನ್ನು ರೂಪಿಸುವಂತಾಗಬೇಕು. ಈ ವರದಿಗಳ ಬಗ್ಗೆ ಚರ್ಚೆ ನಡೆಯಬೇಕು. ಅತ್ಯಂತ ದುರದೃಷ್ಟದ ಸಂಗತಿಯೆಂದ–ರೆ ಅವು ಪ್ರಕಟವಾಗಿವೆ ಎಂಬುದರ ಬಗ್ಗೆ ಜನರಿಗೆ ಮಾಹಿತಿಯಿಲ್ಲ. ಸರ್ಕಾರವು ಸದರಿ ವರದಿಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರಗಳನ್ನು ಏರ್ಪಡಿಸಿ ಜನರಲ್ಲಿ ಅಭಿವೃದ್ಧಿ ಅನ್ನುವುದು ವರಮಾನವನ್ನು ಸೇರಿಸಿಕೊಂಡು ಜನರ ಧಾರಣಾ ಸಾಮರ್ಥ್ಯಕ್ಕೆ ಸಂಬಂಧಿಸಿದ ಸಂಗತಿ ಅನ್ನುವುದನ್ನು ಮನದಟ್ಟು ಮಾಡಿಕೊಡಬೇಕಾಗಿದೆ. ವರದಿಗಳು ಕೇವಲ ಪ್ರಕಟವಾಗಿ ಬಿಟ್ಟರೆ ಸಾಕಾಗುವುದಿಲ್ಲ. ಅವುಗಳನ್ನು ಅಭಿವೃದ್ಧಿ ಯೋಜನೆ ರೂಪಿಸುವಾಗ ಬಳಸಬೇಕು. ಇವುಗಳನ್ನು ಅಧ್ಯಯನ ಮಾಡಿ ಜನ ಚಳುವಳಿಗಳು ಸರಕಾರದ ಅಭಿವೃದ್ಧಿ ನೀತಿಗಳ ವಿಶ್ಲೇಷಣೆಗೆ, ವಿಮರ್ಶೆಗೆ ಮತ್ತು ತಮ್ಮ ಹೋರಾಟಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು. ●

ಮೋದಿ ಅವರ 'ಸೋಮಾಲಿಯಾ' ಕಮೆಂಟಿನಿಂದ ಮಾನವ ಅಭಿವೃದ್ಧಿ ಪ್ರಣಾಳಿಕೆಯ ಬಗೆಗಿನ ಚರ್ಚೆ ಮುಂಚೂಣಿಗೆ ಬಂದಿದೆ. ನಮ್ಮ ದೇಶದಲ್ಲಿ ರಾಜ್ಯವೊಂದು ತನ್ನ ಎಲ್ಲ ಜಿಲ್ಲೆಗಳ ಮತ್ತು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಒಳಗೊಂಡ ಮೂವತ್ತು ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಏಕಕಾಲದಲ್ಲಿ ಪ್ರಕಟಿಸಿದ ಕೀರ್ತಿಯು ಕರ್ನಾಟಕ್ಕೆ ಸಲ್ಲುತ್ತದೆ. ಈ ಎಲ್ಲ ವರದಿಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ದೊರೆಯುತ್ತವೆ.

ಇದು ಕೆಳಕಂಡ ಕರ್ನಾಟಕ ಸರಕಾರದ ಯೋಜನಾ ವಿಭಾಗದ ವೆಬ್ ತಾಣದಲ್ಲಿ ದೊರೆಯುತ್ತವೆ ಮತ್ತು ಇವನ್ನು ಡೌನ್ ಲೋಡ್ ಮಾಡಬಹುದು

http://planning.kar.nic.in/hdr-karnataka.html

ಈ ಎರಡು ವರ್ಷಗಳು ದೇಶದ ಬಹುಪಾಲು ಜನರ ಮೇಲೆ ತೀವ್ರವಾದ ಆರ್ಥಿಕ ಹೊರೆಗಳು ಹೇರಿಕೆಯಾಗಿದ್ದನ್ನು ಕಂಡಿವೆ. ಎಲ್ಲಾ ಮೂರು ಪ್ರಧಾನ ವಿಷಯಗಳಲ್ಲಿ ಕಡೆಯಲಾಗುತ್ತಿರುವ ಈ ಹೊಸ 'ತ್ರಿಮೂರ್ತಿ' ಎಂದರೆ, ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಭಾರತಕ್ಕೆ ಹಿನ್ನಡೆ ಹಾಗೂ ದೇಶದ ಬಹುತೇಕ ಜನಗಳ ಜೀವನೋಪಾಯದ ಮೇಲೆ ದೊಡ್ಡ ಆಕ್ರಮಣ ಎಂಬುದು ಇಷ್ಟು ಹೊತ್ತಿಗೆ ಸುಸ್ಪಷ್ಟವಾಗುತ್ತಿದೆ. ಆದರೆ ಸರಕಾರ ಸುಪ್ರೀಂಕೋರ್ಟ್‌ನ ಛೀಮಾರಿಯ ಪರಿವೆಯೂ ಇಲ್ಲದೆ, ಆನಂದದಿಂದ ತನ್ನ ದಾರಿಯಲ್ಲೇ ಮುಂದುವರೆಯುತ್ತಿದೆ. ಸಂಭ್ರಮಾಚರಣೆಗೆ, ಜಾಹಿರಾತುಗಳು ಮತ್ತು ಮಾರ್ಕೆಟಿಂಗ್‌ಗೆ 1200 ಕೋಟಿ ರೂ. ಸುರಿಯುತ್ತಿದೆ.



* ಅನುವಾದ: ವಿಶ್ವ

ಮೋದಿ ನೇತೃತ್ವದ ಸರಕಾರದ ಎರಡು ವರ್ಷಗಳು

ಹೊಸ 'ತ್ರಿಮೂರ್ತಿ'ಯ ಕೊಳಕು ಮುಖಗಳು



* ಸೀತಾರಾಮ್ ಯೆಚೂರಿ

ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರಕಾರ ಈ ಮೇ 26ರಂದು ಎರಡು ವರ್ಷಗಳನ್ನು ಪೂರೈಸಿದೆ. ಈ ಸರಕಾರ ಒಂದು ಹೊಸ 'ತ್ರಿಮೂರ್ತಿ'ಯನ್ನು ಕೆತ್ತುತ್ತಿದೆ ಎಂದು ಸಿಪಿಐ (ಎಂ)ನ 21ನೇ ಮಹಾಧಿವೇಶನದ ಕೊನೆಯಲ್ಲಿ ನಾವು ಎಚ್ಚರಿಕೆ ನೀಡಿದ್ದೆವು. ಅದರ ಮೂರು ಮುಖಗಳು ಪ್ರತಿನಿಧಿಸುತ್ತಿರುವುದು:

ಮೊದಲನೆಯದು, ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಗುಣವನ್ನು ಆರ್‌ಎಸ್‌ಎಸ್ ಪ್ರಣೀತ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಪ್ರಯತ್ನದಲ್ಲಿ ಕೋಮುವಾದಿ ಧ್ರುವೀಕರಣವನ್ನು ಅವ್ಯಾಹತವಾಗಿ ಆಕ್ರಮಣಕಾರಿ ರೀತಿಯಲ್ಲಿ ಅನುಸರಿಸುವುದು;

ಎರಡನೆಯದು, ಆರ್ಥಿಕ ಸುಧಾರಣೆಗಳ ನವ-ಉದಾರವಾದಿ ಪಥವನ್ನು ಮನಮೋಹನ್ ಸಿಂಗ್ ನೇತೃತ್ವದಲ್ಲಿ ಯುಪಿಎ ಸರಕಾರ ಅನುಸರಿಸಿದ್ದಕ್ಕಿಂತ ಇನ್ನೂ ಹೆಚ್ಚು ವೇಗವಾಗಿ ಅನುಸರಿಸುವುದು ಹಾಗೂ ವಿಶಾಲ ಜನವಿಭಾಗಗಳ ಮೇಲೆ ಅಭೂತಪೂರ್ವವಾದ ಹೊರೆಗಳನ್ನು ಹೇರುವುದು.

ಮೂರನೆಯದಾಗಿ, ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳ ಮಹತ್ವವನ್ನು ಕುಗ್ಗಿಸಿ ಹೆಚ್ಚೆಚ್ಚಾಗಿ ಸರ್ವಾಧಿಕಾರಿ ಕ್ರಮಗಳನ್ನು ಅನುಸರಿಸುವುದು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯದ ಮೇಲೆ ಸವಾರಿ ಮಾಡುವುದು.

ಈ ಎರಡು ವರ್ಷಗಳ ಆಡಳಿತದ ಅನುಭವ ಈ ಎಚ್ಚರಿಕೆ ಎಷ್ಟು ಸರಿಯಾಗಿದೆ ಎಂಬುದನ್ನು ಪುಷ್ಟೀಕರಿಸುತ್ತದೆ. ಈ ಮೂರೂ ಕ್ಷೇತ್ರಗಳಲ್ಲಿನ ಪರಿಸ್ಥಿತಿ ಹಿಂದೆಂದಿಗಿಂತಲೂ ಈಗ ತೀರಾ ಹದಗೆಟ್ಟಿದೆ.

ಕೋಮುವಾದಿ ಧ್ರುವೀಕರಣದ ಆಕ್ರಮಣ

ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗಿನಿಂದಲೂ ಕೇಂದ್ರ ಸಚಿವ ಸಂಪುಟದ ಸದಸ್ಯರು ಮತ್ತು ಬಿಜೆಪಿ ನಾಯಕರು ದ್ವೇಷಪೂರ್ಣ ಭಾಷಣಗಳ ಸುರಿಮಳೆಯನ್ನೇ ಆರಂಭಿಸಿದರು. ದ್ವೇಷದ ಭಾಷಣಗಳನ್ನು ಒಂದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುವ ಭಾರತದ ಈಗಿನ ಕಾನೂನು ಮತ್ತು ಇಂಡಿಯನ್ ಪೀನಲ್ ಕೋಡ್‌ಗೆ ಅನುಗುಣವಾಗಿ ಆ ರೀತಿಯ ಭಾಷಣ ಮಾಡುವವರ ವಿರುದ್ಧ ನಿಮ್ಮ ಸರಕಾರ ಕ್ರಮ ಕೈಗೊಳ್ಳುವುದೇ ಎಂದು ಮೋದಿ ಪ್ರಧಾನಿಯಾಗಿ ಬಂದ ನಂತರದ ಮೊಟ್ಟಮೊದಲ ಸಂಸತ್ ಅಧಿವೇಶನದಲ್ಲಿ ಅವರನ್ನು ಪ್ರಶ್ನಿಸಲಾಗಿತ್ತು. ಕ್ರಮಕೈಗೊಳ್ಳುವುದು ಒತ್ತಟ್ಟಿಗಿರಲಿ, ಈ ಬಗ್ಗೆ ಸಂಸತ್ತಿಗೆ, ತನ್ಮೂಲಕ ದೇಶದ ಜನರಿಗೆ ಭರವಸೆ ನೀಡಲೂ ಮೋದಿ ಇದುವರೆಗೆ ನಿರಾಕರಿಸಿದ್ದಾರೆ.

ಕೋಮು ವಿಷವನ್ನು ಹರಡಲು ಸರಕಾರಿ ಆಶ್ರಯ ಮತ್ತು ಪ್ರೋತ್ಸಾಹವನ್ನು ಆರ್‌ಎಸ್‌ಎಸ್‌ನ ಎಲ್ಲಾ ಸಂಘಟನೆಗಳು ದೇಶದಾದ್ಯಂತ ಸಂಪೂರ್ಣವಾಗಿ ಬಳಸಿಕೊಳ್ಳುತ್ತಿವೆ. ನರೇಂದ್ರ ಧಾಬೋಲ್ಕರ್, ಗೋವಿಂದ ಪನ್ಸಾರೆ ಮತ್ತು ಎಂ.ಎಂ. ಕಲಬುರ್ಗಿ ಅವರನ್ನು ಹಾಡುಹಗಲೇ ಹತ್ಯೆ ಮಾಡಲಾಗಿದ್ದು ಅವುಗಳ ವಿರುದ್ಧ ದೇಶದಾದ್ಯಂತ ಬುದ್ಧಿಜೀವಿಗಳು, ಸಾಹಿತಿಗಳು, ವಿಜ್ಞಾನಿಗಳು, ಇತಿಹಾಸಕಾರರು ಮತ್ತಿತರರು ಅಭೂತಪೂರ್ವ ರೀತಿಯಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದರು. ಕೆಲವರಂತೂ ಈ ಹತ್ಯೆಗಳಿಗೆ ಪ್ರತಿಭಟನೆಯಾಗಿ ತಮ್ಮ ಪ್ರಶಸ್ತಿಗಳನ್ನೇ ವಾಪಸ್ ಮಾಡಿದರು. ಮೋದಿ ಸರಕಾರ ಈ ಪ್ರತಿಭಟನೆಗಳನ್ನು ಭಂಡತನದಿಂದ ಕಡೆಗಣಿಸಿತು.

ಲವ್ ಜಿಹಾದ್, ಘರ್ ವಾಪಸಿ, ಗೋಮಾಂಸ ಭಕ್ಷಣೆ ವಿರುದ್ಧ, ವಸ್ತ್ರಸಂಹಿತೆ ಹೇರಿಕೆ ಮತ್ತು (ಅ)ನೈತಿಕ ಪೋಲೀಸ್‌ಗಾರಿಕೆ- ಇವೇ ಮೊದಲಾದ ವಿವಿಧ ಕೋಮುವಾದಿ ಪ್ರಚಾರಗಳು ಧಾರ್ಮಿಕ ಅಲ್ಪಸಂಖ್ಯಾತರು ಅದರಲ್ಲೂ ವಿಶೇಷವಾಗಿ ಮುಸ್ಲಿಮರ ವಿರುದ್ಧ ದ್ವೇಷವನ್ನು ಹುಟ್ಟುಹಾಕಲು ತಮ್ಮದೇ ಆದ ಕೊಡುಗೆಯನ್ನು ನೀಡಿದವು. ದನದ ಮಾಂಸ ತಿಂದರೆಂಬ ಕಾರಣಕ್ಕೆ ಅಖ್‌ಲಾಖ್‌ರನ್ನು ಹತ್ಯೆ ಮಾಡಿದ್ದು ಅಥವಾ ಗೋಹತ್ಯೆಗೆ ಪ್ರೋತ್ಸಾಹ ನೀಡುತ್ತಿದ್ದಾರೆಂಬ ತಲೆಬುಡವಿಲ್ಲದ ಆರೋಪದ ಮೇಲೆ ಜಾರ್ಖಂಡ್‌ನ ಲಾತೆಹರ್‌ನಲ್ಲಿ ಇಬ್ಬರು ಯುವಕರನ್ನು ಸಾರ್ವಜನಿಕವಾಗಿ ನೇಣು ಹಾಕಿದ್ದು ಪರಿಸ್ಥಿತಿ ಇನ್ನಷ್ಟು ವಿಷಮಗೊಳ್ಳುವಂತೆ ಮಾಡಿದವು.

ಅದೇ ಹೊತ್ತಿಗೆ, ಇಡೀ ಶಿಕ್ಷಣ ವ್ಯವಸ್ಥೆಯನ್ನು ಮತ್ತು ಅಕಾಡೆಮಿಕ್ ಸಂಶೋಧನೆಯನ್ನು ಕೋಮುವಾದೀಕರಿಸುವ ವ್ಯವಸ್ಥಿತ ಪ್ರಯತ್ನವನ್ನು ಆರಂಭಿಸಲಾಯಿತು. ಈ ಸಂಸ್ಥೆಗಳ ಪ್ರಮುಖ ಹುದ್ದೆಗಳಿಗೆ ಆರ್‌ಎಸ್‌ಎಸ್ ಪ್ರಚಾರಕರನ್ನು ನೇಮಿಸುವ ಪ್ರವೃತ್ತಿ ಮುಂದುವರಿದಿದೆ. ಶಾಲೆ-ಕಾಲೇಜುಗಳ ಪಠ್ಯಕ್ರಮವನ್ನು ಮರು-ಬರೆಸುವ ಪ್ರಯತ್ನಗಳೂ ಎಗ್ಗಿಲ್ಲದೆ ಮುಂದುವರಿದಿವೆ. ಜೆಎನ್‌ಯು, ಪುಣೆ ಫಿಲ್ಮ್ ಇನ್‌ಸ್ಟಿಟ್ಯೂಟ್, ಐಐಟಿಗಳು ಮುಂತಾದ ಪ್ರಮುಖ ಶಿಕ್ಷಣ ಸಂಸ್ಥೆಗಳು ಹಾಗೂ ಇತರ ಪ್ರಮುಖ ಶಿಕ್ಷಣ ಕೇಂದ್ರಗಳ ಮೇಲಿನ ನಗ್ನ ದಾಳಿಗಳು ಜಾತ್ಯತೀತ ಪ್ರಗತಿಪರ ಮೌಲ್ಯಗಳ ಮೇಲಿನ ದಾಳಿ ಹಾಗೂ ವಿದ್ಯಾರ್ಥಿ ಮತ್ತು ಶಿಕ್ಷಕ ಸಮುದಾಯಕ್ಕೆ ಕಿರುಕುಳ ಕೊಟ್ಟು ಅವರೆಲ್ಲ ವಿಷಮಯ ಹಿಂದುತ್ವ ಸಿದ್ಧಾಂತವನ್ನು ಗುಲಾಮರಂತೆ ಒಪ್ಪಿಕೊಳ್ಳುವ ವ್ಯಕ್ತಿಗಳಾಗಿ ಮಾಡುವ ಯತ್ನದ ಭಾಗವಾಗಿದೆ. ಆಧಾರರಹಿತ ಹಾಗೂ ಕೃತಕವಾಗಿ ಸೃಷ್ಟಿಸಲಾದ ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ಜೆಎನ್‌ಯು ವಿದ್ಯಾರ್ಥಿಗಳ ಮೇಲೆ ದೇಶದ್ರೋಹದ ಆಪಾದನೆಗಳನ್ನು ಹೊರಿಸುವ ಮಟ್ಟಕ್ಕೂ ಮೋದಿ ಸರಕಾರ ಹೋಯಿತು. ಒಬ್ಬ ಉದಯೋನ್ಮುಖ ದಲಿತ ಸಂಶೋಧನಾ ವಿದ್ವಾಂಸ ರೋಹಿತ್ ವೇಮುಲ ಅವರ ದುರಂತ ಆತ್ಮಹತ್ಯೆಗೆ ಕಾರಣವಾದ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ ಮೇಲಿನ ದಾಳಿಯು, ಹಿಂದುತ್ವ ವ್ಯವಸ್ಥೆಯ ಮೇಲ್ಜಾತಿ ಪಕ್ಷಪಾತಕ್ಕೆ ಹಿಡಿದ ಕನ್ನಡಿಯಾಗಿದೆ.



ಹ್ಯಾಪಿ ಸೆಕೆಂಡ್ ಬರ್ತ್‌ಡೇ- ಜನಗಳಿಗೆ ಖಾಲಿ ತಟ್ಟೆ !

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಭಾರತೀಯ ಗಣರಾಜ್ಯವನ್ನು ಆರ್‌ಎಸ್‌ಎಸ್ ಪ್ರಣೀತ 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವ ಪ್ರಯತ್ನದ ಭಾಗವಾಗಿ ಹಿಂದೂ ಪುರಾಣಗಳಿಗೆ ಭಾರತೀಯ ಇತಿಹಾಸದ ಹಾಗೂ ಹಿಂದೂ ಧರ್ಮಶಾಸ್ತ್ರಕ್ಕೆ ಭಾರತೀಯ ತತ್ವಶಾಸ್ತ್ರದ ಮುಖವಾಡವನ್ನು ತೊಡಿಸಲು ಮೋದಿ ಸರಕಾರ ಯತ್ನಿಸುತ್ತಿದೆ.

ಈ ಸಾಲಿನಲ್ಲಿ ಇತ್ತೀಚಿನದ್ದು ಎಂದರೆ ಹಿಂದುತ್ವ ಭಯೋತ್ಪಾದಕ ಸಂಘಟನೆಗಳ ಮುಂಚೂಣಿಯ ವ್ಯಕ್ತಿಗಳನ್ನು ದೋಷಮುಕ್ತರಾಗಿ ಮಾಡಲು ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ)ಯನ್ನು ದುರುಪಯೋಗಪಡಿಸಿಕೊಂಡು ಮಾಲೆಗಾಂವ್ ಭಯೋತ್ಪಾದನೆ ದಾಳಿಗಳ ಸಂಬಂಧ ಕಲೆಹಾಕಲಾದ ಯಾವ ದೋಷಗಳೂ ಕಾಣದ ದಾಖಲೆಗಳನ್ನು ಭಡಮತನದಿಂದ ತಿರಸ್ಕರಿಸಿರುವುದು. ಈ ಪ್ರಕರಣವು ಹಿಂದುತ್ವ ಭಯೋತ್ಪಾದನೆ ಸಂಘಟನೆಗಳಿಗೆ ಸರಕಾರದಿಂದಲೇ ಆಶ್ರಯ ಮತ್ತು ರಕ್ಷಣೆ ಸಿಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಮಾಲೆಗಾಂವ್ ಭಯೋತ್ಪಾದಕ ದಾಳಿಯು ತನಿಖೆಯ ಜಾಡು ಹೈದರಾಬಾದ್ ಮೆಕ್ಕಾ ಮಸೀದಿ, ಅಜ್ಮೀರ್ ದರ್ಗಾ ಷರೀಫ್ ಮತ್ತು ಸಮ್‌ಝೋತಾ ಎಕ್ಸ್‌ಪ್ರೆಸ್ ಸ್ಫೋಟಗಳ ಕೊಂಡಿಗಳತ್ತ ಒಯ್ದಿತ್ತು. ಈಗ ಇವೆಲ್ಲದರ ತನಿಖೆಯ ಜಾಡನ್ನು ದುರ್ಬಲಗೊಳಿಸಿದಂತಾಗಿದೆ.

ನಮ್ಮ ದೇಶದಿಂದ ಭಯೋತ್ಪಾದನೆಯನ್ನು ನಿರ್ಮೂಲ ಮಾಡಬೇಕೆಂಬ ಭಾರತದ ಹೋರಾಟವನ್ನು ಮೋದಿ ಸರಕಾರ ದುರ್ಬಲಗೊಳಿಸುತ್ತಿದೆ. ಭಾರತದಲ್ಲಿ ಭಯೋತ್ಪಾದನೆಗೆ ಧರ್ಮ, ಜಾತಿ ಅಥವಾ ಪ್ರಾಂತ್ಯದ ಮೇರೆಯಿಲ್ಲ ಎನ್ನುವುದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ. ಯಾವುದೇ ಭಯೋತ್ಪಾದನೆ ದಾಳಿಗಳು ಸ್ವೀಕಾರಾರ್ಹವಲ್ಲ ಮತ್ತು ಸಹನೀಯವಲ್ಲ ಎಂದು ಪರಿಗಣಿಸುವ ಬದಲು, ಮೋದಿ ಸರಕಾರ ಹಿಂದುತ್ವ ಭಯೋತ್ಪಾದನೆಯನ್ನು ಪೋಷಿಸುತ್ತಿದೆ.

ಇದೇ ರೀತಿಯ ಕೋಮು ದ್ವೇಷದ ಬಹಳಷ್ಟು ದೃಷ್ಟಾಂತಗಳು ದೇಶದಾದ್ಯಂತ ನಮ್ಮ ಮುಂದಿವೆ. ಎಲ್ಲೋ ಇವೆಲ್ಲವನ್ನೂ ದಾಖಲುಗೊಳಿಸಲಾಗುತ್ತಿದೆ ಎಂದು ಆಶಿಸೋಣ. ಆದರೆ, ನಮ್ಮ ಗಣರಾಜ್ಯದ ಬುನಾದಿ ಮೌಲ್ಯಗಳನ್ನು ನೆಚ್ಚುವ ಜಾತ್ಯತೀತ ಮನೋಧರ್ಮದ ಜನರು ದೇಶದಾದ್ಯಂತ ದನಿ ಎತ್ತುತ್ತಿದ್ದಾರೆ ಎನ್ನುವುದು ತುಂಬಾ ಮಹತ್ವದ್ದು.

ಹೆಚ್ಚುತ್ತಿರುವ ಸರ್ವಾಧಿಕಾರಶಾಹಿ

ಈ ಎರಡು ವರ್ಷಗಳ ಅವಧಿಯಲ್ಲಿ ಮೋದಿ ಸರಕಾರ ತನ್ನ ಸಂಕುಚಿತ ಉದ್ದೇಶಗಳ ಈಡೇರಿಕೆಗಾಗಿ ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳ ಮಹತ್ವವನ್ನು ಕುಂದಿಸುವ ದಿಸೆಯಲ್ಲಿ ವ್ಯವಸ್ಥಿತ ಹೆಜ್ಜೆಗಳನ್ನು ಇರಿಸಿದೆ. ಬಿಜೆಪಿ ಬೆಂಬಲದಿಂದ ಸಂಸತ್ತು ಅಂಗೀಕರಿಸಿದ ಭೂ ಸ್ವಾಧೀನ ಕಾನೂನು-2013 ಅನ್ನು ಸರಣಿ ಸುಗ್ರೀವಾಜ್ಞೆಗಳ ಮೂಲಕ ತಿದ್ದುಪಡಿ ಮಾಡಲು ಸರಕಾರ ಮುಂದಾಯಿತು. ಕೃಷಿ ಬಿಕ್ಕಟ್ಟಿನಿಂದ ಈಗಾಗಲೇ ಹೈರಾಣ ಆಗಿರುವ ರೈತರ ಹಿತವನ್ನು ಬಲಿಗೊಟ್ಟು ಕಾರ್ಪೊರೇಟ್ ಕಂಪೆನಿಗಳಿಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಸುಲಭಗೊಳಿಸುವುದು ಇದರ ಉದ್ದೇಶವಾಗಿತ್ತು. ಮೂರು ಬಾರಿ ಸುಗ್ರೀವಾಜ್ಞೆ ಹೊರಡಿಸಿದರೂ ರಾಜ್ಯಸಭೆಯ ಅನುಮೋದನೆ ಸಿಗದಿದ್ದುದರಿಂದ ಅಂತಿಮವಾಗಿ ಮೋದಿ ಸರಕಾರ ಈ ಪ್ರಯತ್ನವನ್ನು ಕೈಬಿಡಬೇಕಾಯಿತು.


ಲೋಕಸಭೆಯಲ್ಲಿ ಭಾರೀ ಬಹುಮತ ಇರುವುದರಿಂದ ಬಹುಮತದ ಅಹಮಿಕೆಯಿಂದ ಸಾಗುವಂತೆ ಬಹುಮತವಿಲ್ಲದ ರಾಜ್ಯಸಭೆಯನ್ನು ಮೀರಿಹೋಗುವ ಉದ್ದೇಶದಿಂದ ಮೋದಿ ಸರಕಾರ ಶಾಸಕಾಂಗ ಮಸೂದೆಗಳನ್ನು 'ಹಣಕಾಸು ಮಸೂದೆ'ಗಳು ಎಂದು ಮಂಡಿಸುವ ಕಪಟೋಪಾಯಕ್ಕೆ ಇಳಿದಿದೆ. 'ಹಣಕಾಸು ಮಸೂದೆ'ಗಳಿಗೆ ರಾಜ್ಯಸಭೆಯ ಅಂಗೀಕಾರ ಅಗತ್ಯವಿಲ್ಲದಿರುವುದರಿಂದ ಅದು ಈ ಹಾದಿಯನ್ನು ಬಳಸಿತು. ಅದು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ರಾಜ್ಯಸಭೆಯನ್ನು ಬದಿಗೊತ್ತಲಿಕ್ಕಾಗಿ ಸಾಂವಿಧಾನಿಕ ನಿಯಮಗಳನ್ನು ತಪ್ಪಾಗಿ ಅರ್ಥೈಸುತ್ತಿದೆ.


ಆಧಾರ್ ಮಸೂದೆ ಅಂಥ ಮಸೂದೆಗಳಲ್ಲೊಂದಾಗಿದೆ. ನಿದಕ್ಕೆ ಕಾನೂನು ರೂಪ ಕೊಟ್ಟಿರುವುದನ್ನು ಹಾಗೂ ಅದನ್ನು ಒಂದು 'ಹಣಕಾಸು ಮಸೂದೆ' ಎಂದು ಕರೆದಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ರಿಟ್ ಅರ್ಜಿಯನ್ನು ಸುಪ್ರೀಂಕೋರ್ಟ್ ವಿಚಾರಣೆಗೆ ಅಂಗೀಕರಿಸಿದೆ. ಅದೀಗ ಮೂವರು ನ್ಯಾಯಾಧೀಶರ ಪೀಠದ ಮುಂದಿದೆ.

ಮೋದಿ ಸರಕಾರದ ಸರ್ವಾಧಿಕಾರಿ ಮುಖವನ್ನು ನ್ಯಾಯಸಮ್ಮತವಾಗಿ ಆಯ್ಕೆಯಾದ ಪ್ರತಿಪಕ್ಷಗಳ ಸರಕಾರಗಳನ್ನು ವಜಾ ಮಾಡಲು ಸಂವಿಧಾನದ 356ನೇ ವಿಧಿಯನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಂಡ ರೀತಿ ಬಯಲಿಗೆಳೆದಿದೆ. ಸುಪ್ರೀಂಕೋರ್ಟ್ ಮಧ್ಯಪ್ರವೇಶ ಮಾಡಿದ್ದರಿಂದ ಉತ್ತರಾಖಂಡ್‌ನಲ್ಲಿ ಅದರ ಪ್ರಯತ್ನಗಳಿಗೆ ಹಿನ್ನಡೆಯಾಗಿದೆ. 356ನೇ ವಿಧಿಯ ದುರುಪಯೋಗಕ್ಕೆ ಯತ್ನಿಸಿದ ಕೇಂದ್ರದ ನಗ್ನ ಪ್ರಯತ್ನವನ್ನು ಸರ್ವೋನ್ನತ ನ್ಯಾಯಾಲಯ ಕಟುವಾಗಿ ಖಂಡಿಸಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳು, ಜೀವಿಸುವ ಹಕ್ಕು ಮತ್ತು ಸ್ವಾತಂತ್ರ್ಯದ

ಪುಟ 11 ನೋಡಿ

ಬೆಟ್ಟದಿಂದ ಬಟ್ಟಲಿಗೆ ಕಾಫಿ-ಟೀ ತರುವ ಕಾರ್ಮಿಕರ ಯೂನಿಯನಿನ 60 ವರ್ಷಗಳ ರೋಚಕ ಇತಿಹಾಸ







ಕಾಫಿಯನ್ನು ಬೆಟ್ಟದಿಂದ ಬಟ್ಟಲಿಗಿಳಿಸುವುದರ ಹಿಂದೆ ಲಕ್ಷಾಂತರ ಕಾರ್ಮಿಕರ ಶ್ರಮ ಅಡಗಿದೆ. ಇಂತಹ ಕಾರ್ಮಿಕರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ನಡೆಸಿಕೊಂಡು ಬರುತ್ತಿರುವ ಕರ್ನಾಟಕ ಪ್ರೊವಿನ್ಷ್ಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಪ್ರಾರಂಭವಾಗಿ 2016ರ ಮೇ ತಿಂಗಳಿಗೆ 60 ವರ್ಷಗಳನ್ನು ಪೂರೈಸಿದೆ. 1956 ಮೇ 17 ರಂದು ನೋಂದಣಿಯಾದ ಈ ಕಾರ್ಮಿಕ ಸಂಘವು ರಾಜ್ಯದಲ್ಲಿ ಹಿರಿಯದಾದ ಕೆಲವೇ ಕಾರ್ಮಿಕ ಸಂಘಗಳಲ್ಲಿ ಇದೂ ಕೂಡ ಒಂದು. ಈ ಯೂನಿಯನಿನ ನೇತೃತ್ವದಲ್ಲಿ ಪ್ಲಾಂಟೇಶನ್ ಕಾರ್ಮಿಕರ ಹೋರಾಟದ ರೋಚಕ ಇತಿಹಾಸದ ಒಂದು ಝಲಕ್ ಇಲ್ಲಿದೆ. ಇದೇ ಮೇ 30ರಂದು ಸಕಲೇಶಪುರದಲ್ಲಿ ಈ ಸಂಘದ ವಜ್ರಮಹೋತ್ಸವವನ್ನು ವಿಶೇಷ ಸಮಾವೇಶ ನಡೆಸುವುದರೊಂದಿಗೆ ಆಚರಿಸಲಾಗುತ್ತಿದೆ.

ಎಚ್.ಆರ್. ನವೀನ್‌ಕುಮಾರ್

ಬಹುತೇಕ ಜನರ ದಿನಚರಿ ಆರಂಭವಾಗುವುದೇ ಬೆಳಗಿನ ಕಾಫಿ ಸೇವನೆಯಿಂದ. ಇನ್ನು ಈ ಕಾಫಿ ಎಷ್ಟರ ಮಟ್ಟಿಗೆ ನಮ್ಮನ್ನು ಆವರಿಸಿದೆ ಎಂದರೆ ಮಾತುಗಳು ಕಾಫಿ ಅಥವಾ ಟೀ ಜೊತೆಗೆ ಆರಂಭವಾಗುವುದು. ಒಂದು ಹಳ್ಳಿಯಲ್ಲಿ ಸಣ್ಣ ಗೂಡಂಗಡಿಯಿಂದ ದೊಡ್ಡ ದೊಡ್ಡ ನಗರಗಳಲ್ಲಿ ಐಶಾರಾಮಿ ಕಾಫಿಡೇ ಗಳವರೆಗೆ ಎಲ್ಲಾ ರೀತಿಯಲ್ಲೂ ಎಲ್ಲರಿಗೂ ಕಾಫಿ ಪ್ರಿಯವಾದದ್ದು. ಇದು ದೇಶಗ ಗಡಿಗಳನ್ನು ದಾಟಿ ಎಲ್ಲಾ ರೀತಿಯ ಸಂಸ್ಕೃತಿಯೊಳಗೂ ಬೆರೆತು ಹೋಗಿದೆ. ಇಂತಹ ಕಾಫಿಯನ್ನು ಬೆಟ್ಟದಿಂದ ಬಟ್ಟಲಿಗಿಳಿಸುವುದರ ಹಿಂದೆ ಲಕ್ಷಾಂತರ ಕಾರ್ಮಿಕರ ಶ್ರಮ ಅಡಗಿದೆ.

ಕಾಫಿ ಒಂದು ತೋಟಗಾರಿಕಾ ಬೆಳೆ. ಇದನ್ನು ಬೆಳೆಯಲು ಮಲೆನಾಡಿನ ಬೆಟ್ಟಗಳ ಪ್ರದೇಶ ಮತ್ತು ಅಲ್ಲಿನ ವಾತಾವರಣ ಉತ್ತಮವಾದದ್ದು. ಎಲ್ಲರ ಮನೆಗಳ ಡಬ್ಬಗಳಲ್ಲಿ ಸೇರಿರುವ ಕಾಫಿಯನ್ನು ಬೆಳೆಯುವ ಕಾಫಿ ತೋಟಗಳಲ್ಲಿ (ಪ್ಲಾಂಟೇಷನ್) ಕೆಲಸ ಮಾಡುವ ಕಾರ್ಮಿಕರ ಬದುಕು-ಬವಣೆ ಹೇಳತೀರದು ಮತ್ತು ಅವರು ಈ ಕಾಫಿಯನ್ನು ಬೆಳೆದು ನಮ್ಮ ಕೈಗಿಡುವವರೆಗಿನ ಅವರ ಶ್ರಮ ಅಗಾದವಾದದ್ದು. ಕರ್ನಾಟಕದಲ್ಲಿ ಕಾಫಿ ಬೆಳೆಯನ್ನು ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ. ಈ ಮೂರು ಜಿಲ್ಲೆಯಲ್ಲಿ ಲಕ್ಷಾಂತರ ಕಾರ್ಮಿಕರು ಈ ತೋಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹ ಕಾರ್ಮಿಕರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ನಿರಂತರ ಹೋರಾಟವನ್ನು ನಡೆಸಿಕೊಂಡು ಬರುತ್ತಿರುವ ಕರ್ನಾಟಕ ಪ್ರೊವಿನ್ಷ್ಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಪ್ರಾರಂಭವಾಗಿ 2016ರ ಮೇ ತಿಂಗಳಿಗೆ 60 ವರ್ಷಗಳನ್ನು ಪೂರೈಸಿದೆ. 1956 ಮೇ 17 ರಂದು ನೋಂದಣಿಯಾದ ಈ ಕಾರ್ಮಿಕ ಸಂಘವು ರಾಜ್ಯದಲ್ಲಿ ಹಿರಿಯದಾದ ಕೆಲವೇ ಕಾರ್ಮಿಕ ಸಂಘಗಳಲ್ಲಿ ಒಂದು.

ಬ್ರಿಟೀಷರು ಮತ್ತು ನಂತರದ ಕಾಲಘಟ್ಟಗಳಲ್ಲಿ ತೋಟಗಳನ್ನು ಅಭಿವೃದ್ಧಿಪಡಿಸಲು ಮಾಲೀಕರು ಜನರನ್ನು ಬೇರೆಡೆಗಳಿಂದ ಕರೆತರುತ್ತಿದ್ದರು. ಉದಾ: ಕರ್ನಾಟಕದ ತೋಟ ಮಾಲೀಕರು ಕೆಲಸಗಳಿಗೆ ಕಾರ್ಮಿಕರನ್ನು ತಮಿಳುನಾಡು, ಕೇರಳ ಮತ್ತು ಮಂಗಳೂರುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ತರುತ್ತಿದ್ದರು. ಸ್ಥಳೀಯರನ್ನು ಕೆಲಸಕ್ಕೆ ಸೇರಿಸಿಕೊಂಡರೆ ವಿಪರೀತ ಶೋಷಣೆ ಮಾಡಲು ಸಾಧ್ಯವಾಗುವುದಿಲ್ಲ ಎಂಬುದೇ ಇದರ ಮುಖ್ಯ ಉದ್ದೇಶವಾಗಿತ್ತು. ಬೇರೆಡೆಗಳಿಂದ ಕರೆತಂದ ಜನಗಳನ್ನು ಜೀತದಾಳುಗಳಂತೆ ಯಾವುದೇ ಕೂಲಿ ನೀಡದೆ ಬದುಕಲು ಅಗತ್ಯವಿರುವಷ್ಟು ಆಹಾರ ನೀಡುತ್ತಾ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ನಂತರ ಇವರು ಜಾಗೃತರಾಗಿ ಕಾರ್ಮಿಕ ಸಂಘವನ್ನು ಕಟ್ಟಿಕೊಂಡು ಅವರ ಹಕ್ಕುಗಳನ್ನು ಕೇಳಲು ಪ್ರಾರಂಭಿಸಿ ಕಾರ್ಮಿಕರ ಒಗ್ಗಟ್ಟನ್ನು ಪ್ರದರ್ಶಿಸಲು ಪ್ರಾರಂಭಿಸಿದರು.

ಕರ್ನಾಟಕದ ಕಾಫಿ ತೋಟಗಳಲ್ಲಿ 'ಕಂಗಾಣಿ' ಪದ್ದತಿ ಅನುಷ್ಠಾನದಲ್ಲಿದ್ದಿತು. ಬಹುತೇಕ ಪ್ಲಾಂಟರುಗಳು ತಮಗೆ ಬೇಕಾದ ಕೆಲಸಗಾರರನ್ನು ಕಂಗಾಣಿಗಳ ಅಂದರೆ ಮೇಸ್ತ್ರೀಗಳ ಅಥವಾ ದಳ್ಳಾಳಿಗಳ ಮೂಲಕ ತೆಗೆದುಕೊಳ್ಳುತ್ತಿದ್ದರು. ಈ ಪದ್ದತಿಯಿಂದ ಪ್ಲಾಂಟರಿಗೂ ಕಾರ್ಮಿಕರಿಗೂ ಸಂಬಂಧವೇ ಇರುತ್ತಿರಲಿಲ್ಲ. ಕೆಲಸಗಾರರನ್ನು ತರುವ, ಅವರನ್ನು ಹೇಗೆಂದರೆ ಹಾಗೆ ನಡೆಸಿಕೊಳ್ಳುವ ಕೆಲಸ ಕಂಗಾಣಿಯದು. ಈ ಪದ್ದತಿಗೆ ಕಾಲಕ್ರಮೇಣ ಬಹಳ ವಿರೋಧ ಬಂದಿತು. ಕಂಗಾಣಿ ಪದ್ದತಿಯನ್ನು ತಪ್ಪಿಸಲು ಭಾರತ ಸರ್ಕಾರವು 1951ರಲಿ ಕೆಲವು ನಿಯಮಗಳನ್ನು ಜಾರಿಗೆ ತಂದಿತು. ಕಂಗಾಣಿ ಪದ್ದತಿಯನ್ನು ಹೋಗಲಾಡಿಸುವ ಕೆಲಸ 1958ರ ವೇಳೆಗೆ ಸಂಪೂರ್ಣವಾಯಿತು. ಪ್ಲಾಂಟರುಗಳು ತಮಗೆ ಬೇಕಾದ ಕಾರ್ಮಿಕರನ್ನು ನೇರವಾಗಿ ನೇಮಿಸಿಕೊಳ್ಳುವ ಪದ್ದತಿ ಬಂದಿತು.

ಅರವತ್ತು ವರ್ಷಗಳ ಹಿಂದೆ ತೋಟ ಕೆಲಸಗಾರರಿಗೆ ಸಿಕ್ಕುತ್ತಿದ್ದ ಕೂಲಿ ಗಂಡಿಗೆ ದಿವಸಕ್ಕೆ ಒಂದು ರೂಪಾಯಿ, ಹೆಣ್ಣಿಗೆ ಒಂಬತ್ತಾಣೆ, ಸಣ್ಣವರಿಗೆ ಆರಾಣೆ. ಬೋನಸ್, ಗ್ರಾಚುಟಿ ಮೊದಲಾದ ಯಾವ ಸೌಲಭ್ಯಗಳೂ ತೋಟ ಕಾರ್ಮಿಕರಿಗೆ ಸಿಕ್ಕುತ್ತಿರಲಿಲ್ಲ. ಮನರಂಜನಾ ಸಾಧನಗಳು ತೀರಾ ಕಡಿಮೆಯಾಗಿತ್ತು, ಚಲನಚಿತ್ರ ಮಂದಿರಗಳು, ಟೆಂಟ್ ಸಿನಿಮಾಗಳು ಮಲೆನಾಡಿನಲ್ಲಿ ಅಪರೂಪವಾಗಿದ್ದವು, ಆಗ ಟ್ರಾನ್‌ಸಿಸ್ಟರ್ ರೇಡಿಯೋ ಇರಲಿಲ್ಲ. ಓದು ಬರಹ ಕಲಿಯುವ ಅವಕಾಶಗಳು ತೋಟ ಕಾರ್ಮಿಕರಿಗೆ, ಅವರ ಮಕ್ಕಳಿಗೆ ಏನೇನೂ ಇರಲಿಲ್ಲವೆಂದರೆ ಅತಿಶಯವಾಗಲಾರದು. ತೋಟ ಕೆಲಸಗಾರರನ್ನು ಜೀತದಾಳುಗಳಂತೆ ನಡೆಸಿಕೊಳ್ಳಲಾಗುತ್ತಿತ್ತು, ಸಣ್ಣ ಪುಟ್ಟ ಕಾರಣಗಳಿಗೆಲ್ಲಾ ಹಿಂದೆ ಪ್ಲಾಂಟರುಗಳು, ರೈಟರುಗಳು ಕೆಲಸಗಾರರನ್ನು ಹೊಡೆಯುತ್ತಿದ್ದರು, ಒದೆಯುತ್ತಿದ್ದರು, ಕಂಬಕ್ಕೆ ಇಲ್ಲವೇ ಮರಕ್ಕೆ ಕಟ್ಟಿ ಹಾಕಿ ಬಾಸುಂಡೆ ಬರುವಂತೆ ಬಾರಿಸುತ್ತಿದ್ದರು. ತೋಟಗಳಲ್ಲಿ ಕೆಲಸ ಮಾಡುವವರು ಬಹುತೇಕ ದಲಿತ ಮತ್ತು ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದು ಈಗಲೂ ಅದೇ ಪರಿಸ್ಥಿತಿ ಮುಂದುವರೆದಿದೆ.

ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸ್ಥಾಪನೆ

ಇಂತಹ ಪರಿಸ್ಥಿತಿಯಲ್ಲಿ ಕೆಂಬಾವುಟದಡಿಯಲ್ಲಿ ತೋಟ ಕಾರ್ಮಿಕರ ಸಂಘಟನೆ 1946ರ ವೇಳೆಗೆ ಕೊಡಗಿನಲ್ಲಿಯೂ 1956ರ ವೇಳಗೆ ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿಯೂ ಪ್ರಾರಂಭವಾಯಿತು. ಹಾಸನ ಜಿಲ್ಲೆಯ ಮಂಜ್ರಾಬಾದ್ ತಾಲೂಕಿನಲ್ಲಿರುವ (ಈಗಿನ ಸಕಲೇಶಪುರ ತಾಲ್ಲೂಕು) ಕಾಡುಮನೆ ಟೀ ತೋಟ ಕರ್ನಾಟಕದಲ್ಲಿರುವ ಪ್ಲಾಂಟೇಷನ್‌ಗಳ ಪೈಕಿ ಅತಿ ದೊಡ್ಡ ತೋಟ. ಆಗ ಸುಮಾರು ಎರಡು ಸಾವಿರ ಕಾರ್ಮಿಕರು ಆ ತೋಟದಲ್ಲಿ ದುಡಿಯುತ್ತಿದ್ದರು. ಕಾಡುಮನೆ ಎಸ್ಟೇಟಿನ ತಮಿಳು ಕಾರ್ಮಿಕರಲ್ಲಿ ಕೆಲವರಿಗೆ ಸಂಘ ಬೇಕೆನಿಸಿತು. ತಮ್ಮ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಒಗ್ಗಟ್ಟಾಗಬೇಕು, ಸಂಘವನ್ನು ಕಟ್ಟಬೇಕು ಎನಿಸಿತು. ಅವರಲ್ಲಿ ಕೆಲವರು ಕಮ್ಯುನಿಸ್ಟ್ ಶಾಸಕ ಕೆ.ಎಸ್. ವಾಸನ್‌ರನ್ನು ಹುಡುಕಿಕೊಂಡು ಹೋದರು. ಪರಸ್ಪರ ಸಮಾಲೋಚನೆ, ಯೋಜನೆಗಳ ಪರಿಣಾಮವಾಗಿ ಕರ್ನಾಟಕ ಪ್ರೋವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸ್ಥಾಪನೆಯಾಯಿತು. ಈ ಕಾರ್ಮಿಕ ಸಂಘವು 1956ರ ಮೇ 17ರಂದು ರಿಜಿಸ್ಟರ್ ಆಯಿತು. ಕೆ,ಎಸ್.ವಾಸನ್ ಈ ಸಂಘದ ಸಂಸ್ಥಾಪಕ ಅಧ್ಯಕ್ಷರಾದರು. 1952 ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಅಂದಿನ ಮೈಸೂರು ರಾಜ್ಯದ ವಿಧಾನ ಸಭೆಗೆ ಕೋಲಾರ ಜಿಲ್ಲೆಯ ಚಿನ್ನದಗಣಿ ಕ್ಷೇತ್ರದಿಂದ ಕಮ್ಯುನಿಸ್ಟ್ ಪಕ್ಷದ ಉಮೇದುವಾರ ಕೆ.ಎಸ್.ವಾಸನ್ ಚುನಾಯಿತರಾಗಿದ್ದರು.

ಕಾರ್ರೈಕುರ್ಚಿಲ್ ಎಸ್ಟೇಟ್ ಹೋರಾಟ

1951ರಲ್ಲಿ ಭಾರತ ಸರ್ಕಾರವು ಪ್ಲಾಂಟೇಷನ್ಸ್ ಲೇಬರ್ ಆಕ್ಟ್ ಎಂಬ ಕಾಯಿದೆಯನ್ನು ಮಾಡಿತು. ಈ ಕಾಯಿದೆಯ ಅಡಿಯಲ್ಲಿ ರಾಜ್ಯ ಸರ್ಕಾರಗಳು ನಿಯಮಗಳನ್ನು (ರೂಲ್ಸ್) ರಚಿಸಬೇಕಾಗಿದ್ದಿತು. ನಿಯಮಗಳ ರಚನೆಯಾದರೆ ಮಾತ್ರ ಕಾಯಿದೆಯ ಪ್ರಕಾರ ಕಾರ್ಮಿಕರು ಸೌಲಭ್ಯಗಳನ್ನು ಕೇಳಬಹುದಾಗಿದ್ದಿತು. ಸಂಸತ್ತು ಕಾಯಿದೆ ಮಾಡಿ ಐದು ವರ್ಷಗಳಾದರೂ ಸಹ ಮೈಸೂರು ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಿರಲಿಲ್ಲ. ಕೆಂಬಾವುಟದ ಕರ್ನಾಟಕ ಪ್ರೋವಿನ್ಷಿಯನ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸ್ಥಾಪನೆಯಾದ ಸ್ವಲ್ಪ ಕಾಲದಲ್ಲಿಯೇ ಮೈಸೂರು ಸರ್ಕಾರವು ರೂಲ್ಸ್ ಮಾಡಿತು. ಮೈಸೂರು ಪ್ಲಾಂಟೇಷಿಯನ್ ಲೇಬರ್ ರೂಲ್ಸ್ 1956ರಲ್ಲಿ ಜಾರಿಗೆ ಬಂದಿತು.

ಕರ್ನಾಟಕ ಪ್ರೋವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ರಚನೆಯಾದ ಸ್ವಲ್ಪ ಕಾಲದಲ್ಲಿಯೇ ನಡೆದ ಹೋರಾಟ ಪ್ರಖ್ಯಾತವಾದ ಕಾರ್ರೈಕುರ್ಚಿಲ್ ಎಸ್ಟೇಟ್ ಕಾರ್ಮಿಕರ ಹೋರಾಟ, ಕಾರ್ರೈಕುರ್ಚಿಲ್‌ಎಸ್ಟೇಟ್ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಬಾಬಾಬುಡನ್‌ಗಿರಿಯ ಮೇಲಿದೆ. ಅಂದು ಆ ತೋಟದಲ್ಲಿ ನೂರೈವತ್ತು ಕಾರ್ಮಿಕರು ದುಡಿಯುತ್ತಿದ್ದರು. ಆ ತೋಟದ ಅಂದಿನ ಮಾಲೀಕರು ಜಿಲ್ಲೆಯ ದೊಡ್ಡ ಶ್ರೀಮಂತರು, ಪ್ರತಿಷ್ಠಿತರು ಮತ್ತು ಸರ್ಕಾರದಲ್ಲಿ ವರ್ಚಸ್ಸಿದ್ದವರು. ತಮಗೆ ಸಿಗುತ್ತಿದ್ದ ಕೂಲಿ ಜೀವನಕ್ಕೆ ಸಾಲದೆಂದು ಹೆಚ್ಚು ಕೂಲಿಯ ಬೇಡಿಕೆಗಾಗಿ ಕಾರ್ರೈಕುರ್ಚಿಲ್ ಕಾರ್ಮಿಕರು ಮುಷ್ಕರವನ್ನು ಪ್ರಾರಂಭಿಸಿದರು. ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ನಡೆದ ಚಾರಿತ್ರಿಕ ಮುಷ್ಕರವಾಗಿ ದಾಖಲಾಯಿತು. ಪ್ಲಾಂಟರ್‌ಗಳ ಹಿತರಕ್ಷಣೆ ಮಾಡಲು ಬಂದಿದ್ದ ಪೋಲೀಸರು ಮತ್ತು

ಪುಟ 10 ನೋಡಿ





ಬೆಟ್ಟದಿಂದ ಬಟ್ಟಲಿಗೆ ಕಾಫಿ–ಟೀ ತರುವ........

ಪುಟ 9 ರಿಂದ

ತಮ್ಮ ನ್ಯಾಯ ಸಮ್ಮತವಾದ ಬೇಡಿಕೆಗಳಿಗಾಗಿ ಹೋರಾಟ ಮಾಡುತ್ತಿದ್ದ ಕಾರ್ಯ್ಕುರ್ಚಿಲ್ ಎಸ್ಟೇಟಿನ ಕಾರ್ಮಿಕರಿಗೂ ಘರ್ಷಣೆಗಳಾದವು. ಪೋಲೀಸರು ಹೊಡೆದಿದ್ದು ಮಾತ್ರವೇ ಅಲ್ಲ, ಐವತ್ತಕ್ಕೂ ಹೆಚ್ಚು ಕಾರ್ಮಿಕರ ಮೇಲೆ ಮೊಕದ್ದಮೆ ಹೂಡಿದರು, ತಮ್ಮ ಬೇಡಿಕೆಗಳಿಗಾಗಿ, ತಮ್ಮ ಮೇಲಾದ ದೌರ್ಜನ್ಯವನ್ನು ಪ್ರತಿಭಟಿಸಿ ಚಿಕ್ಕಮಗಳೂರು ನಗರದಲ್ಲಿ ಪ್ಲಾಂಟರ್ಸ್ ಆಫೀಸಿನ ಮುಂದೆ ಸಾಮೂಹಿಕ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ಕಾರ್ಯ್ಕುರ್ಚಿಲ್ ಕಾರ್ಮಿಕರನ್ನು ಪೋಲೀಸರು ಬಂಧಿಸಿ ಜೈಲಿಗೆ ಹಾಕಿದರು. ಹೋರಾಟ ಮುಕ್ತಾಯವಾದ ಮೇಲೆ ಆ ಕಾರ್ಮಿಕರು ಅದೇ ತೋಟದಲ್ಲಿ ಮುಂದುವರೆಯುವಂತಾದರೂ ಒಂದು ವರ್ಷದ ನಂತರ ಕೂಲಿ ಹೆಚ್ಚಳವಾಯಿತು. ರಾಜ್ಯದ ಎಲ್ಲಾ ತೋಟ ಕಾರ್ಮಿಕರ ನಡುವೆ ಕಾರ್ಯ್ಕುರ್ಚಿಲ್ ಹೋರಾಟ ಮನೆ ಮಾತಾಯಿತು. ಕರ್ನಾಟಕ ಪ್ರೋವಿನ್ಷಿಯನ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಸದಸ್ಯತ್ವವು ಬೆಳೆಯಲಾರಂಭಿಸಿತು. ಈ ಸಂಘದ ಹೆಸರು ಮತ್ತು ಪ್ರಭಾವ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ತೋಟಗಳಲ್ಲಿ ವ್ಯಾಪಕವಾಗಿ ಹರಡಿತು.

ಕಾರ್ಯ್ಕುರ್ಚಿಲ್ ಹೋರಾಟ ನಡೆಯುವವರೆಗೆ ಕರ್ನಾಟಕದಲ್ಲಿ ತೋಟ ಕೈಗಾರಿಕೆಯಲ್ಲಿ ಕೂಲಿಯ ವಿಷಯದಲ್ಲಾಗಲೀ ಅಥವಾ ಕಾರ್ಮಿಕರಿಗೆ ಸಿಕ್ಕುವ ಯಾವುದೇ ಸೌಲಭ್ಯದ ವಿಷಯದಲ್ಲಾಗಲೀ ಕೈಗಾರಿಕಾವಾರು ಮಾತುಕತೆ ನಡೆಯುತ್ತಿರಲಿಲ್ಲ, ಕೈಗಾರಿಕವಾರು ಒಪ್ಪಂದಗಳಾಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕಾದ ಅಂಶ. ಕರ್ನಾಟಕ ಪ್ರೋವಿನ್ಷಿಯನ್ ಪಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಮತ್ತು ಕಾರ್ಯ್ಕುರ್ಚಿಲ್ ಹೋರಾಟದ ವೇಳೆಗೆ ಮಾಲೀಕರ ಸಂಘ ರೂಪುಗೊಂಡಿತು. ಅದೇ ಮೈಸೂರು ಸ್ಟೇಟ್ ಪ್ಲಾಂಟರ್ಸ್ ಅಸೋಸಿಯೇಷನ್ (ಎಂ.ಎಸ್.ಪಿ.ಎ)

ಬೋನಸ್ ಹೋರಾಟ 1959

1959ರಲ್ಲಿ ಬೋನಸ್ಸಿಗಾಗಿ ಕರ್ನಾಟಕ ಪ್ರೋವಿನ್ಷಿಯನ್ ಪಾಂಟೇಷನ್ ವರ್ಕರ್ಸ್ ಯೂನಿಯನ್ನಿನ ನೇತೃತ್ವದಲ್ಲಿ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ವ್ಯಾಪಕವಾದ ಮುಷ್ಕರ ಹೋರಾಟ ನಡೆಯಿತು. ಆ ಹೋರಾಟದ ನಂತರ 1962 ರಲ್ಲಿ ಮೈಸೂರು ಅಸಿಸ್ಟಂಟ್ ಲೇಬರ್ ಕಮೀಷನರ್ ಮುಂದೆ ಒಂದು ಬೋನಸ್ ಒಪ್ಪಂದವಾಗಿ ತೋಟ ಕಾರ್ಮಿಕರಿಗೆ ಬೋನಸ್ ಸಿಕ್ಕಲಾರಂಬಿಸಿತು. 1963ರವರೆಗೆ ಚಿಕ್ಕಮಗಳೂರು ಹಾಸನ ಜಿಲ್ಲೆಗಳಲ್ಲಿ ಪ್ಲಾಂಟೇಷನ್ ಕೈಗಾರಿಕೆಯಲ್ಲಿ ಕರ್ನಾಟಕ ಪ್ರೋವಿನ್ಷಿಯನ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ಮತ್ತು ಸಿಬ್ಬಂದಿಗಳ ಸಂಘವೂ ಸೇರಿ ನಾಲ್ಕು ಕಾರ್ಮಿಕರ ಸಂಘಗಳು ಮಾತ್ರ ಇದ್ದವು. ಈ ನಾಲ್ಕು ಕಾರ್ಮಿಕರ ಸಂಘಗಳು ಈ ಅವಧಿಯಲ್ಲಿ ಪ್ರಮುಖ ಮುಷ್ಕರವನ್ನು ನಡೆಸಿದುವು. 1956ರಿಂದ ನಡೆಯುತ್ತಿದ್ದ ಪ್ಲಾಂಟೇಷನ್ ಕಾರ್ಮಿಕರ ಚಳುವಳಿ ಪ್ಲಾಂಟರುಗಳ ಮೇಲೆ ಪ್ರಭಾವವನ್ನು ಬೀರಿತು. ತೋಟ ಕಾರ್ಮಿಕರು ತಮ್ಮ ಕೂಲಿ, ಬೋನಸ್ಸಿಗಾಗಿ, ತಮ್ಮ ಜೀವನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಹೋರಾಟ ಮಾಡುವುದರ ಜತೆಗೆ ಅವರ ತಿಳುವಳಿಕೆ ಹೆಚ್ಚುತ್ತದೆ, ಅವರಿಗೆ ವರ್ಗರಾಜಕೀಯ ಪ್ರಜ್ಞೆ ಬೆಳೆಯುತ್ತದೆ ಎಂಬ ವಿಷಯ ಅವರನ್ನು ಕಾಡತೊಡಗಿತು, ಪ್ಲಾಂಟರುಗಳು ಒಬ್ಬೊಬ್ಬರಾಗಿ ಬೆಂಗಳೂರಿನಲ್ಲಿ ಮನೆ ಮಾಡಲಾರಂಭಿಸಿದರು. ಇದು ಕೆಲವರಿಗೆ ಅವರ ಮಕ್ಕಳ ಶಿಕ್ಷಣಕ್ಕೂ ಉಪಯೋಗವಾಯಿತು. ಪ್ಲಾಂಟರುಗಳ ಮಕ್ಕಳು ಚಿಕ್ಕಮಗಳೂರು, ಹಾಸನಗಳಲ್ಲಿರುವ ದರವೇಸಿ ಕಾಲೇಜುಗಳಲ್ಲಿ ಕಲಿಯುವುದು ಹೇಗೆ? ಅವರಿಗೇನಿದ್ದರೂ ಕಿಂಗ್ ಜಾರ್ಜ್‌ಸ್ಕೂಲ್‌ನಂತಹ ರೆಸಿಡೆನ್ಷಿಯಲ್ ಸ್ಕೂಲುಗಳು ಬೇಕು. ಬೆಳೆಯುತ್ತಿರುವ ತೋಟಕಾರ್ಮಿಕರ ಸಂಘಟನೆ, ಐಕ್ಯ ಚಳುವಳಿಗಳನ್ನು ತಡೆಯಲು ಅವರು ಒಂದು ತಂತ್ರವನ್ನು ಮಾಡಿದರು. 1963 ರಿಂದೀಚೆ ಅವರೇ ತೆರೆಯ ಮರೆಯಲ್ಲಿದ್ದು ಹಲವಾರು ತೋಟಕಾರ್ಮಿಕರ ಸಂಘಗಳನ್ನು ಹುಟ್ಟುಹಾಕಿದರು. ಕೂಲಿ, ಬೋನಸ್ ಇತ್ಯಾದಿಗಳನ್ನು ಕೊಡಿಸುವ ಹೊಸ ಸಂಘಗಳು ಹುಟ್ಟಿಕೊಂಡುವು. ಈ ಸಂಘಗಳ ಮೂಲಕ ಕರ್ನಾಟಕ ಪ್ರೋವಿನ್ಷಿಯನ್ ಪಾಂಟೇಷನ್ ವರ್ಕರ್ಸ್ ಯೂನಿಯನ್ನನ್ನು ಒಡೆದು ಛಿದ್ರ ಮಾಡುವ ಕೆಲಸ ಪ್ರಾರಂಭವಾಯಿತು, ಈ ಕೆಲಸದಲ್ಲಿ ಭಾಷೆಯನ್ನು ಯಥೇಚ್ಛವಾಗಿ ಬಳಸಲಾಯಿತು. ಟೀ ತೋಟಗಳಲ್ಲಿ ದೀರ್ಘಕಾಲದಿಂದ ನೆಲೆಸಿದ್ದ ತಮಿಳು ಕಾರ್ಮಿಕರನ್ನು ಇದಕ್ಕೆ ನೆಲೆಯಾಗಿ ಉಪಯೋಗಿಸಲಾಯಿತು. ಆ ತರುವಾಯ 1964ರಲ್ಲಿ ಒಂದು ಕೈಗಾರಿಕಾವಾರು ಒಪ್ಪಂದವಾಗಿ ಏಳು ವರ್ಷಗಳ ಸೇವೆ ಸಲ್ಲಿಸಿದ್ದ ಕಾಮಿಕರು ಕೆಲಸಕ್ಕೆ ರಾಜೀನಾಮೆ ಕೊಟ್ಟು ತೋಟ ಬಿಟ್ಟು ಹೋಗುವುದಾದರೆ ಅವರಿಗೆ ಗ್ರಾಚುಟಿ ಸಿಗುವಂತಾಯಿತು. ಅನೇಕ ಕಡೆ ಕಾರ್ಮಿಕರ ಏಳು ವರ್ಷ ಆದ ಕೂಡಲೇ ರಾಜಿನಾಮೆ ಕೊಟ್ಟು ಗ್ರಾಚುಟಿ ತೆಗೆದುಕೊಂಡು ಹೋಗಲಾರಂಭಿಸಿದರು.

ಪ್ಲಾಂಟೇಷನ್ ಕೈಗಾರಿಕೆಯಲ್ಲಿ ಯಾವುದೇ ಸಂಘಕ್ಕೆ ಹೋಲಿಸಿ ನೋಡಿದರೆ ಪೋಲೀಸರು ಅತ್ಯಂತ ಹೆಚ್ಚು ಕ್ರಿಮಿನಲ್ ಕೇಸುಗನ್ನು ಹಾಕಿರುವುದು ಕರ್ನಾಟಕ ಪ್ರೋವಿನ್ಷಿಯನ್ ಪಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಸದಸ್ಯರು, ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಮೇಲೆ 1959ರಲ್ಲಿ ಸಂಘದ ಉಪಾಧ್ಯಕ್ಷರೊಬ್ಬರ ಮೇಲೆ ಕೊಲೆ ಮೊಕ್ಕದ್ದಮ್ಮೆಯನ್ನು ಹೂಡಿ ಜೈಲಿನಲ್ಲಿಡಲಾಯಿತು. ನಂತರ ನ್ಯಾಯಾಲಯದಲ್ಲಿ ಕೇಸು ಖುಲಾಸೆಯಾಗಿ ಬಿಡುಗಡೆಯಾಯಿತು. 1965 ರಲ್ಲಿ ಸಂಘದ ಖಜಾಂಚಿ ಮತ್ತು ನಂತರ ಸಂಘದ ಕಾರ್ಯದರ್ಶಿಗಳಾಗಿದ್ದ ಸಿ.ನಂಜುಂಡಪ್ಪ, ಅವರ ತಂದೆ ಮತ್ತು ತಮ್ಮನವರ ಮೇಲೆ ಕೊಲೆ ಮೊಕದ್ದಮೆಯಾಗಿ ಶಿಕ್ಷೆಯಾಯಿತು.



ಹಾರಮಕ್ಕಿ ಎಸ್ಟೇಟ್ ಹೋರಾಟ

1970 ರಲ್ಲಿ ಹಾರಮಕ್ಕಿ ಎಸ್ಟೇಟ್ ಕಾರ್ಮಿಕರು ಕರ್ನಾಟಕ ಪ್ರೋವಿನ್ಷಿಯನ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಸದಸ್ಯರಾಗಿ ತಮ್ಮ ಹಕ್ಕಿಗಾಗಿ ಹೋರಾಟ ಮಾಡುವ ಮುನ್ನವೇ ಮಾಲೀಕರು ಮತ್ತು ಪೋಲೀಸರು ತೀವ್ರ ದಬ್ಬಾಳಿಕೆಯನ್ನು ನಡೆಸಿ ಮೂವತ್ತು ಮಂದಿ ಕಾರ್ಮಿಕರನ್ನು ರಾತ್ರೋರಾತ್ರಿ ದೂರದ ಪ್ರದೇಶಕ್ಕೆ ಸಾಗಿಸಿದರು. ನಡು ರಾತ್ರಿಯಲ್ಲಿ ಕಾರ್ಮಿಕರ ಮನೆಗಳಿಗೆ ನುಗ್ಗಿ ಹೊಡೆದು ಬೆದರಿಸಿ ಸಂಘದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುವ ಪತ್ರಕ್ಕೆ ಬಲಾತ್ಕಾರದಿಂದ ಸಹಿ ಮಾಡಿಸಿ, ಹೆಬ್ಬೆಟ್ಟು ಗುರುತು ಹಾಕಿಸಿದರು. ಸಂಘದ ಕಾರ್ಯದರ್ಶಿಯಾಗಿದ್ದ ಸಿ.ನಂಜುಂಡಪ್ಪನವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಲಾಯಿತು.

1973ರ ಮುಷ್ಕರ

1973 ಡಿಸೆಂಬರ್ 27 ರಂದು ಕೂಲಿಯ ಪುನರ್‌ವಿಮರ್ಶೆ ಮಾಡಿ ಕೂಲಿಯನ್ನು ಹೆಚ್ಚಿಸಲು ಒತ್ತಾಯಿಸಿ ಮತ್ತು ಇತರೆ ಬೇಡಿಕೆಗಳಿಗಾಗಿ ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಕಾಫಿ, ಟೀ ತೋಟಗಳಲ್ಲಿ ದಕ್ಷಿಣ ಕನ್ನಡ ಜಿಲೆಯ, ಸುಳ್ಯ ಪುತ್ತೂರುಗಳ ರಬ್ಬರ್ ತೋಟಗಳಲ್ಲಿ ಮುಷ್ಕರ ನಡೆಯಿತು. ಈ ಮುಷ್ಕರದಲ್ಲಿ ಸುಮಾರು 48 ಸಾವಿರ ಪ್ಲಾಂಟೇಶನ್ ಕಾರ್ಮಿಕರು ಪಾಲ್ಗೊಂಡಿದ್ದರು.

ವೇತನ ಸ್ತಂಬನ ವಿರೋಧಿ ಸಮಾವೇಶ

1974 ರಲ್ಲಿ ಇಂದಿರಾಗಾಂಧಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿ ಕಾರ್ಮಿಕರ ಕೂಲಿ ಸಂಬಳಗಳು ಹೆಚ್ಚಾದರೆ ಪೂರ್ತಿಯಾಗಿಯೂ, ತುಟ್ಟಿಭತ್ಯೆ ಹೆಚ್ಚಾದರೆ ಹೆಚ್ಚಳದ ಅರ್ಧದಷ್ಟನ್ನು ಸರ್ಕಾರದಲ್ಲಿ ಕಡ್ಡಾಯವಾಗಿ ಠೇವಣಿ ಇಡಬೇಕೆಂದು ಸುಗ್ರೀವಾಜ್ಞೆ ಹೊರಡಿಸಲಾಯಿತು. ಇದರ ವಿರುದ್ಧ ಚಿಕ್ಕಮಗಳೂರಿನಲ್ಲಿ 1974 ನವೆಂಬರ್ 10,11 ರಂದು ವೇತನ ಸ್ತಂಬನ ವಿರೋಧಿ ಪ್ರಾದೇಶಿಕ ಸಮಾವೇಶವನ್ನು ನಡೆಸಲಾಯಿತು. ಸಿಐಟಿಯುವಿನ ತೋಟಕಾರ್ಮಿಕರ ಜೊತೆಗೆ ಬ್ಯಾಂಕ್, ಜೀವವಿಮೆ, ಅಂಚೆ – ತಂತಿ, ಪೌರ ಕಾರ್ಮಿಕರು, ರಾಜ್ಯ ಸರ್ಕಾರಿ ನೌಕರರು ಜಂಟಿಯಾಗಿ ನಡೆಸಿದ ಈ ಸಮಾವೇಶದಲ್ಲಿ ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. 11 ರಂದು ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಲು ಕಳಸ, ಗಿರಿ, ಹೊಸಪೇಟೆ, ಸಕಲೇಶಪುರಗಳಿಂದ ತೋಟ ಕಾರ್ಮಿಕರು ಪಾದಯಾತ್ರೆಯಲ್ಲಿ ಬಂದಿದ್ದರು.

1975 ರ ಫೆಬ್ರವರಿಯಲ್ಲಿ ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ಫೆಡರೇಷನ್‌ನ ಕಾರ್ಯದರ್ಶಿಗಳಾಗಿದ್ದ ವಿಮಲ ರಣದಿವೆಯವರು ಚಿಕ್ಕಮಗಳೂರಿಗೆ ಬಂದು ಚಂದ್ರಾಪುರ ಎಸ್ಟೇಟ್ ಮತ್ತು ಹೆಗ್ಗುಡ್ಲು ಎಸ್ಟೇಟ್‌ಗಳಿಗೆ ಭೇಟಿ ನೀಡಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ್ದರು.

ತುರ್ತುಪರಿಸ್ಥಿತಿ ಇದ್ದಾಗ ಯೂನಿಯನ್ ಮುರಿಯಲು ಹಲವು ತಂತ್ರಗಳನ್ನು ಬಳಸಲಾಯಿತು. ತೊಗರಿ ಹಂಕಲು ಬಳಿಯಿದ್ದ ತೋಟ ಒಂದರಲ್ಲಿ ಕಾನೂನಿನ ಪ್ರಕಾರ ವಾಸದ ಮನೆ, ಕಕ್ಕಸ್ಸು ಮನೆ ಮೊದಲಾದವುಗಳಿರಲಿಲ್ಲ. ಈ ವಿಷಯದ ಕುರಿತು ದೂರು ನೀಡಿದ ಮೇಲೆ ಲೇಬರ್ ಇನ್ಸ್‌ಪೆಕ್ಟರ್ ತೋಟವನ್ನು ವೀಕ್ಷಿಸಿ ಮಾಲೀಕರ ಮೇಲೆ ಕೇಸು ದಾಖಲಿಸಲು ಸಿದ್ಧತೆ ನಡೆಸಿದ್ದರು. ಪ್ಲಾಂಟರು ಹಾಸನ ಜಿಲ್ಲೆಯಲ್ಲಿ ಸಂಘವನ್ನು ಮುರಿಯಲು ಕೊಡವ ಮೇನೇಜರನ್ನು ತಂದರು. ಈ ಯೋಜನೆಯ ಅಂಗವಾಗಿ 1976 ರಲ್ಲಿ ಆಂತರಿಕ ತುರ್ತುಪರಿಸ್ಥಿತಿ ಇದ್ದಾಗ ಮುಂಜಾನೆಯ ನಸುಕಿನಲ್ಲಿ ಸಂಘದ ಸದಸ್ಯ ರಾಜುವನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಪೋಲೀಸರಿಗೆ ಮಾಡಬೇಕಾದದ್ದನ್ನು ಮಾಡಿ ಪ್ರಾಸಿಕ್ಯೂಷನ್ ಕೇಸ್ ಬಲಹೀನವಾಗಿ ಮಾಡಲಾಯಿತು. ಕೊಲೆಗಾರನ ಕುಲಾಸೆಯೂ ಆಯಿತು.

ಸಂಸೆ ಟೀ ಪ್ಲಾಂಟೇಷನ್ ಕಾರ್ಮಿಕರ ಹೋರಾಟ

ಚಿಕ್ಕಮಗಳೂರು ಜಿಲ್ಲೆಯ ಕಳಸ ಟೀ ಅಂಡ್ ಪ್ರೊಡ್ಯೂಸರ್ ಕಂಪನಿಗೆ ಸೇರಿದ ಗುಮ್ಮನಕಾಡು ಮತ್ತು ಸಂಸೆ ಟೀ ತೋಟಗಳಲ್ಲಿ ಕೆಲಸ ಮಾಡುತ್ತಿದ ಎಸ್ಟೇಟ್ ಸಮಿತಿಯ ಅಧ್ಯಕ್ಷರೂ ಸೇರಿದಂತೆ ನಾಲ್ವರು ಕಾರ್ಮಿಕರನ್ನು 17.03.1980 ರಲ್ಲಿ ಕೆಲಸದಿಂದ ವಜಾ ಮಾಡಲಾಗಿತ್ತು. ಇವರನ್ನು ಪುನರ್‌ನೇಮಕ ಮಾಡಿಕೊಳ್ಳಬೇಕೆಂಬ ಬೇಡಿಕೆಗಾಗಿ 600 ಕಾರ್ಮಿಕರು 60 ದಿನಗಳ ಚಾರಿತ್ರಿಕ ಮುಷ್ಕರವನ್ನು ನಡೆಸಿದರು. ಇದು ಆರ್ಥಿಕ ಬೇಡಿಕೆಗಾಗಿ ನಡೆದ ಮುಷ್ಕರವಾಗಿರದೆ ಕಾರ್ಮಿಕರನ್ನು ಕೆಲಸದಿಂದ ತೆಗೆದುದರ ವಿರುದ್ಧ ಮತ್ತು ಕೆಲಸದ ಭದ್ರತೆಗಾಗಿ ನಡೆದ ಹೋರಾಟವಾಗಿದ್ದು ರಾಜ್ಯದ ಪ್ಲಾಂಟೇಷನ್ ಕಾರ್ಮಿಕರ ಚಳುವಳಿಯ ಇತಿಹಾಸದಲ್ಲಿ ಅತ್ಯಂತ ದೀರ್ಘವಾದ ಮುಷ್ಕರ ಇದಾಗಿತ್ತು.

ಪ್ಲಾಂಟೇಶನ್ ಕಾರ್ಮಿಕರ ನಾಯಕತ್ವ

ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ಕಾರ್ಮಿಕರ ಸಂಘದ ಸಂಸ್ಥಾಪಕರಾಗಿ ಕಮ್ಯೂನಿಸ್ಟ್ ಶಾಸಕರಾಗಿದ್ದ ಕೆ.ಎಸ್.ವಾಸನ್ ಆಯ್ಕೆಯಾದರು. ಅಲ್ಲಿಂದ ಇಲ್ಲಿಯವರೆಗೆ ಕೆ.ಎಸ್. ವಾಸನ್, ಬಿ.ವಿ.ಕಕ್ಕಿಲಾಯ, ಎಂ.ವಿ. ಭಾಸ್ಕರನ್, ಎಂ.ಸಿ.ನರಸಿಂಹನ್, ಪಿ.ರಾಮಚಂದ್ರರಾವ್, ಸಿ.ನಂಜುಂಡಪ್ಪ, ವಿ.ಸುಕುಮಾರ್, ಎ.ಕೆ.ವಿಶ್ವನಾಥ್, ರಾಘುಶೆಟ್ಟಿ ಕೃಷ್ಣಪ್ಪ, ಚಿನ್ನಪ್ಪ, ರಂತಹವರು ಕೆಲಸ ಮಾಡಿದ್ದಾರೆ ವಿಶೇಷವಾಗಿ ಅದರಲ್ಲೂ ಸಿ.ನಂಜುಂಡಪ್ಪ ಅವರು 2–3 ದಶಕಗಳ ಕಾಲ ಮತ್ತು ವಿ.ಸುಕುಮಾರ್‌ರಂತಹ ನಾಯಕರು ಕಳೆದ 50 ವರ್ಷಗಳಿಂದಲೂ ಈ ಚಳುವಳಿಯನ್ನು ಮುನ್ನೆಡೆಸಿರುವುದೇ ಒಂದು ಇತಿಹಾಸ. ಇಷ್ಟು ದೀರ್ಘ ಅವಧಿಯಲ್ಲಿ ಪ್ಲಾಂಟೇಷನ್ ಕಾರ್ಮಿಕರ ನಡುವೆ ಮತ್ತು ಹಾಸನ ಚಿಕ್ಕಮಗಳೂರು ಜಿಲ್ಲೆಯಲ್ಲಿ ದುಡಿಯುವ ವರ್ಗದ ಚಳುವಳಿಯನ್ನು ಕಟ್ಟಿ ಬೆಳೆಸಲು ಇವರ ಪರಿಶ್ರಮ ಅಪಾರವಾದುದು. ಇಂತಹ ಹತ್ತು ಹಲವಾರು ಹಿರಿಯ ಕಾರ್ಮಿಕ ಮುಖಂಡರು ಪ್ರಮುಖರು. ಇವರೆಲ್ಲರ ಜೊತೆಗೆ ನೂರಾರು ಕಾರ್ಯಕರ್ತರು ಹಾಗೂ ಸಾವಿರಾರು ಕಾರ್ಮಿಕರು ಈ ಚಳುವಳಿಯೊಂದಿಗೆ ಗುರುತಿಸಿಕೊಂಡು ಈ ಪ್ರದೇಶದಲ್ಲಿ ಒಂದು ಪ್ರಬಲ ಕಾರ್ಮಿಕ ಚಳುವಳಿಯನ್ನು ರೂಪಿಸುವಲ್ಲಿ ಅವರು ಪಟ್ಟಿರುವ ಶ್ರಮ ನಿಜಕ್ಕೂ ಅಭಿನಂದನಾರ್ಹ.

ಪ್ಲಾಂಟೇಷನ್‌ನ ಇಂದಿನ ಪರಿಸ್ಥಿತಿ

ಕಾಫಿ ಪ್ಲಾಂಟೇಷನ್ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಕ್ರಮೇಣ ಖಾಯಂ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿ ಚಂಗುಲಿ (ಗುತ್ತಿಗೆ ಮತ್ತು ಸೀಸನ್‌ಗಳಲ್ಲಿ ಮಾತ್ರ ಬಂದು ಕೆಲಸ ಮಾಡುವುದು) ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಇವರಿಗೆ ಯಾವುದೇ ಕೆಲಸದ ಭದ್ರತೆಯಾಗಲಿ ಮತ್ತು ಸವಲತ್ತುಗಳಾಗಲಿ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಕೇರಳ ತಮಿಳುನಾಡಿನಿಂದ ಬರುವ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದ್ದು ಅಸ್ಸಾಂ, ಪಶ್ಚಿಮಬಂಗಾಳ, ರಾಜಸ್ಥಾನ್ ರಾಜ್ಯಗಳ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ ಮತ್ತು ಸ್ಥಳೀಯ ಗ್ರಾಮಗಳಿಂದ ಚಂಗುಲಿ ಆಧಾರದ ಮೇಲೆ ಕೆಲಸಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಇವರುಗಳು ಒಂದು ಕಡೆ ಸಿಗುವುದಿಲ್ಲ. ಆದ್ದರಿಂದ ಬದಲಾದ ಪರಿಸ್ಥಿತಿಗೆ ತಕ್ಕಂತೆ ಗ್ರಾಮಗಳಿಂದ ಬರುವ ಕಾರ್ಮಿಕರನ್ನು ಅಲ್ಲಿಯೇ ಸಂಘಟಿಸುವ ವಿಶೇಷ ಗಮನ ನೀಡಬೇಕಾಗಿದೆ.

ತೋಟಗಳು ಇರುವವರೆಗೂ ಕಾರ್ಮಿಕರು ಬೇಕಾಗುತ್ತಾರೆ ಆದರೆ ಅವರನ್ನು ನೇಮಕ ಮಾಡಿಕೊಳ್ಳುವ ವಿಧಾನ ಅವರಿಂದ ಕೆಲಸ ಮಾಡಿಸಿಕೊಳ್ಳುವ ವಿಧಾನಗಳು ಮತ್ತು ಅವರಿಗೆ ನೀಡುವ ಸೌಲಭ್ಯಗಳು ಸಂಪೂರ್ಣ ಬದಲಾಗಿವೆ. ಖಾಸಗಿ ವ್ಯಕ್ತಿಗಳ ಒಡೆತನದಿಂದ ತೋಟಗಳು ಕಂಪನಿಗಳ ಏಕಸ್ವಾಮ್ಯಕ್ಕೆ ಬದಲಾಗುತ್ತಿವೆ. ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಇನ್ನೂ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕು ನಡೆಸುತ್ತಿದ್ದಾರೆ. ಕಾರ್ಮಿಕರ ವಾಸಸ್ಥಳಗಳು ಹಂದಿಗೂಡಿಗಿಂತಲೂ ಕಡೆಯಾಗಿವೆ. ಅದೇ ತೋಟದಲ್ಲಿ ಕೆಲಸ ಮಾಡುವ ಮೇಸ್ತ್ರಿ, ಸೂಪರ್‌ವೈಸರ್, ಮ್ಯಾನೆಜರ್‌ಗಳ ಮನೆಗಳು ಎಲ್ಲಾ ಸೌಲತ್ತುಗಳನ್ನು ಹೊಂದಿದ್ದು ಸುಸಜ್ಜಿತವಾಗಿವೆ. ಒಂದೇ ತೋಟದಲ್ಲಿ ಕಾರ್ಮಿಕ ವರ್ಗದ ಸ್ಥಿತಿ ಮತ್ತು ಮಾಲೀಕ ವರ್ಗದ ಸ್ಥಿತಿಯ ಸ್ಪಷ್ಟ ಚಿತ್ರಣ ಕಣ್ಣಿಗೆ ರಾಚುವಂತೆ ಕಾಣುತ್ತದೆ. ಬೆಟ್ಟದಿಂದ ಬಟ್ಟಲಿಗೆ ರುಚಿಯಾದ ಕಾಫಿಯನ್ನೊ ಅಥವಾ ಟೀ ಅನ್ನೋ ನೀಡುವ ಹಿಂದೆ ಇರುವ ಲಕ್ಷಾಂತರ ಕಾರ್ಮಿಕರ ಶ್ರಮವನ್ನು ಕಾಫಿ ಕುಡಿಯುವಾಗ ಒಮ್ಮೆಯಾದರೂ ನೆನಪಿಸಿಕೊಂಡು ಶ್ರಮ ಸಂಸ್ಕೃತಿಯನ್ನು ಗೌರವಿಸಬೇಕಾಗಿದೆ. ಆ ಮೂಲಕ ಕಾರ್ಮಿಕರ ಬದುಕು ಹಸನು ಮಾಡುವ ಚಳುವಳಿಗಳಿಗೆ ಬೆಂಬಲವನ್ನು ನೀಡಬೇಕಾಗಿದೆ.

ಹೊಸ 'ತ್ರಿಮೂರ್ತಿ'ಯ ಕೊಳಕು ಮುಖಗಳು

ಪುಟ 8 ರಿಂದ

ಹಕ್ಕುಗಳ ಮೇಲಿನ ಆಕ್ರಮಣಗಳು ದೇಶದಾದ್ಯಂತ ಹೆಚ್ಚುತ್ತಿವೆ.

ಭ್ರಾಮಕ ಘೋಷಣೆಗಳು ಮತ್ತು ಸಾಧನೆಯ ಟೊಳ್ಳು ಮಾತುಗಳು

ವಿವಿಧ ಕ್ಷೇತ್ರಗಳಲ್ಲಿ ಭಾರಿ ಸಾಧನೆ ಮಾಡಲಾಗಿದೆ ಎಂದು ಮೋದಿ ಸರಕಾರ ಮಾಡುತ್ತಿರುವ ಅಬ್ಬರದ ಪ್ರಚಾರದಲ್ಲಿ ಹುರುಳಿಲ್ಲ ಎನ್ನುವುದು ಸಾಬೀತಾಗುತ್ತಿದೆ.

ಭ್ರಷ್ಟಾಚಾರ-ಮುಕ್ತ ಸರಕಾರ ನೀಡುತ್ತೇವೆ ಎಂದು ಅದು ಆಶ್ವಾಸನೆ ನೀಡಿತ್ತು.

* ಬಿಜೆಪಿ ಆಡಳಿತದ ರಾಜ್ಯಗಳಲ್ಲಿನ ವ್ಯಾಪಮ್ (ಮಧ್ಯಪ್ರದೇಶ) ಮುಂತಾದ ಹಗರಣಗಳು ಭ್ರಷ್ಟಾಚಾರ ಕುರಿತ ಬಿಜೆಪಿ ಹೇಳಿಕೆಯನ್ನು ಠುಸ್‌ಗೊಳಿಸಿವೆ.
* ಐಪಿಎಲ್‌ನ ಮಾಜಿ ಮುಖ್ಯಸ್ಥ ಲಲಿತ್ ಮೋದಿಗೆ (ಭಾರತೀಯ ಕಾನೂನಿನಿಂದ ತಪ್ಪಿಸಿಕೊಂಡಿರುವ ಆರೋಪಿ) ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಮತ್ತು ರಾಜಸ್ಥಾನದ ಬಿಜೆಪಿ ಮುಖ್ಯಮಂತ್ರಿ ರಕ್ಷಣೆ ಹಾಗೂ ಆಶ್ರಯ ನೀಡಿದ್ದ ವಿಚಾರ ಬಹಿರಂಗಗೊಂಡ ಹಿನ್ನೆಲೆಯಲ್ಲಿ ಸಂಸತ್ತಿನ ಒಂದು ಅಧಿವೇಶನದಲ್ಲಿ ಅಲ್ಲೋಲಕಲ್ಲೋಲ ಉಂಟಾಯಿತು.

ಮೋದಿ ಸರಕಾರ ಅನುಸರಿಸುತ್ತಿರುವ 'ಚಮಚಾ ಬಂಡವಾಳಶಾಹಿ' ಭ್ರಷ್ಟಾಚಾರವನ್ನು ಇನ್ನಷ್ಟು ಹೆಚ್ಚಿಸಲಿದೆ. ಭ್ರಷ್ಟಾಚಾರದ ಇನ್ನಷ್ಟು ಹಗರಣಗಳು ಇಂದಲ್ಲ ನಾಳೆಯಾದರೂ ಹೊರಬೀಳಲಿವೆ. ಯುಪಿಎ ಸರಕಾರದ ಭ್ರಷ್ಟಾಚಾರದ ಹಗರಣಗಳು ಹೊರಬೀಳಲು ಆರಂಭವಾಗಲು ಆರು ವರ್ಷ ಬೇಕಾಗಿತ್ತು ಎನ್ನುವುದನ್ನು ನಾವು ನೆನಪಿಸಿಕೊಳ್ಳಬೇಕು. ಮುಂದಿನ ಮೂರು ವರ್ಷಗಳಲ್ಲಿ ಇನ್ನಷ್ಟು ಇಂತಹ ಪ್ರಕರಣಗಳು ಸಾರ್ವಜನಿಕ ಪರೀಕ್ಷೆಗೆ ಹೊರಬರಲಿವೆ.

'ಕನಿಷ್ಠ ಸರಕಾರ, ಗರಿಷ್ಠ ಆಡಳಿತ' ಎಂದು ಸರಕಾರ ದೊಡ್ಡದಾಗಿ ಬಡಾಯಿ ಕೊಚ್ಚಿಕೊಂಡಿತ್ತು. ಗುಜರಾತ್‌ನಲ್ಲಿ ನಡೆಯುತ್ತಿರುವ ಪತಿದಾರ್ (ಪಟೇಲ್) ಮತ್ತು ಹರ್ಯಾಣದಲ್ಲಿ ಜಾಟ್ ಚಳವಳಿ ವೇಳೆ ಹರಿಯಬಿಟ್ಟ ಹಿಂಸಾಚಾರ ಬಿಜೆಪಿಯ ಪರಿಣಾಮಕಾರಿ ಆಡಳಿತ ಕುರಿತ ದಾವೆಗಳ ನಿಜವಾದ ಸತ್ವ ಏನೆಂಬುದನ್ನು ಬಹಿರಂಗಪಡಿಸಿವೆ.

ವಿದೇಶಾಂಗ ನೀತಿ

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸಮಯದ ಒರೆಯಲ್ಲಿ ಗೆದ್ದಿರುವ ಭಾರತದ ಸ್ವತಂತ್ರ ವಿದೇಶಾಂಗ ನೀತಿಗೆ ತೀವ್ರವಾದ ಏಟು ಬಿದ್ದಿದೆ.

ವಿದೇಶಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ವೈಯಕ್ತಿಕ ವರ್ಚಸ್ಸನ್ನು ಬೆಳೆಸುವ ಏಕೈಕ ಉದ್ದೇಶದಿಂದ, ಸರಕಾರವು ಭಾರತದ ವಿದೇಶಾಂಗ ನೀತಿಯನ್ನು ಅಮೆರಿಕ ಸಾಮ್ರಾಜ್ಯಶಾಹಿಯ ಜಾಗತಿಕ ತಂತ್ರಗಳ ಆದ್ಯತೆಗಳಿಗೆ ಅನುಗುಣವಾಗಿ ಬದಲಾಯಿಸಿತು. ರಕ್ಷಣೆ ಮತ್ತು ಸಮರ ಸಾಗಾಣಿಕೆ ಬೆಂಬಲದ ಒಪ್ಪಂದಗಳು ಸೇರಿದಂತೆ ಅಮೆರಿಕದ ಜೊತೆ ಮಾಡಿಕೊಳ್ಳಲಾದ ಸರಣಿ ಒಡಂಬಡಿಕೆಗಳು ನಮ್ಮ ಆಂತರಿಕ ವ್ಯವಸ್ಥೆಯಲ್ಲಿ

> ದ್ವೇಷದ ಭಾಷಣಗಳನ್ನು ಒಂದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸುವ ಭಾರತದ ಈಗಿನ ಕಾನೂನು ಮತ್ತು ಇಂಡಿಯನ್ ಪೀನಲ್ ಕೋಡ್‌ಗೆ ಅನುಗುಣವಾಗಿ ಆ ರೀತಿಯ ಭಾಷಣ ಮಾಡುವವರ ವಿರುದ್ಧ ನಿಮ್ಮ ಸರಕಾರ ಕ್ರಮ ಕೈಗೊಳ್ಳುವುದೇ ಎಂದು ಮೋದಿ ಪ್ರಧಾನಿಯಾಗಿ ಬಂದ ನಂತರದ ಮೊಟ್ಟಮೊದಲ ಸಂಸತ್ ಅಧಿವೇಶನದಲ್ಲಿ ಅವರನ್ನು ಪ್ರಶ್ನಿಸಲಾಗಿತ್ತು. ಕ್ರಮಕೈಗೊಳ್ಳುವುದು ಒತ್ತಟ್ಟಿಗಿರಲಿ, ಈ ಬಗ್ಗೆ ಸಂಸತ್ತಿಗೆ, ತನ್ಮೂಲಕ ದೇಶದ ಜನರಿಗೆ ಭರವಸೆ ನೀಡಲೂ ಮೋದಿ ಇದುವರೆಗೂ ನಿರಾಕರಿಸಿದ್ದಾರೆ.

> 'ಕನಿಷ್ಠ ಸರಕಾರ, ಗರಿಷ್ಠ ಆಡಳಿತ' ಎಂದು ಸರಕಾರ ದೊಡ್ಡದಾಗಿ ಬಡಾಯಿ ಕೊಚ್ಚಿಕೊಂಡಿತ್ತು. ದಾವೆಗಳ ನಿಜವಾದ ಸತ್ವ ಏನೆಂಬುದನ್ನು ಗುಜರಾತ್‌ನ ಪತೀದಾರ್, ಹರಿಯಾಣದ ಜಾಟ್ ಚಳುವಳಿಗಳನ್ನು ನಿರ್ವಹಿಸಿದ ರೀತಿಯೇ ಬಹಿರಂಗಪಡಿಸಿವೆ.

ಅಮೆರಿಕ ಸಾಮ್ರಾಜ್ಯಶಾಹಿ ಸಂಸ್ಥೆಗಳು ನುಸುಳಲು ಅನುಕೂಲ ಮಾಡಿಕೊಡುವಂತಿವೆ. ರಕ್ಷಣಾ ಪರಿಕರಗಳನ್ನು ಭಾರತಕ್ಕೆ ಮಾರಾಟ ಮಾಡುವ ಮೂಲಕ ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಲಾಭವನ್ನು ಗರಿಷ್ಠಗೊಳಿಸಿಕೊಳ್ಳಲಷ್ಟೇ ಅವು ಸಹಾಯಕವಾಗಿವೆ.

ಜಾಗತಿಕ ಪರಿಕಲ್ಪನೆಯಲ್ಲಿ ಹೇಳುವುದಾದಲ್ಲಿ, ಮೋದಿ ಸರಕಾರವು ವಿದೇಶಾಂಗ ಧೋರಣೆಯ ರಾಜತಾಂತ್ರಿಕ ಚರ್ಚೆಯಲ್ಲಿ ಭಾರತದ asftitfvvnfnu ಪಾಕಿಸ್ತಾನದ ಮುಂದಿನ ಕೂಡುಗೆರೆಯ ಸಮೀಕರಣಕ್ಕೆ, ಅಂದರೆ ಸಾಮಾನ್ಯವಾಗಿ ಬಳಸುವ 'ಭಾರತ-ಪಾಕ್' (ಇಂಡೋ-ಪಾಕ್) ಮಟ್ಟಕ್ಕೆ ಇಳಿಸಿದೆ.

ಅಮೆರಿಕ ಸಾಮ್ರಾಜ್ಯಶಾಹಿಯ ವಿಶ್ವಾಸಾರ್ಹ ಸಹವರ್ತಿ ಎಂದು ಹೇಳಿಸಿಕೊಳ್ಳುವ ಭರದಲ್ಲಿ ಇದುವರೆಗೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಪ್ರತಿರೋಧಿಸಿಕೊಂಡು ಬಂದಿದ್ದ ಒತ್ತಡಗಳಿಗೆ ಮೋದಿ ಸರಕಾರ ಮಣಿದಿದೆ. ಅಂಥ ಪ್ರತಿರೋಧಗಳಿಂದಾಗಿ ಅಭಿವೃದ್ಧಿಶೀಲ ದೇಶಗಳ ನಾಯಕ ಎಂಬ ಪ್ರತಿಷ್ಠೆಯನ್ನು ಭಾರತ ಗಳಿಸಿತ್ತು.

ಅಂತಾರಾಷ್ಟ್ರೀಯ ಹವಾಮಾನ ಬದಲಾವಣೆ ಬದಲಾವಣೆ ಕುರಿತ ಸಮ್ಮೇಳನಗಳಲ್ಲಿ ಇದು ಸಂಭವಿಸಿದೆ. ಇತ್ತೀಚೆಗೆ ಪ್ಯಾರಿಸ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಹವಾಮಾನ ಕರಿತ 21ನೇ ಸಮ್ಮೇಳನ(ಸಿಒಪಿ 21)ದಲ್ಲಿ ನಮ್ಮ ಸಂಸತ್ತು ಹಾಕಿಕೊಟ್ಟ 'ಕೆಂಪು ಗೆರೆ'ಯನ್ನು ಉಲ್ಲಂಘಿಸಿ ಬೇರೆಯವರು ಹೇಳಿದ ಕಡೆ ಭಾರತ ಸಹಿ ಮಾಡಿರುವುದು ಇದಕ್ಕೆ ತಾಜಾ ಉದಾಹರಣೆಯಾಗಿದೆ.

ಅದೇ ರೀತಿ, ನೈರೋಬಿಯಲ್ಲಿ ನಡೆದ ಡಬ್ಲ್ಯುಟಿಒ ದೋಹಾ ಸುತ್ತಿನ ಶೃಂಗ ಮಾತುಕತೆಗಳಲ್ಲಿ ಮಣಿದು ಭಾರತದ ಕೃಷಿ ಮತ್ತು ಮಾರುಕಟ್ಟೆಗಳಲ್ಲಿ ಹೆಚ್ಚಿನ ವಿದೇಶಿ ಪ್ರವೇಶಕ್ಕೆ ಅವಕಾಶ ನೀಡಿತು ಹಾಗೂ ಭಾರತದ ಜನತೆಯ ಆಹಾರ ಭದ್ರತೆಯೊಂದಿಗೆ ರಾಜಿ ಮಾಡಿಕೊಂಡಿತು.

'ಬರಾಕ್,ನನ್ನ ಗೆಳೆಯ' ಎಂದು ಮೋದಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅದು ಸಾಮಾಜಿಜ ಜಾಲತಾಣದಲ್ಲಿ ಕಮೆಂಟ್‌ಗಳಿಗೆ ಒಂದು ವಿಷಯವಾಗಬಹುದು. ಆದರೆ ಅದು ಒಬಾಮಾ ಅಧ್ಯಕ್ಷತೆಯ ಅವಧಿಯಲ್ಲಿ ಅಮೆರಿಕದೊಂದಿಗೆ ತೀರಾ ಆಳವಾದ ಅಡಿಯಾಳು ಸಂಬಂಧಕ್ಕೆ ಭಾರತವನ್ನು ಇಳಿಸಿದ್ದರ ಪ್ರಸಕ್ತ ವಾಸ್ತವದ ಸಂಕೇತವಾಗಿದೆ.

ಜನತೆಯ ಮೇಲೆ ಅವಿರತ ಆರ್ಥಿಕ ಹೊಡೆತ

ಭಾರತದ ಆಂತರಿಕ ಆರ್ಥಿಕತೆಯನ್ನು ಬಲಿಗೊಟ್ಟು ವಿದೇಶಿ ಬಂಡವಾಳಕ್ಕೆ ಗರಿಷ್ಠ ಲಾಭ ಮಾಡಿಕೊಳ್ಳಲು ಹೆಚ್ಚಿನ ಅವಕಾಶ ಕಲ್ಪಿಸಿದ್ದು ನವ-ಉದಾರವಾದಿ ಆರ್ಥಿಕ ಸುಧಾರಣೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ಮೋದಿ ಸರಕಾರ ಮುಂದಿಟ್ಟ ಹೆಜ್ಜೆಯ ಪ್ರಮುಖ ಕುರುಹಾಗಿದೆ.

ಆರ್ಥಿಕ ಪುನರುಜ್ಜೀವನ ಎಂಬುದು ಬಿಜೆಪಿಯ ಚುನಾವಣೆ ಪ್ರಚಾರದ ಅತ್ಯಂತ ದೊಡ್ಡ ಆಶ್ವಾಸನೆಯಾಗಿತ್ತು. ಆ ಪಕ್ಷದ ಪ್ರತಿಗಾಮಿ ಸಾಮಾಜಿಕ ಮತ್ತು ರಾಜಕೀಯ ಅಜೆಂಡಾವನ್ನು ಅಷ್ಟಾಗಿಯೇನೂ ಒಪ್ಪದ ಅನೇಕರು ಕೂಡ ಈ ಭರವಸೆಗೆ ಮಾರುಹೋದರು. ಆದರೆ, ಅದಾದ ಎರಡು ವರ್ಷಗಳಲ್ಲಿ ಎಲ್ಲಾ ರಂಗಗಳಲ್ಲಿ ಕುಸಿಯುತ್ತಿರುವ ಆರ್ಥಿಕತೆಯನ್ನಷ್ಟೆ ನಾವು ನೋಡುತ್ತಿರುವುದು.

ಭಾರತದ ಬೆಳವಣಿಗೆ ದರ ಜಗತ್ತಿನಲ್ಲೇ ವೇಗವಾದದ್ದು ಎಂಬ ಕಪಟ ಅಂಕಿ ಅಂಶಗಳನ್ನು ಎಲ್ಲರೂ ಅಪನಂಬಿಕೆಯಿಂದಲೇ ಕಂಡಿದ್ದರು. ಸ್ವತಃ ರಿಝರ್ವ್ ಬ್ಯಾಂಕ್ ಗವರ್ನರ್ ಮತ್ತು ಪ್ರಧಾನ ಮಂತ್ರಿಯವರ ಆರ್ಥಿಕ ಸಲಹೆಗಾರ ಜಿಡಿಪಿ ಬೆಳವಣಿಗೆ ದರದ ಅಂಕಿಅಂಶಗಳಿಗೂ ವಾಸ್ತವತೆಗೂ ಹೊಂದಿಕೆಯಾಗುವುದಿಲ್ಲ ಎಂದು ಅಧಿಕೃತ ವಾಗಿಯೇ ಹೇಳಿದ್ದರು. ಹತಾಶೆಯ ಜಾಗತಿಕ ಆರ್ಥಿಕ ಸನ್ನಿವೇಶದಲ್ಲಿ ಭಾರತ ಅತಿ ಹೆಚ್ಚಿನ ಬೆಳವಣಿಗೆ ದರವನ್ನು ಸಾಧಿಸಿದೆ ಎಂದು ಹೇಳಿಕೊಳ್ಳುವುದು 'ಕುರುಡರ ರಾಜ್ಯದಲ್ಲಿ ಒಕ್ಕಣ್ಣನೇ ರಾಜ' ಎನ್ನುವಂತೆ ಎಂದು ಆರ್‌ಬಿಐ ಗವರ್ನರ್ ವರ್ಣಿಸಿದ್ದರು. ಇವೆಲ್ಲದರ ಹೊರತಾಗಿಯೂ ಬಿಜೆಪಿ ಮತ್ತು ಮೋದಿ 2014ರ ಸಾರ್ವತ್ರಿಕ ಚುನಾವಣೆಗಳ ವೇಳೆ ಜನರಿಗೆ ನೀಡಿದ್ದ ಪ್ರಮುಖ ಆಶ್ವಾಸನೆಗಳತ್ತ ಹೊರಳಿ ನೋಡೋಣ.

* ರಫ್ತು ಪ್ರಮಾಣವನ್ನು 2013-14ರಲ್ಲಿದ್ದ 465.9 ಬಿಲಿಯನ್ ಅಮೆರಿಕನ್ ಡಾಲರ್‌ನಿಂದ 2019-20ರ ಹೊತ್ತಿಗೆ ಸರಿಸುಮಾರು ದುಪ್ಪಟ್ಟು, ಅಂದರೆ 900 ಬಿಲಿಯ ಡಾಲರ್‌ಗೆ ಹೆಚ್ಚಿಸುವುದಾಗಿ ಸರಕಾರ ಭರವಸೆ ನೀಡಿತ್ತು. ವಾಸ್ತವವಾಗಿ, 17 ತಿಂಗಳ ಕಾಲ ರಫ್ತು ಒಂದೇ ಸಮನೆ ಇಳಿದಿದೆ, ಐದು ವರ್ಷಗಳಲ್ಲೇ ಅತಿ ಕಡಿಮೆ ಅಂದರೆ 261.13 ಅಮೆರಿಕ ಬಿಲಿಯನ್ ಡಾಲರ್ ರಫ್ತು ದಾಖಲಾಗಿದೆ. ಕಳೆದ 63 ವರ್ಷಗಳಲ್ಲೇ ರಫ್ತು ಕ್ಷೇತ್ರದಲ್ಲಿ ಅತ್ಯಂತ ಕೆಟ್ಟ ಕುಸಿತ ಇದಾಗಿದೆ. ಮುಂದುವರಿಯುತ್ತಿರುವ ಬಂಡವಾಳಶಾಹಿಯ ಜಾಗತಿಕ ಬಿಕ್ಕಟ್ಟು ಇದಕ್ಕೆ ಹೆಚ್ಚಿನ ಕಾರಣವಾದರೂ ಅದು ಈ ಪರಿಯ ಕುಸಿತಕ್ಕೆ ಸಮರ್ಥನೆ ಆಗಲಾರದು. ಭಾರತದ ರಫ್ತನ್ನು ಪ್ರೋತ್ಸಾಹಿಸುವಲ್ಲಿ ಮೋದಿ ಸರಕಾರದ ನೀತಿಗಳು ಈ ಎರಡು ವರ್ಷಗಳಲ್ಲಿ ತೀವ್ರವಾಗಿ ವಿಫಲವಾಗಿವೆ.

* ರಫ್ತು-ಆಧಾರಿತ ಬೆಳವಣಿಗೆಯ ಎಲ್ಲಾ ಕಾರ್ಯತಂತ್ರಗಳು ಇಂದು ಕುಸಿದಿರುವುದರಿಂದ, ಭಾರತೀಯರ ಖರೀದಿ ಶಕ್ತಿಯನ್ನು ವಿಸ್ತರಿಸಲು ಭಾರತ ಆಂತರಿಕವಾಗಿ ನೋಡಬೇಕಾಗಿದೆ ಹಾಗೂ ತನ್ಮೂಲಕ ದೇಶದೊಳಗಿನ ಒಟ್ಟು ಬೇಡಿಕೆಯನ್ನು ಹೆಚ್ಚಿಸುವಂತೆ ನೋಡಿಕೊಳ್ಳಬೇಕಾಗಿದೆ. ಆದರೆ ಅದಕ್ಕೆ ತದ್ವಿರುದ್ಧವಾದುದು ಆಗುತ್ತಿದೆ ಎನ್ನುವುದನ್ನು ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಇಂಡೆಕ್ಸ್ ಆಫ್ ಇಂಡಸ್ಟ್ರಿಯಲ್ ಪ್ರೊಡಕ್ಷನ್- ಐಐಪಿ) ತೋರಿಸುತ್ತದೆ. ಈ ವರ್ಷ ಮಾರ್ಚ್‌ನಲ್ಲಿ ಐಐಪಿ ಬೆಳವಣಿಗೆ 0.1 ಶೇಕಡಾ ಆಗಿತ್ತು. ಇಡೀ 2015-16ರಲ್ಲಿ ಬೆಳವಣಿಗೆ 2.4 ಶೇಕಡಾ ಆಗಿತ್ತು. 2013-14ರಲ್ಲಿ ಇದೇ ಐಐಪಿ ಬೆಳವಣಿಗೆ 4.8 ಶೇಕಡಾ ಆಗಿತ್ತು. ಐಐಪಿಯ ವಿವರಗಳನ್ನು ನೋಡುವಾಗ ಪರಿಸ್ಥಿತಿ ಇನ್ನಷ್ಟು ಗಾಬರಿ ಉಂಟು ಮಾಡುತ್ತದೆ. 2015-16ನೇ ಆರ್ಥಿಕ ವರ್ಷದ ಮಾರ್ಚ್‌ನಲ್ಲಿ ಸರಕು ತಯಾರಿಕೆಯ ಪ್ರಮಾಣ ಸಂಕುಚಿತಗೊಂಡಿದ್ದು ಬೆಳವಣಿಗೆ ಆಗಿದ್ದು ಕೇವಲ ಎರಡು ಶೇಕಡಾ ಬೆಳವಣಿಗೆ ದಾಖಲಿಸಿದೆ. ಇಡೀ ವರ್ಷ ಬಂಡವಾಳ ಸರಕು(ಕ್ಯಾಪಿಟಲ್ ಗೂಡ್ಸ್) ಕ್ಷೇತ್ರ ಕೂಡ ಕೇವಲ 2.9 ಶೇಕಡಾ ಬೆಳವಣಿಗೆ ದರವನ್ನು ತೋರಿಸಿತ್ತು, ಇದು ಖಾಸಗಿ ಹೂಡಿಕೆಯಲ್ಲಿ ಮಂದಗತಿಯಿರುವುದರ ಸೂಚನೆಯಾಗಿದೆ. ಪ್ರಮುಖ



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

> 'ಬರಾಕ್,ನನ್ನ ಗೆಳೆಯ' ಎಂದು ಮೋದಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅದು ಸಾಮಾಜಿಜ ಜಾಲತಾಣದಲ್ಲಿ ಕಮೆಂಟ್‌ಗಳಿಗೆ ಒಂದು ವಿಷಯವಾಗಬಹುದು. ಆದರೆ ಅದು ಒಬಾಮಾ ಅಧ್ಯಕ್ಷತೆಯ ಅವಧಿಯಲ್ಲಿ ಅಮೆರಿಕದೊಂದಿಗೆ ತೀರಾ ಆಳವಾದ ಅಡಿಯಾಳು ಸಂಬಂಧಕ್ಕೆ ಭಾರತವನ್ನು ಇಳಿಸಿದ್ದರ ಪ್ರಸಕ್ತ ವಾಸ್ತವದ ಸಂಕೇತವಾಗಿದೆ.

ಕ್ಷೇತ್ರದಲ್ಲಿನ ವಾರ್ಷಿಕ ಬೆಳವಣಿಗೆ ಒಂದು ದಶಕದಲ್ಲೇ ಅತಿ ಕಡಿಮೆ ದಾಖಲಾಗಿದ, ಅಂದರೆ ಕೇವಲ 2.7 ಶೇಕಡಾ ಆಗಿರುವುದು ಕೈಗಾರಿಕಾ ಕ್ಷೇತ್ರದಲ್ಲಿ ಮಂಕು ಕವಿದಿರುವುದರ ಸಂಕೇತವಾಗಿದೆ.

* 2014 ಮತ್ತು 2015ರ ಬಂಡವಾಳ ಹೂಡಿಕೆ ಪ್ರವೃತ್ತಿ ಕೂಡ ಅಷ್ಟೇ ದುರಂತಮಯವಾದುದಾಗಿದೆ. 2014ರಲ್ಲಿ ಹೂಡಿಕೆ ಪ್ರಸ್ತಾವನೆಗಳು ಶೇಕಡಾ 23ರಷ್ಟು ಕುಸಿಯಿತು. 2013ರಲ್ಲಿ 5.3 ಲಕ್ಷ ಕೋಟಿ ರೂಪಾಯಿ ಹೂಡಿಕೆ ಪ್ರಸ್ತಾವನೆಗಳು ಬಂದಿದ್ದು 2014ರಲ್ಲಿ ಅದು 4 ಲಕ್ಷ ಕೋಟಿ ರೂಪಾಯಿಗೆ ಇಳಿಯಿತು. 2015ರಲ್ಲಿ ಕೂಡ ಅದು ಶೇಕಡಾ 23ರಷ್ಟು ಕುಸಿತ ಕಂಡು ಹೂಡಿಕೆ ಪ್ರಸ್ತಾವನೆ 3.11 ಲಕ್ಷ ಕೋಟಿ ರೂಪಾಯಿಗೆ ನಿಂತಿತ್ತು. 2016ರ ಮೊದಲ ಮೂರು ತಿಂಗಳಲ್ಲಿ 60,130 ಕೋಟಿ ರೂಪಾಯಿ ಹೂಡಿಕೆ ಪ್ರಸ್ತಾವನೆಗಳು ಬಂದಿದ್ದು, ಪ್ರವೃತ್ತಿ ಹೀಗೇ ಮುಂದುವರಿದರೆ ಈ ವರ್ಷ ಹೂಡಿಕೆ ಪ್ರಮಾಣ ಇನ್ನಷ್ಟು ಕುಸಿಯಲಿದೆ.

* ಕೈಗಾರಿಕೆ ಇಳಿಮುಖವಾಗಿರುವುದರಿಂದ ಪ್ರತಿವರ್ಷ ಮಾರುಕಟ್ಟೆ ಪ್ರವೇಶಿಸುವ 1.4ಕೋಟಿ ಭಾರತೀಯರಿಗೆ ಉದ್ಯೋಗವಿಲ್ಲ. ಶ್ರಮ-ಪ್ರಧಾನವಾದ (ಲೇಬರ್ ಇಂಟೆನ್ಸ್) ಎಂಟು ಕೈಗಾರಿಕೆಗಳಲ್ಲಿ 2015ರಲ್ಲಿ ಕಳೆದ ಆರು ವರ್ಷಗಳಲ್ಲೇ ಅತಿಕಡಿಮೆ ಉದ್ಯೋಗ ಸೃಷ್ಟಿಯಾಗಿದೆ ಎಂಬುದನ್ನು ಹೊಸ ಉದ್ಯೋಗಗಳಿಗೆ ಸಂಬಂಧಿಸಿದ ಸರಕಾರದ ಅಂಕಿ ಅಂಶಗಳೇ ತೋರಿಸುತ್ತವೆ. 2015ರಲ್ಲಿ ಕೇವಲ 1.35 ಲಕ್ಷ ಉದ್ಯೋಗ ಸೃಷ್ಟಿಯಾಗಿದೆ. ಕಳೆದ ವರ್ಷ ಎಪ್ರಿಲ್‌ನಿಂದ ಜೂನ್ ನಡುವೆ ವಾಸ್ತವವಾಗಿ 43,000ದಷ್ಟು ಉದ್ಯೋಗಗಳು ಕುಸಿದಿವೆ. ಅದೇ ವರ್ಷ ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ ಉದ್ಯೋಗಗಳ ಸಂಖ್ಯೆಯಲ್ಲಿ ಅತಿಹೆಚ್ಚಿನ ಕುಸಿತ ದಾಖಲಾಗಿದೆ: ಐಟಿ-ಬಿಪಿಒ ವಲಯದಲ್ಲಿ 14,000, ಆಟೋಮೊಬೈಲ್ ಕ್ಷೇತ್ರದಲ್ಲಿ 13,000, ಲೋಹಗಳಲ್ಲಿ 12,000 ಮತ್ತು ರತ್ನ ಮತ್ತು ಆಭರಣ ವ್ಯಾಪಾರದಲ್ಲಿ 8,000 ಉದ್ಯೋಗಗಳು ಇಳಿಕೆಯಾಗಿವೆ.

ಪ್ರತಿವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುವುದಾಗಿ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ, ಭಾರತದ ಜನಸಂಖ್ಯೆಯ ಅನುಕೂಲವನ್ನು ಜನಸಂಖ್ಯೆಯ ದುರಂತವನ್ನಾಗಿ ಪರಿವರ್ತಿಸಲು ಟೊಂಕ ಕಟ್ಟಿ ನಿಂತಂತೆ ಕಾಣುತ್ತದೆ.

* ಕುಸಿಯುತ್ತಿರುವ ರಫ್ತು, ಉತ್ಪಾದನೆಯಲ್ಲಿ ಇಳಿಕೆ ಮತ್ತು ದುರ್ಬಲ ಬಂಡವಾಳ ಹೂಡಿಕೆ ಬೇಡಿಕೆ- ಇವೆಲ್ಲವೂ ಬ್ಯಾಂಕಿಂಗ್ ವಲಯಕ್ಕೆ ಇನ್ನಷ್ಟು ಚಿಂತೆಯ ಸನ್ನಿವೇಶವನ್ನು ಸೃಷ್ಟಿಸಲಿವೆ. ವಿವಿಧ ಸರಕಾರಗಳು ತಮಗೆ ಇಷ್ಟವಾದ ಚಮಚಾ ಬಂಡವಾಳಗಾರರನ್ನು ಬೆಳೆಸಲು ಬಳಸಿಕೊಂಡಿದ್ದರಿಂದ ಭಾರತದ ಬ್ಯಾಂಕಿಂಗ್ ಕ್ಷೇತ್ರ ಈಗಾಗಲೇ ತೀವ್ರ ಬಿಕ್ಕಟ್ಟಿನಲ್ಲಿದೆ. ಬ್ಯಾಂಕ್‌ಗಳ ಸುಸ್ತಿ ಸಾಲಗಳು(ಎನ್‌ಪಿಎ-ವಸೂಲಿ ಮಾಡಲಾಗದ ಸಾಲಗಳು) ಅಂದಾಜು 13 ಲಕ್ಷ ಕೋಟಿ ರೂಪಾಯಿ ಆಗಿದೆ. (195 ಬಿಲಿಯ ಅಮೆರಿಕನ್ ಡಾಲರ್). ನಮ್ಮ ಬ್ಯಾಂಕ್‌ಗಳಿಗೆ ಬರಬೇಕಾದ ಈ ರೀತಿಯ ಮೊತ್ತ ಮುಂದಿನ ವರ್ಷ ಇನ್ನೂ ಹೆಚ್ಚಾಗಲಿದ್ದು, ಇದು 112 ದೇಶಗಳ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಕ್ಕಿಂತ ಹೆಚ್ಚಿನದ್ದಾಗಿದೆ. ಅಷ್ಟು ಮಾತ್ರವೇ ಅಲ್ಲದೆ, ಬ್ಯಾಡ್ ಲೋನ್ ಎಂದು ಹೇಳಲಾಗುವ ಈ ರೀತಿಯ ಮೊತ್ತ ಈಗ ವಾಸ್ತವವಾಗಿ ಈ ಬ್ಯಾಂಕ್‌ಗಳ ಮಾರುಕಟ್ಟೆ ಮೌಲ್ಯವನ್ನೇ ಮೀರಿಸುತ್ತದೆ.

ಬ್ಯಾಂಕ್‌ಗಳಿಗೆ ಸಾಲ ವಾಪಸ್ ಮಾಡದವರು ಯಾರು? ಈ ರೀತಿಯ ವಂಚನೆ ಮಾಡಿ ಕೊಬ್ಬಿರುವವರಿಗೆ ಶಿಕ್ಷೆ ವಿಧಿಸುವುದು ಒತ್ತಟ್ಟಿಗಿರಲಿ,

ಪುಟ 15ಕ್ಕೆ

ಈ ಬಾರಿಯ ಅಮೆರಿಕಾ ಭೇಟಿ: ಹೊಸ ಪೇಟೆಂಟ್ ಧೋರಣೆಯ ಉಡುಗೊರೆ ಮತ್ತು ಕೃಷಿ ಮಂತ್ರಾಲಯದಲ್ಲೂ ಒಂದು ತಿಪ್ಪರಲಾಗ

ಮೇ 12ರಂದು 'ಅಚ್ಛೇ ದಿನ್' ಸಂಪುಟ 'ರಾಷ್ಟ್ರೀಯ ಬೌದ್ಧಿಕ ಹಕ್ಕುಗಳ ಧೋರಣೆ'ಗೆ ಮಂಜೂರಾತಿ ನೀಡಿದೆ. 'ಸೃಜನಾತ್ಮಕ ಭಾರತ, ನವೀನತೆಯ ಭಾರತ' ಎಂಬುದು ಇದರ ಘೋಷವಾಕ್ಯ. ಸಾಮರ್ಥ್ಯಗಳನ್ನು, ಸಂಸ್ಥೆಗಳನ್ನು ಮತ್ತು ಜಾಗೃತಿಯನ್ನು ಬೆಳೆಸುವ ಕಣ್ಣೋಟ ಹೊಂದಿರುವ, ಸಂಶೋಧನೆ ಮತ್ತು ಅಭಿವೃದ್ಧಿಗೆ, ನವೀನ ಶೋಧಗಳಿಗೆ ಪ್ರೋತ್ಸಾಹ ಕೊಡುವ ಹಾಗೂ ಪಾರಂಪರಿಕ ಜ್ಞಾನದತ್ತವೂ ನೋಡುವ ಈ ಧೋರಣೆ ಭಾರತದ ಮುನ್ನಡೆಗೆ ಒಂದು ಮಹಾನ್ ಹೆಜ್ಜೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ವರ್ಣಿಸಿದ್ದಾರೆ. ಆದರೆ ಈ ರಂಗದ ಪರಿಣಿತರಿಗೆ ಈ ಬಗ್ಗೆ ಹಲವು ಸಂದೇಹಗಳಿವೆ. ಪ್ರಧಾನಿಗಳ ಮತ್ತೊಂದು ಅಮೆರಿಕಾ ಭೇಟಿಯ ಮುನ್ನಾದಿನ ಇದನ್ನು ಪ್ರಕಟಿಸಿರುವುದು ಈ ಸಂದೇಹಗಳನ್ನು ಗಟ್ಟಿಗೊಳಿಸಿದೆ.

ಔಷಧಿಗಳ ಲಭ್ಯತೆಯ ಕ್ಷೇತ್ರದ ಸಂಶೋಧಕರಾದ ಅಚಲ್ ಪ್ರಭಾಲ ಮತ್ತು ಅಜೀಂ ಪ್ರೇಮ್‌ಜಿ ವಿಶ್ವದ್ಯಾಲಯದ ಪ್ರಾಧ್ಯಾಪಕ ಸುಧೀರ್ ಕೃಷ್ಣಸ್ವಾಮಿ ಇದು ಭಾರತ ತನ್ನ ಪೇಟೆಂಟ್(ಬೌದ್ಧಿಕ ಹಕ್ಕುಗಳ) ಕಾನೂನುಗಳನ್ನು ಬದಲಿಸುವದಿಲ್ಲ ಎಂಬ ಅಚ್ಚುಕಟ್ಟಾದ ಘೋಷಣೆಯನ್ನು ಅಮೆರಿಕಾ ಮತ್ತು ಯುರೋಪಿಯನ್ ಒಕ್ಕೂಟಕ್ಕೆ ನೆಮ್ಮದಿ ಮತ್ತು ಸಂತೋಷ ನೀಡುವ ಬೆಟ್ಟದಷ್ಟು ತಂಪನೆಯ ಗಾಳಿಯ ನಡುವೆ ತೂರಿಸಿಟ್ಟಿದೆ ಎಂದು ಇದನ್ನು ವರ್ಣಿಸಿದ್ದಾರೆ (ದಿ ಹಿಂದು, ಮೇ 25). ಇದು 'ಸೋಗಿನ ಒಂದು ಮಹಾ ಕಸರತ್ತು' ಎನ್ನುವುದನ್ನು ಅವರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಈ ದಸ್ತಾವೇಜಿನಲ್ಲಿ 'ಅವೇರ್‌ನೆಸ್'(ಜಾಗೃತಿ) ಎಂಬ ಪದ ಕನಿಷ್ಟ 20 ಬಾರಿ ಬಂದಿದೆ ಹಾಗೂ 'ಟ್ರೆಡಿಶನಲ್ ನಾಲೆಡ್ಜ್'(ಸಾಂಪ್ರದಾಯಿಕ ಜ್ಞಾನ) ಎಂಬ ಪದ 22 ಬಾರಿ ಬಂದಿದೆ ಎನ್ನುವ ಅವರು ಹೆಚ್ಚೆಚ್ಚು ಬೌದ್ಧಿಕ ಹಕ್ಕು ಎಂದರೆ ಹೆಚ್ಚೆಚ್ಚು ನವೀನ ಶೋಧನೆಗಳು ಎಂಬ ಪಾಶ್ಚಿಮಾತ್ಯ ಕಟ್ಟುಕತೆಯ ಗಿಳಿಪಾಠ ಒಪ್ಪಿಸುತ್ತ, ಸ್ಥಳೀಯ ಜ್ಞಾನದ ಖಾಸಗೀಕರಣಕ್ಕೆ ಅರ್ಥಹೀನವಾದ ಪ್ರೋತ್ಸಾಹ ಕೊಡುತ್ತ ಈ ಧೋರಣೆ ಒಂದು ಉತ್ತಮ ಅವಕಾಶವನ್ನು ಕಳಕೊಂಡಿದೆ ಎನ್ನುತ್ತಾರೆ. ಇದು ಪಾಶ್ಚಿಮಾತ್ಯ ನವ–ಉದಾರವಾದ ಮತ್ತು ದೇಶೀ ಕೋಮುವಾದದ ಸ್ಫೋಟಕ ಮಿಶ್ರಣದ ಇನ್ನೊಂದು ಮಾದರಿ ಎಂದರೆ ತಪ್ಪಾಗುತ್ತದೆಯೇ?


ಈಗಿರುವ ಭಾರತದ ಪೇಟೆಂಟ್ ಕಾನೂನು ನವೀನತೆಯನ್ನು ಬೆಂಬಲಿಸುತ್ತಲೇ ಕೈಗೆಟಕುವ ಬೆಲೆಗಳಲ್ಲಿ ಔಷಧಿಗಳ ಲಭ್ಯತೆಗೂ ಅವಕಾಶ ಕಲ್ಪಿಸಿದ್ದು ಕಾನೂನು ರೂಪಿಸುವಲ್ಲಿ ಒಂದು ನವೀನತೆಯನ್ನು ತಂದಿತ್ತು. ದಕ್ಷಿಣ ಆಫ್ರಿಕಾ ಮತ್ತು ಬ್ರೆಝಿಲ್ ಇದರಿಂದ ಪ್ರೇರಿತರಾಗಿದ್ದು ತಮ್ಮ ದೇಶದಲ್ಲಿ ಇಂತಹ ಪೇಟೆಂಟ್ ಕಾನೂನುಗಳನ್ನು ತರಲು ಮುಂದಾದವು. ನಮ್ಮ ಪ್ರಧಾನಿಗಳ ವಿದೇಶಿ ಪ್ರವಾಸಗಳು ಭಾರತದ ಹೆಮ್ಮೆಯನ್ನು ವರ್ಧಿಸಿವೆ ಎನ್ನುತ್ತಾರೆ ಸಂಘ ಪರಿವಾರದ ಮಂದಿ. ಆದರೆ **ಪೇಟೆಂಟ್ ರಂಗದಲ್ಲಿ ನಿಜವಾಗಿಯೂ ಈಗಾಗಲೇ ಗಳಿಸಿರುವ ಭಾರತದ ನೇತೃತ್ವದ ಸ್ಥಾನವನ್ನು ಗಟ್ಟಿಗೊಳಿಸುವ ಅವಕಾಶವನ್ನು ಈ ಹೊಸ ಧೋರಣೆ ಕಳಕೊಂಡಿದೆ ಎಂದು ಈ ಇಬ್ಬರು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.**

ಇತ್ತೀಚಿನ ದಿನಗಳಲ್ಲಿ ಭಾರತದ ಪೇಟೆಂಟ್ ಕಾನೂನಿನ ಮೇಲೆ ಅಮೆರಿಕಾ ತನ್ನ ಸೂಪರ್ 301 ಕಾನೂನಿನ ಮೂಲಕ ಒತ್ತಡ ಹಾಕುತ್ತಿದೆ. ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಯ ಸದಸ್ಯತ್ವ ಪಡೆಯಲು ಭಾರತ ತನ್ನ ಪೇಟೆಂಟ್ ಕಾನೂನನ್ನು ಅದರ 'ಟ್ರಿಪ್ಸ್' ಸಂಧಿಗೆ ಅನುಗುಣವಾಗುವಂತೆ ಬದಲಿಸಿತ್ತು. ಆದರೆ ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳಿಗೆ ಅದರಿಂದಲೂ ತೃಪ್ತಿಯಿಲ್ಲ. ಅವು ನಮ್ಮ ಪೇಟೆಂಟ್ ಕಾನೂನುಗಳನ್ನು ಇನ್ನಷ್ಟು ಬಲಪಡಿಸಬೇಕು, ಅಂದರೆ ಅವುಗಳ ಪೇಟೆಂಟ್ ಹುನ್ನಾರಗಳಿಗೆ ಮತ್ತಷ್ಟು ಅವಕಾಶ ಮಾಡಿಕೊಡುವಂತೆ ಇರಬೇಕು ಎಂದು ಒತ್ತಾಯಿಸುತ್ತಲೇ ಇವೆ. ಮೇ 12ರಂದು ಮೋದಿ ಸಂಪುಟ ಮಂಜೂರು ಮಾಡಿರುವ ಈ ಧೋರಣೆ ಆ ದಿಕ್ಕಿನಲ್ಲಿರುವಂತದ್ದು ಎಂದು ಈ ರಂಗದ ಇನ್ನೊಬ್ಬ ತಜ್ಞ ಡಾ. ದಿನೇಶ್ ಅಬ್ರೋಲ್ ಹೇಳುತ್ತಾರೆ(ಪೀಪಲ್ಸ್ ಡೆಮಾಕ್ರಸಿ, ಮೇ 22).

ಜೂನ್ 7–8ರಂದು ಪ್ರಧಾನಿಗಳು ಅಮೆರಿಕಾಕ್ಕೆ ಎರಡು ವರ್ಷಗಳಲ್ಲಿ ನಾಲ್ಕನೇ ಭೇಟಿಗೆ ಸಿದ್ಧವಾಗುತ್ತಿರುವ ಸಂದರ್ಭದಲ್ಲಿ ಈ ಹೊಸ ಪೇಟೆಂಟ್ ಧೋರಣೆಯನ್ನು ಪ್ರಕಟಿಸಿರುವುದು ಬಹಳ ಮಹತ್ವದ್ದು ಎನ್ನುತ್ತಾರೆ ಡಾ.ಅಬ್ರೋಲ್. ಈ ಧೋರಣೆ ಪೇಟೆಂಟ್ ಕಾನೂನು, ಟ್ರೇಡ್ ಮಾರ್ಕ್ಸ್ ಕಾನೂನು, ಡಿಸೈನ್ ಕಾನೂನು, ಸರಕುಗಳ ಭೌಗೋಳಿಕ ಸೂಚಕಗಳ ಕಾನೂನು, ಕಾಪಿರೈಟ್ ಕಾನೂನು, ಸಸ್ಯ ವೈವಿಧ್ಯ ರಕ್ಷಣೆ ಕಾನೂನು, ರೈತರ ಹಕ್ಕುಗಳ ಕಾನೂನು, ಸೆಮಿಕಂಡಕ್ಟರ್ ಐಸಿ ಡಿಸೈನ್ ಕಾನೂನು ಮತ್ತು ಜೀವಶಾಸ್ತ್ರೀಯ ವೈವಿಧ್ಯತೆಯ ಕಾನೂನು ಇವನ್ನೆಲ್ಲ ನಿರ್ವಹಿಸುವಂತದ್ದು. ಇದರಿಂದ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳಿಗೆ ದೊಡ್ಡ ಪ್ರಮಾಣದಲ್ಲಿ ಪ್ರಯೋಜನವಾದರೆ, ಭಾರತೀಯ ಜನತೆ ದೇಶೀಯ ತಂತ್ರಜ್ಞಾನ ಮತ್ತು ಕೈಗಾರಿಕಾ ಸಾಮರ್ಥ್ಯದ ಅಭಿವೃದ್ಧಿಗೆ ಹಲವಾರು ಕಂಟಕಗಳನ್ನು ಎದುರಿಸಬೇಕಾಗುತ್ತದೆ ಎಂದು ಅಬ್ರೋಲ್ ಹೇಳುತ್ತಾರೆ.

ಮುಖ್ಯವಾಗಿ ಔಷಧಿಗಳು, ಆಹಾರ, ಪರಿಸರ ರಕ್ಷಣೆ ಮುಂತಾದವುಗಳಲ್ಲಿ ಭಾರತದ ಜನತೆ, ವಿಶೇಷವಾಗಿ ರೈತರು ಅಮೆರಿಕನ್ ಮತ್ತು ಯುರೋಪಿಯನ್ ಗುತ್ತೇದಾರಿಗಳ ಅಟಾಟೋಪಗಳನ್ನು ಎದುರಿಸಬೇಕಾಗುತ್ತದೆ. **ಅಮೆರಿಕಾ ಭೇಟಿಯಲ್ಲಿ ಒಂದು ಉಡುಗೊರೆಯನ್ನು ನಮ್ಮ ಪ್ರಧಾನಿಗಳು ಕೊಂಡೊಯ್ಯಬೇಕಾಗಿತ್ತು. ಅದು ಈ ಬೌದ್ಧಿಕ ಹಕ್ಕುಗಳ ಧೋರಣೆ ಎನ್ನುತ್ತಾರೆ ದಿನೇಶ್ ಅಬ್ರೋಲ್.**

'ಅಚ್ಛೇದಿನ್' ಸರಕಾರ ಎರಡು ವರ್ಷಗಳನ್ನು ಪೂರೈಸುವ ವೇಳೆಗೆ ನಮ್ಮ ಧೀರ ಪ್ರಧಾನಿ ಭಾರತದ ಜನತೆಯ ಹಿತಗಳನ್ನು ಬಲಿಗೊಟ್ಟು ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳಿಗೆ 'ಅಚ್ಛೇದಿನ್'ಗಳ ಉಡುಗೊರೆಯನ್ನು ಹೊತ್ತು ಅಮೆರಿಕಾಕ್ಕೆ ಹೋಗುತ್ತಿದ್ದಾರೆ ಎಂಬುದು ಈ ಮೂವರು ತಜ್ಞರ ವಿಶ್ಲೇಷಣೆಗಳಿಂದ ಕಂಡು ಬರುವ ಸಂಗತಿ.



ಇನ್ನೊಂದು ತಿಪ್ಪರಲಾಗ–ಜಿಎಂ ಬೀಜಗಳ ರಾಯಲ್ಟಿಯಲ್ಲಿ ಮೊನ್ಸೆಂಟೋಗೆ ರಿಯಾಯ್ತಿ!

ಇತ್ತೀಚೆಗೆ ಮೋದಿ ಸರಕಾರದ ಕೃಷಿ ಮಂತ್ರಾಲಯ ಕೃಷಿ ತಂತ್ರಜ್ಞಾನದ ಕಂಪನಿಗಳಿಗೆ ಅವರ ತಳಿ ಮಾರ್ಪಾಡಿನ(ಜಿಎಂ) ಬೀಜಗಳಿಗೆ ಕೊಡುವ ರಾಯಧನ(ರಾಯಲ್ಟಿ)ವನ್ನು ಮೊದಲ 5ವರ್ಷಗಳಲ್ಲಿ 10ಶೇ.ಕ್ಕೆ ಮತ್ತು ನಂತರ ಪ್ರತಿವರ್ಷ 10ಶೇ. ಕಡಿತ ಮಾಡಲಾಗುವುದು, ಈ ಬಗ್ಗೆ ಈಗಾಗಲೇ ನೀಡಲಾಗಿರುವ ಲೈಸೆನ್ಸ್‌ಗಳು ರದ್ದಾಗುತ್ತವೆ, 30ದಿನಗಳೊಳಗೆ ಈ ಬಗ್ಗೆ ಕಂಪನಿಗಳು ಸರಕಾರದೊಂದಿಗೆ ಮರು ಮಾತುಕತೆ ನಡೆಸಬೇಕು ಎಂದು ಆದೇಶ ಹೊರಡಿಸಿತ್ತು.

ಆದರೆ ಈಗ ಆ ಆದೇಶವನ್ನು ತಡೆ ಹಿಡಿಯಲಾಗಿದೆ ಎಂದು ವರದಿಯಾಗಿದೆ. ಈ ಆದೇಶದಿಂದ ಮುಖ್ಯವಾಗಿ ಇಂತಹ ಬೀಜಗಳ ಗುತ್ತೇದಾರಿಕೆ ಹೊಂದಿರುವ ಅಮೆರಿಕಾದ ಮಾನ್ಸೆಂಟೋ ಕಂಪನಿಗೆ ಬಹಳ ತೊಂದರೆಯಾಗುತ್ತಿತ್ತು. **ಪ್ರಧಾನ ಮಂತ್ರಿಗಳ ಕಚೇರಿಯ ಮಧ್ಯಪ್ರವೇಶದಿಂದಾಗಿ, ಹಣಕಾಸಿನ ಮಂತ್ರಿಗಳ ಇತ್ತೀಚಿನ ಮೂರು ತಿಪ್ಪರಲಾಗಗಳ ನಂತರ ಕೃಷಿ ಕ್ಷೇತ್ರದ ಈ ತಿಪ್ಪರಲಾಗ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.** ಆರೆಸ್ಸೆಸ್‌ನ ಒಂದು ಸಂಘಟನೆಯ ಒತ್ತಡದಿಂದ ಹೊರಬಂದ ಈ ಆದೇಶವನ್ನು ಪ್ರಧಾನ ಮಂತ್ರಿಗಳ ಕಚೇರಿಯ ಒತ್ತಡದಿಂದಾಗಿ ಹಿಂತೆಗೆದುಕೊಳ್ಳಲಾಗಿದೆಯಂತೆ. ನಾಲ್ಕನೇ ಅಮೆರಿಕಾ ಭೇಟಿ ಕಾಲದಲ್ಲಿ ಪ್ರಧಾನಿಗಳಿಗೆ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳಿಂದ ಕಿರಿಕಿರಿಯಾಗದಿರಲಿ ಎಂದಷ್ಟೇ ಈ ತಿಪ್ಪರಲಾಗ ಇರಬಹುದೇ ಎಂದು ಕೃಷಿ ಮಂತ್ರಾಲಯದ ಮೂಲ ಆದೇಶದಿಂದ ಕಿಡಿಕಿಡಿಯಾಗಿರುವ ನವ–ಉದಾರವಾದಿಗಳಿಗೂ ಸಂದೇಹ. ಅಮೆರಿಕಾ ಭೇಟಿಯಿಂದ ಹಿಂದಿರುಗಿದಾಗ ಮತ್ತೆ 56 ಅಂಗುಲ ಎದೆಯ ನೆನಪಾಗಬಹುದೇ ಎಂಬ ಆತಂಕ ಅವರಿಗೆ!

ಯುಜಿಸಿಯ ಹೊಸ ಅಧಿಸೂಚನೆ–ಸಾರ್ವಜನಿಕ ಉನ್ನತ ಶಿಕ್ಷಣವನ್ನು ಕಳಚಿ ಹಾಕುವ ಹುನ್ನಾರ :ಎಸ್‌ಎಫ್‌ಐ

ಇತ್ತೀಚೆಗೆ ವಿಶ್ವವಿದ್ಯಾಲಯ ಧನಸಹಾಯ ಅಯೋಗ(ಯುಜಿಸಿ) 3ನೇ ತಿದ್ದುಪಡಿ, 2016ರ ಮಿಟಿಫಿಕೇಶನ್ ಬಮದಿದೆ. ಇದು ನಮ್ಮ ವಿಶ್ವಿದ್ಯಾಲಯುಗಳಲಿ ಬೋಧನೆ ಮತ್ತು ಕಲಿಕೆಯನ್ನು ಇನ್ನಷ್ಟು ದುರ್ಬಲಗೊಳಿಸುತ್ತದೆ ಎಂದು ಎಸ್‌ಎಫ್‌ಐ ದಿಲ್ಲಿ ರಾಜ್ಯ ಸಮಿತಿ ಖಂಡಿಸಿದೆ.

ಇದು ನೇರ ಬೋಧನಾ ಅವಧಿಯನ್ನು ಅಸಿಸ್ಟೆಂಟ್ ಪ್ರೊಫೆಸರುಗಳಿಗೆ 16ರಿಂದ 24 ಗಂಟೆಗಳಿಗೆ ಏರಿಸಿದೆ ಮತ್ತು ಅಸೋಸಿಯೇಟ್ ಪ್ರೊಫೆಸರುಗಳಿಗೆ 14ರಿಂದ 22ಗಂಟೆಗಳಿಗೆ ಏರಿಸಿದೆ. ಎರಡು ಗಂಟೆಗಳ ಪ್ರಾಕ್ಟಿಕಲ್ ಅವಧಿಯನ್ನು ಇನ್ನು ಮುಂದೆ ಒಂದು ಗಂಟೆಯ ಪಾಠ ಎಂದು ಪರಿಗಣಿಸಲಾಗುವುದಂತೆ. ಇದರಿಂದ ಒಂದೆಡೆ ಈಗ 'ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ನೂರಾರು ಅಧ್ಯಾಪಕರು, ತಾತ್ಕಾಲಿಕ ಬೋಧನಾ ಕೆಲಸಗಳನ್ನು ಮಾಡುತ್ತಿರುವ ಎಂಫಿಲ್ ಮತ್ತು ಪಿಹೆಚ್‌ಡಿ ವಿದಾರ್ಥಿಗಳೂ ಕೆಲಸ ಕಳಕೊಳ್ಳುತ್ತಾರೆ. ಇನ್ನೊಂದೆಡೆಯಲ್ಲಿ ಇದು ವಿದ್ಯಾರ್ಥಿ:ಅಧ್ಯಾಪಕ ಅನುಪಾತವನ್ನು ಮತ್ತಷ್ಟು ಕೆಡಿಸಿ ಕಲಿಕೆಯ ಪ್ರಕ್ರಿಯೆಗೆ ಬಾಧಕವಾಗುತ್ತದೆ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ.

ಈಗ ದಿಲ್ಲಿ ವಿಶ್ವವಿದ್ಯಾಲಯದಲ್ಲಿ 4000 ಅಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡದೇ ಬಿಡಲಾಗಿದೆ. ಈ ನೋಟಿಫಿಕೇಶನ್ ಮೂಲಕ ಈ ಹುದ್ದೆಗಳಲ್ಲಿ ಬಹಳಷ್ಟು ರದ್ದಾಗುತ್ತವೆ. ಇದು ಯುಜಿಸಿಗೆ ಹಣನೀಡಿಕೆಯಲ್ಲಿ 55ಶೇ.ದಷ್ಟು ಕಡಿತ ಮಾಡಿರುವ ಈ ಅಚ್ಛೇ ದಿನ್ ಸರಕಾರದ ಕ್ರಮದ ದುಷ್ಪರಿಣಾಮ. ಈ ಹುದ್ದೆಗಳನ್ನು ರದ್ದುಗೊಳಿಸುವುದೇ ಈ ಸರಕಾರದ ಉದ್ದೇಶವಿರುವಂತೆ ಕಾಣುತ್ತದೆ ಎಂಬುದು ವಿದ್ಯಾರ್ಥಿಗಳ ಆತಂಕ.


ದಿಲ್ಲಿ ವಿಶ್ವವಿದ್ಯಾಲಯ ಹಿಂದುಳಿದ ಸಾಮಾಜಿಕ ವಿಭಾಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಬೋಧನೆಯ ಕೊರತೆಗಳನ್ನು ತುಂಬಲು ವಿಶೇಷ ಟ್ಯುಟೋರಿಯಲ್ ತರಗತಿಗಳನ್ನು ನಡೆಸುತ್ತಿತ್ತು. ಈ ಆಧಿಸೂಚನೆ ಆ ಕ್ರಮವನ್ನೂ ದುರ್ಬಲಗೊಳಿಸಿದೆ. ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್)ಯಲ್ಲಿ ದಲಿತ ವಿಭಾಗಗಳ ಸಮಸ್ಯೆಗಳನ್ನು ಪರಿಶೀಲಿಸಿದ ಥೋರಟ್ ಸಮಿತಿ ಕೂಡ ಇಂತಹ ವಿಶೇಷ ತರಗತಿಗಳ ಶಿಫಾರಸು ಮಾಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು

ಈ ಮೊದಲು ಮೋದಿ ಸರಕಾರ ಎರಡು ವರ್ಷಗಳನ್ನು ಪೂರೈಸುವ ವೇಳೆಗೆ ಹೊಸ ಶಿಕ್ಷಣ ನೀತಿಯನ್ನು ಪ್ರಕಟಿಸುವುದಾಗಿ ತಿಳಿಸಲಾಗಿತ್ತು. ಬಹುಶಃ ಈ ಅಧಿಸೂಚನೆ ಅದರ ಮುನ್ಸೂಚನೆಯಿರಬಹುದೇ? ಸಾರ್ವಜನಿಕ ಉನ್ನತ ಶಿಕ್ಷಣವನ್ನು ಕಳಚಿ ಹಾಕಿ ಉನ್ನತ ಶಿಕ್ಷಣವನ್ನು ಉಳ್ಳವರಿಗೇ ಸೀಮಿತಗೊಳಿಸುವ ಖಾಸಗಿ ವಿವಿಗಳಿಗೆ 'ಅಚ್ಛೇ ದಿನ್' ತರುವ ಹುನ್ನಾರ ಇದರ ಹಿಂದಿದೆಯೇ ಎಂಬುದು ದಲಿತ, ಹಿಂದುಳಿದ ವಿಭಾಗಗಳಿಂದ ಬಂದಿರುವ ವಿದ್ಯಾರ್ಥಿಗಳ ಭಯ. ಹೈದರಾಬಾದ್ ಕೇಂದ್ರೀಯ ವಿವಿ, ಜೆಎನ್‌ಯು, ಯುಜಿಸಿ ಫೆಲೋಶಿಪ್‌ಗಳಲ್ಲಿ ಅಡೆ–ತಡೆಗಳು ಇವೆಲ್ಲ ಈ ಭಯ ನಿರಾಧಾರವೇನೂ ಅಲ್ಲ ಎಂದು ಸೂಚಿಸುತ್ತವೆ.

ಈ ಎಲ್ಲ ಕ್ರಮಗಳನ್ನು ಶಿಕ್ಷಕರ ಸಂಘಟನೆಗಳೊಡನೆ ಚರ್ಚಿಸದೆ ಏಕಪಕ್ಷೀಯವಾಗಿ ಶೈಕ್ಷಣಿಕ ಸುಧಾರಣೆಯ ಹೆಸರಿನಲ್ಲಿ ಜಾರಿಗೆ ತರಲಾಗುತ್ತಿದೆ. ಇದನ್ನು ದಿಲ್ಲಿ ವಿಶ್ವವಿದ್ಯಾಲಯ ಅಧ್ಯಾಪಕರ ಸಂಘ ಬಲವಾಗಿ ಪ್ರತಿಭಟಿಸಿದೆ, ಪ್ರತಿಭಟನಾರ್ಥ ಪರೀಕ್ಷಾ ಮೌಲ್ಯಮಾಪನವನ್ನು ಬಹಿಷ್ಕರಿಸಬೇಕೆಂದು ನಿರ್ಧರಿಸಿದೆ.

ರಾಜಸ್ತಾನದ ಪಠ್ಯಪುಸ್ತಕಗಳಲ್ಲಿ ಅಕ್ಬರ್ ಹೆಸರಿನೊಂದಿಗಿದ್ದ 'ಮಹಾನ್' ತೆಗೆದು 'ಮಹಾರಾಣ ಪ್ರತಾಪ್' ಮುಂದೆ ಸೇರಿಸಲಾಗಿದೆ. ದಿಲ್ಲಿಯ ಅಕ್ಬರ್ ಮಾರ್ಗದ ಹೆಸರು ಬದಲಾಯಿಸಿ ಮಹಾರಾಣಾ ಪ್ರತಾಪ್ ಮಾರ್ಗ ಎಂದು ಹೆಸರಿಡಬೇಕೆಂದು ಕೇಂದ್ರ ಮಂತ್ರಿಗಳು ಸೂಚಿಸಿದ್ದಾರೆ. ಉತ್ತರಾಖಂಡದಲ್ಲಿ ಬಿಜೆಪಿ ರ್‍ಯಾಲಿಯಲ್ಲಿ ಕಾಲು ಮುರಿದ ಪೋಲೀಸ್ ಕುದುರೆ 'ಶಕ್ತಿಮಾನ್' ಅಸು ನೀಗಿದೆ –ಸುದ್ದಿ

ಇತಿಹಾಸ ಬಿಜೆಪಿಯನ್ನು ಸಂಧಿಸುವಾಗ....



ವ್ಯಂಗ್ಯಚಿತ್ರ ಕೃಪೆ: ಅಲ್ಯುರ್, ಟೈಮ್ಸ್ ಆಫ್ ಇಂಡಿಯಾ

"ಯಾರಾದರೂ ಹೇಳುವರೇ....ನನ್ನ ತಪ್ಪೇನೆಂದು?"

ದಿಲ್ಲಿಯಲ್ಲಿ ಆಫ್ರಿಕಾ ದಿನದಂದು ಕವಿತೆಯ ಮೂಲಕ ಆಫ್ರಿಕಾದ ನೋವು ತೋಡಿಕೊಂಡ ಘಾನಾ ಹೈಕಮಿಶನರ್

ಭಾರತ ಮತ್ತು ಆಫ್ರಿಕಾದ ದೇಶಗಳ ನಡುವೆ ದೀರ್ಘಕಾಲದ ಸೌಹಾರ್ದದ ನಂಟಿಗೆ ಈ ಬಾರಿ ಕುತ್ತು ಬಂದಂತೆ ಕಾಣುತ್ತದೆ. ದಿಲ್ಲಿಯಲ್ಲಿ ಭಾರತದ ವಿದೇಶಾಂಗ ಇಲಾಖೆ ಏರ್ಪಡಿಸುವ 'ಆಫ್ರಿಕಾದಿನ'ದ ಆಚರಣೆಯನ್ನು ಮುಂದೂಡುವಂತೆ ಹಲವು ಆಫ್ರಿಕನ್ ದೇಶಗಳು ಒತ್ತಾಯಿಸಿದ್ದವು. ಇದು ಮೋದಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಕೊನೆಗೂ ಆಫ್ರಿಕಾದ ರಾಯಭಾರಿಗಳ ಮನ ಒಲಿಸಿ ದಿನಾಚರಣೆ ನಡೆದಿದೆ.

ಕಳೆದ ವಾರ ದೇಶದ ರಾಜಧಾನಿಯ ಬೀದಿಯಲ್ಲಿ ಕಾಂಗೋ ಮೂಲದ ಸ್ನಾತಕೋತ್ತರ ವಿದ್ಯಾರ್ಥಿ ಮಾಸುಂದ ಕಿತಾಡ ಓಲಿವರ್‌ನನ್ನು ಬಡಿದು ಸಾಯಿಸಿದ್ದು ಆಫ್ರಿಕಾದ ರಾಯಭಾರಿಗಳ ದುಗುಡಕ್ಕೆ ಕಾರಣ.


ಈ ಸಮಾರಂಭದಲ್ಲಿ ಘಾನಾದ ಹೈಕಮಿಶನರ್ ಸ್ವರಚಿತ ಕವನದ ಮೂಲಕ ಈ ದುಗುಡಕ್ಕೆ ಅಭಿವ್ಯಕ್ತಿ ನೀಡಿದರು–ನನ್ನ ಬಿಸಿ ಆಫ್ರಿಕನ್ ರಕ್ತ ಇದ್ದಕಿದ್ದಂತೆ ತಣ್ಣಗಾಗಿದೆ. ಯಾರಾದರೂ ಹೇಳಬೇಕು ನನ್ನ ತಪ್ಪೇನೆಂದು" ಎಂದು ಆರಂಭವಾಗುವ ಈ ಕವನ ಆಫ್ರಿಕಾದ ಮಹಾ ನದಿಗಳು, ನೈಲ್, ಗ್ರೇಟ್ ಕಾಂಗೊ, ಟಾಂಗಾನಿಕಾ, ವೋಲ್ಟಾ ಗಂಗೆಯಿಂದ ನನ್ನ ನೆತ್ತರನ್ನು ಪಡೆಯಲಿ" ಎಂದು ಕೊನೆಗೊಳ್ಳುತ್ತದೆ.



ವ್ಯಂಗ್ಯಚಿತ್ರ ಕೃಪೆ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಹೀಗೇಕೆ ಆಗುತ್ತಿದೆ? ಮೋದಿ ಸರಕಾರ ಎಚ್ಚೆತ್ತುಕೊಳ್ಳಲು ಆಫ್ರಿಕನ್ ದೇಶಗಳ ಬಹಿಷ್ಕಾರದ ಕರೆಯ ವರೆಗೆ ಕಾಯಬೇಕಿತ್ತೇ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕೇಳುತ್ತಾರೆ. ಕಳೆದ ವಾರ ಬಿಹಾರದಲ್ಲಿ 'ಜಂಗಲ್ ರಾಜ್'ಎಂದು ಟೀಕಿಸುತ್ತಿದ್ದರು. ದೇಶದ ರಾಜಧಾನಿಯಲ್ಲಿ ಯಾರ ರಾಜ್ಯವಿದೆ ಎಂಬ ಪ್ರಶ್ನೆಯನ್ನು ಈಗ ಎಲ್ಲರೂ ಕೇಳುತ್ತಿದ್ದಾರೆ. ಕೇಜ್ರಿವಾಲ್ ಸರಕಾರಕ್ಕಂತೂ ಇಲ್ಲಿಯ ಕಾನೂನು ವ್ಯವಸ್ಥೆ ಒಳಪಟ್ಟಿಲ್ಲವಲ್ಲ!

‘ಮೇಕ್ ಇನ್ ಇಂಡಿಯಾ’ ನಡುವೆಯೇ ಭಾರತದ ಕೈಗಾರಿಕಾ ಸ್ಥಗಿತತೆ–ಏಕೆ?



ಕೆ.ಎಂ.ನಾಗರಾಜ್

ಇತ್ತೀಚೆಗೆ ಪ್ರಕಟವಾದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಪ್ರಕಾರ 2015–16ರಲ್ಲಿ ಕೈಗಾರಿಕಾ ವಲಯದ ಬೆಳವಣಿಗೆಯ ದರವು ಶೇ.2.4ರಷ್ಟು ಕೆಳಮಟ್ಟದಲ್ಲಿದೆ. ಇದು ಇದ್ದಕ್ಕಿದ್ದಂತೆ ಆದದ್ದಲ್ಲ. ಕಳೆದ ನಾಲ್ಕು ವರ್ಷಗಳಿಂದಲೂ ಹಗೆ ಸಾಧಿಸುವ ರೀತಿಯಲ್ಲಿ ಬೆಳವಣಿಗೆಯ ದರ ಕುಸಿದಿದೆ. ಉದಾರೀಕರಣದ ಇಡೀ ಅವಧಿಯಲ್ಲಿ ನಿಧಾನ ಗತಿಯಲ್ಲಿ ಸಾಗುತ್ತಿದ್ದ ಕೈಗಾರಿಕಾ ಬೆಳವಣಿಗೆ ಈಗ ಸ್ಥಗಿತಗೊಳ್ಳುತ್ತಿದೆ. ಉದಾರೀಕರಣದ ಹಿಂದಿನ ದಶಕದಲ್ಲಿ (ಅಂದರೆ, 1980–81 ಮತ್ತು 1990–91ರ ನಡುವೆ) ಕೈಗಾರಿಕಾ ಉತ್ಪಾದನಾ ಬೆಳವಣಿಗೆಯ ದರ ಶೇ.7.83 ಇತ್ತು. ಅದಕ್ಕೆ ಪ್ರತಿಯಾಗಿ 1990–91 ರಿಂದ 2011–12ರವರೆಗಿನ 21 ವರ್ಷಗಳ ಉದಾರೀಕರಣದ ಅವಧಿಯಲ್ಲಿ (ಅಂದರೆ, ಈಗಿನ ಸ್ಥಗಿತತೆಯ ಆರಂಭಕ್ಕಿಂತ ಮೊದಲಿನ ಅವಧಿ) ಬೆಳವಣಿಗೆಯ ದರ ಶೇ.6.28ರಷ್ಟಿತ್ತು. ಹಾಗಾಗಿ, ಉದಾರೀಕರಣದ ಅವಧಿಯಲ್ಲಿ ಬೆಳವಣಿಗೆ ನಿಧಾನ ಗತಿಯಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಉದಾರೀಕರಣದ ಮುಂಚಿನ ಅವಧಿ, ಅಂದರೆ, ಸರ್ಕಾರವು ಆರ್ಥಿಕ ನೀತಿಗಳನ್ನು ನಿಯಂತ್ರಿಸುತ್ತಿದ್ದ ಕಾಲದಲ್ಲಿ (1950–51ರಿಂದ 1990–91ರವರೆಗಿನ ನಲವತ್ತು ವರ್ಷಗಳು) ಕೈಗಾರಿಕಾ ಬೆಳವಣಿಗೆಯ ದರ ಶೇ.6.32ರಷ್ಟಿತ್ತು. ಅದಕ್ಕೆ ಪ್ರತಿಯಾಗಿ, ಉದಾರೀಕರಣದ ಅವಧಿಯಲ್ಲಿ ಬೆಳವಣಿಗೆಯ ದರ ಶೇ.6.28ರಷ್ಟು ಕಡಿಮೆ ಮಟ್ಟದಲ್ಲಿತ್ತು. ಅಂದರೆ, ಉದಾರೀಕರಣದ ಪರಿಣಾಮ ಏನೂ ಇಲ್ಲ ಎಂದಾಗುತ್ತದೆ.

ಮೂಗಿಗಿಂತ ದೊಡ್ಡದಾಗಿರುವ ಮೂಗುತಿ

ಉದಾರೀಕರಣದ ಅವಧಿಯಲ್ಲಿ, ಅದರ ಹಿಂದಿನ ವರ್ಷಗಳಿಗೆ ಹೋಲಿಸಿದರೆ, ಕೃಷಿ ಉತ್ಪಾದನೆಯ ದರವೂ ಇಳಿದಿದೆ. ಹಾಗೆಯೇ, ಹಿಂದಿದ್ದ ನಿಯಂತ್ರಣ ನೀತಿಯ ಅವಧಿಗೆ ಹೋಲಿಸಿದರೆ, ಎಲ್ಲಾ ಸರಕುಗಳ ಉತ್ಪಾದನೆಯ ಬೆಳವಣಿಗೆಯ ದರವೂ ಉದಾರೀಕರಣದ ಅವಧಿಯಲ್ಲಿ ಕಡಿಮೆಯಾಗಿರುವುದು ಸ್ಪಷ್ಟವಾಗಿದೆ. ಹಾಗಾಗಿ, ಉದಾರೀಕರಣ ನೀತಿಗಳನ್ನು ಅನುಸರಿಸು ತ್ತಿರುವುರಿಂದಾಗಿಯೇ ಜಿಡಿಪಿ ಬಹಳ ವೇಗವಾಗಿ ಬೆಳೆಯುತ್ತಿದೆ ಎಂಬ ಕಹಳೆ ಸದ್ದಿನ ಕೀರ್ತಿ ಏಕಮಾತ್ರವಾಗಿ ಸೇವಾ ವಲಯಕ್ಕೆ ಸಲ್ಲುತ್ತದೆ. ಅಂದರೆ ಬೆಳವಣಿಗೆಯಾಗುತ್ತಿರುವುದು ಸೇವಾ ವಲಯದಲ್ಲಿ ಮಾತ್ರ.

ಆದರೆ, ಸೇವಾ ವಲಯವನ್ನು ಜಿಡಿಪಿಯ ಗಣನೆಗೆ ತೆಗೆದುಕೊಳ್ಳುವ ಬಗ್ಗೆಯೇ ವಾದ–ವಿವಾದಗಳಿವೆ. ಏಕೆಂದರೆ, ಸೇವಾ ವ್ಯವಹಾರಗಳ ಪರಿಕಲ್ಪನೆ ಮತ್ತು ಅವುಗಳನ್ನು ಲೆಕ್ಕ ಹಾಕುವ ಬಗ್ಗೆಯೇ ಸಾಕಷ್ಟು ಸಮಸ್ಯೆಗಳಿವೆ. ಒಂದು ಉದಾಹರಣೆಯ ಮೂಲಕ ಈ ಸಮಸ್ಯೆಯನ್ನು ವಿವರಿಸಬಹುದು.

ಒಂದು ತೀರ ಸರಳ ಆರ್ಥವ್ಯವಸ್ಥೆಯಲ್ಲಿ ಕೇವಲ 100 ಯೂನಿಟ್ ಜೋಳ ಬಿಟ್ಟು ಬೇರೆ ಏನನ್ನೂ ಬೆಳೆಯುವುದಿಲ್ಲ ಎಂದಿಟ್ಟುಕೊಳ್ಳೋಣ. ಅದರಲ್ಲಿ ಜಮೀನ್ದಾರನ ಪಾಲು 50 ಯೂನಿಟ್. ತನಗೆ ದೊರೆತ ಆ 50 ಯೂನಿಟ್ ಪಾಲಿನಲ್ಲಿ ಆ ಜಮೀನ್ದಾರ ಏನನ್ನೂ ತನ್ನ ಸ್ವಂತ ಬಳಕೆಗೆ ಉಪಯೋಗಿಸಿಕೊಳ್ಳುವುದಿಲ್ಲ. ಬದಲಿಗೆ, ರೈತರನ್ನು ಬೆದರಿಸುವ ಸಲುವಾಗಿ 50 ಗೂಂಡಾಗಳನ್ನು ಸಾಕಲು ಆ 50 ಯೂನಿಟ್‌ಗಳನ್ನು ಬಳಸುತ್ತಾನೆ. ಈಗ ಆ ಆರ್ಥವ್ಯವಸ್ಥೆಯ ಜಿಡಿಪಿಯ ಲೆಕ್ಕ ಹಾಕಲಾಗಿ ಅದು 150 ಆಗುತ್ತದೆ– ಜೋಳದ ಉತ್ಪಾದನೆಯಿಂದ 100 ಮತ್ತು ಸೇವಾಕ್ಷೇತ್ರದ ಉತ್ಪತ್ತಿ 50 (ಒಬ್ಬೊಬ್ಬರಿಗೆ ಒಂದು ಯೂನಿಟ್‌ನಂತೆ 50 ಗೂಂಡಾಗಳ ಸಂಬಳ).

ಈ ಉದಾಹರಣೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ನೋಡೋಣ. ಈಗ, ರೈತರು ಬೆಳೆದ 100 ಯೂನಿಟ್ ಜೋಳದಲ್ಲಿ, ಜಮೀನ್ದಾರ 70 ಯೂನಿಟ್ ಪಾಲು ಪಡೆಯುತ್ತಾನೆ ಮತ್ತು ಗೂಂಡಾಗಳಿಗೆ ತಲಾ 1.4 ಯೂನಿಟ್ ಸಂಬಳ (1.4*50=70) ಕೊಡುತ್ತಾನೆ. ಈಗ ಜಿಡಿಪಿಯು 150ರ ಬದಲಿಗೆ 170 ಆಗುತ್ತದೆ! ಈ ವಿದ್ಯಮಾನವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮಿಗುತಾಯದ ಮೇಲೆ ಬದುಕುತ್ತಿರುವವನೂ ಉತ್ಪಾದನೆಯಲ್ಲಿ ತೊಡಗಿರುವನೆಂಬ ಊಹೆಯ ಜೊತೆಗೆ ನೈಜ ಉತ್ಪಾದಕನ(ರೈತ) ಮೇಲೆ ಹೆಚ್ಚಿದ ಶೋಷಣೆಯೂ ಜಿಡಿಪಿಯ ಹೆಚ್ಚಳದಲ್ಲಿ ಸೇರಿಕೊಳ್ಳುತ್ತದೆ.

ಸೇವಾ ವಲಯದ ಉತ್ಪತ್ತಿಯ ಪರಿಕಲ್ಪನೆಯು ಇಂತಹ ಅಸಂಬದ್ಧತೆಗಳಿಂದ ಕೂಡಿದೆ ಎಂಬ ಕಾರಣದಿಂದಾಗಿ ಹಿಂದಿನ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳು ಅದನ್ನು ತಮ್ಮ ರಾಷ್ಟ್ರೀಯ ವರಮಾನದ ಅಂದಾಜಿನಲ್ಲಿ ಸೇರಿಸುತ್ತಿರಲಿಲ್ಲ. ಜಿಡಿಪಿ ಲೆಕ್ಕ ಹಾಕಲು ಸರಕುಗಳ ಉತ್ಪಾದನೆಯನ್ನು ಮಾತ್ತ ಪರಿಗಣಿಸುತ್ತಿದ್ದರು. ಈ ರೀತಿಯ ಅಳತೆಯಲ್ಲಿ, ಭಾರತದಲ್ಲಿ, ನಿಯಂತ್ರಣ ನೀತಿಯ ಅವಧಿಗೆ ಹೋಲಿಸಿದರೆ, ಉದಾರೀಕರಣದ ಅವಧಿಯಲ್ಲಿ ಜಿಡಿಪಿಯ ಬೆಳವಣಿಗೆಯ ದರ ಕಡಿಮೆಯಾಗುತ್ತದೆ.

ಹಿಂದಿನ ಮತ್ತು ಇಂದಿನ ಸ್ಥಗಿತತೆಯ ವ್ಯತ್ಯಾಸ

ಈ ವರೆಗಿನ ಜಿಡಿಪಿಯ ಬೆಳವಣಿಗೆಯ ದರ ಹೆಚ್ಚಾಗಿತ್ತೊ ಕಡಿಮೆಯಾಗಿತ್ತೊ ಎನ್ನುವುದಕ್ಕಿಂತ ಮುಖ್ಯವಾದ ವಿಷಯ ಈಗ ಅದು ಸಂಪೂರ್ಣವಾಗಿ ಸ್ಥಗಿತವಾಗಿದೆ ಎಂಬುದು. ಭಾರತದಲ್ಲಿ ಕೈಗಾರಿಕಾ ಸ್ಥಗಿತತೆ ಹೊಸದಲ್ಲ. ಹಿಂದೆಯೂ ಉಂಟಾಗಿದೆ. ಆದರೆ ಹಿಂದಿನ ಸ್ಥಗಿತತೆಗೂ ಮತ್ತು ಪ್ರಸಕ್ತ ಸ್ಥಗಿತತೆಗೂ ಒಂದು ವ್ಯತ್ಯಾಸವಿದೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಇಳಿಕೆಯಾದ ಕಾರಣದಿಂದ ಅರುವತ್ತರ ದಶಕದಲ್ಲಿ ಕೈಗಾರಿಕಾ ಸ್ಥಗಿತತೆ ಉಂಟಾಗಿತ್ತು. ಆಗ ಬಿಹಾರದಲ್ಲಿ ಬರಗಾಲವೂ ಉಂಟಾಗಿತ್ತು.

ನಿಯಂತ್ರಣ ನೀತಿಯ ಅವಧಿಯಲ್ಲಿ, ಕೈಗಾರಿಕಾ ಉತ್ಪಾದನೆಯ ಏರಿಳಿತಗಳಿಗೂ ಮತ್ತು ಕೃಷಿ ಉತ್ಪಾದನೆಯ ಏರಿಳಿತಗಳಿಗೂ ಸಂಬಂಧವಿತ್ತು. ಫಸಲು ಕಡಿಮೆಯಾದ ವರ್ಷದಲ್ಲಿ ರೈತರ ವರಮಾನ ಇಳಿಯುತ್ತಿತ್ತು. ಆದರೆ, ಆಹಾರ ಧಾನ್ಯಗಳ ಬೆಲೆ ಏರಿಕೆಯಾಗುತ್ತಿತ್ತು. ಧಾನ್ಯಗಳನ್ನು ಕೊಳ್ಳುವವರು ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು. ಹಾಗಾಗಿ, ಉತ್ಪಾದಕರು ಮತ್ತು ಬಳಕೆದಾರರು ಇಬ್ಬರ ಬಳಿಯೂ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿತ್ತು. ಕಾರ್ಮಿಕರು ಮತ್ತು ವೇತನದಾರರಿಗೆ ಕೈಗಾರಿಕಾ ಉತ್ಪನ್ನಗಳನ್ನು ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿತ್ತು. ಅದರ ಜೊತೆಯಲ್ಲಿ, ಬೆಲೆ ಏರಿಕೆಯಿಂದ ಉಂಟಾಗುವ ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರ ತನ್ನ ಖರ್ಚುಗಳನ್ನು ಕಡಿಮೆಮಾಡುತ್ತಿತ್ತು. ಹಾಗಾಗಿ, ಕೈಗಾರಿಕಾ ಉತ್ಪತ್ತಿಯ ಮೇಲಿನ ಬೇಡಿಕೆಗಳಿಗೂ ಮತ್ತು ಕೃಷಿ ವಲಯದ ಆಗು ಹೋಗುಗಳಿಗೂ ನೇರ ಸಂಬಂಧವಿತ್ತು.

ಆದರೆ, ಈಗ ಆಗುತ್ತಿರುವುದೇ ಬೇರೆ. ಪ್ರಸಕ್ತ ಸ್ಥಗಿತತೆ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾದ ಕಾರಣದಿಂದ ಉಂಟಾಗಿಲ್ಲ ಎಂಬ ಅಂಶ ಗಮನಾರ್ಹವಾಗಿದೆ. 2011–12 ಮತ್ತು 2013–14ರ ವರ್ಷಗಳಲ್ಲಿ ಕೃಷಿ ಉತ್ಪಾದನೆ ಉತ್ತಮವಾಗಿತ್ತು. ಆದ್ದರಿಂದ, ನಂತರದ ಎರಡು ವರ್ಷಗಳಲ್ಲಿ ಉನ್ನತ ಮಟ್ಟದ ಕೈಗಾರಿಕಾ ಉತ್ಪತ್ತಿಯಾಗಬೇಕಿತ್ತು. ಅದರ ಬದಲಿಗೆ ನಗಣ್ಯ ಎನ್ನುವಷ್ಟು ಕಡಿಮೆ ಮಟ್ಟದ ಕೈಗಾರಿಕಾ ಉತ್ಪಾದನೆಯಾಗಿದೆ. ಅಂದರೆ, ಹಿಂದೆ ಕೈಗಾರಿಕಾ ಉತ್ಪತ್ತಿಯನ್ನು ಜನರು ಕೊಳ್ಳುವ ಶಕ್ತಿಯು ಕೃಷಿ ವಲಯದ ಉತ್ಪತ್ತಿಯ ಮೇಲೆ ಅವಲಂಬಿಸಿತ್ತು. ಈಗ ಅಂತಹ ಅವಲಂಬನೆ ಕಡಿಮೆಯಾಗಿದೆ. ಅದನ್ನೇ ಬೇರೆ ಬೇರೆ ಮಾತುಗಳಲ್ಲಿ ಹೇಳುವುದಾದರೆ, ಕೃಷಿ ಉತ್ಪತ್ತಿಯ ಮೇಲೆ ಅವಲಂಬಿಸಿದ್ದ ಆಂತರಿಕ ಮಾರುಕಟ್ಟೆಯು ಈಗ ಮೇಲ್ವರ್ಗಗಳ ಮಂದಿಯ ಮೇಲೆ ಮತ್ತು ರಫ್ತಿನ ಮೇಲೆ ನಿಂತಿದೆ. ಜಾಗತಿಕ ಬಂಡವಾಳಶಾಹಿಯು ಬಿಕ್ಕಟ್ಟಿಗೆ ಒಳಗಾಗಿರುವುದರಿಂದ ಈ ಮಾರುಕಟ್ಟೆಗೆ ಈಗ ಹೊಡೆತ ಬಿದ್ದಿದೆ. ನಿಯಂತ್ರಣ ಕಾಲದಲ್ಲಿದ್ದ ಪರಿಸ್ಥಿತಿಯಂತಲ್ಲದೆ ಭಾರತದ ಅರ್ಥವ್ಯವಸ್ಥೆಯು ಈಗ ವಿಶ್ವ ಬಂಡವಾಳಶಾಹಿ ಅರ್ಥವ್ಯವಸ್ಥೆಯೊಂದಿಗೆ ಏಕೀಕರಣಗೊಂಡಿದೆ. ಆದ್ದರಿಂದ, ಭಾರತದ ಕೈಗಾರಿಕಾ ಸ್ಥಗಿತತೆಯ ಬಗೆಗಿನ ವಿವರಣೆಯು ವಿಶ್ವ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಸ್ಥಿತಿ–ಗತಿಗಳಿಗೆ ಸಂಬಂಧಿಸುತ್ತದೆ.

ಹದಗೆಡುತ್ತಿರುವ ಕೈಗಾರಿಕಾ ವಲಯ

ಮುಖ್ಯ ಕೈಗಾರಿಕೆಗಳ ವಲಯದ (core sector) ಬೆಳವಣಿಗೆ ದರ ಶೇ.6.4 ಮಟ್ಟ ತಲುಪಿರುವುದು ಕೈಗಾರಿಕೆಗಳು ಚೇತರಿಕೆಯ ಹಾದಿಯಲ್ಲಿರುವ ಸೂಚನೆಯಾಗಿದೆ ಎಂದು ಕೆಲವು ದಿನಗಳ ಹಿಂದೆ ಮಾಧ್ಯಮಗಳು ಜೋರಾಗಿ ವರದಿಮಾಡಿದ್ದವು. ಆದರೆ, ನಂತರ ಹೊರಬಂದ ಮಾರ್ಚ್ 2016ರ ಒಟ್ಟಾರೆ ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ಶೇ. 0.05 ಬೆಳವಣಿಗೆ ತೋರಿಸುತ್ತದೆ. ಇದು ಚೇತರಿಕೆಯ ಬದಲು, ಇತರ ವಲಯಗಳು ಕುಗ್ಗುತ್ತಿವೆ ಎಂಬುದನ್ನು ಸೂಚಿಸುತ್ತದೆ. ಮುಖ್ಯ ವಲಯದ ಕೈಗಾರಿಕೆಗಳ (core sector) ಬಹುಪಾಲು ಒಡೆತನ ಸರ್ಕಾರದ ಬಳಿ ಇದೆ ಮತ್ತು ಇತರ ವಲಯವು (non-core sector) ಖಾಸಗಿಯವರ ಬಳಿ ಇದೆ. ಹಾಗಾಗಿ, ಈ ಕುಗ್ಗುವಿಕೆ ಖಾಸಗಿ ಕ್ಷೇತ್ರವನ್ನು ಬಹಳವಾಗಿ ತಟ್ಟಿದೆ. ಆದ್ದರಿಂದ ಇದು ಖಾಸಗಿಯವರು ತಮ್ಮ ಹೂಡಿಕೆಯನ್ನು ತಡೆ ಹಿಡಿಯುವಂತೆ ಮಾಡುತ್ತದೆ. ಪರಿಣಾಮವಾಗಿ, ಮೂಲ ಸರಕುಗಳ (ಸರಕುಗಳನ್ನು ತಯಾರಿಸುವ ಯಂತ್ರಗಳು–capital goods)ಉತ್ಪಾದನೆ ತಗ್ಗುತ್ತದೆ.ಇದು, ಬರಲಿರುವ ದಿನಗಳಲ್ಲಿ ಕೈಗಾರಿಕಾ ಕ್ಷೇತ್ರ ಹದಗೆಡುವುದರ ಸೂಚನೆ.

ಈಗಾಗಲೇ ಮೂಲ ಸರಕುಗಳ (capital goods) ಉತ್ಪಾದನೆ ಶೇ.9.5ರಷ್ಟು ತಗ್ಗಿದೆ ಎಂದು ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಮಾರ್ಚ್ 2016) ತಿಳಿಸುತ್ತದೆ. ಇದರ ಪರಿಣಾಮವಾಗಿ, ಮಾರ್ಚ್ ತಿಂಗಳಲ್ಲಿ ಒಟ್ಟು ತಯಾರಿಕೆಗಳು ಶೇ.1.2ರಷ್ಟು ಕುಸಿದಿವೆ. ಎಪ್ರಿಲ್ 2016ರಲ್ಲಿ ಮೂಲ ಸರಕುಗಳ ಉತ್ಪಾದನೆ ಶೇ.15.4ರಷ್ಟು ಕುಗ್ಗಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ.


ಬಂಡವಾಳಶಾಹಿ ಜಗತ್ತಿನ ಎಲ್ಲೆಡೆಯಲ್ಲೂ ನಡೆಯುತ್ತಿರುವ ಈ ವಿದ್ಯಮಾನವು ಅದರ ಗುರುತಿನ ಚಿನ್ಹೆಯಾಗಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಒಂದು ಕೈಗಾರಿಕಾ ಮಂದಗತಿಯ ಸಮಯದಲ್ಲಿ, ಬಳಕೆಯ ಸರಕುಗಳ (consumer goods) ಉತ್ಪತ್ತಿಯು ಮೂಲ ಸರಕುಗಳ ಉತ್ಪತ್ತಿಗಿಂತಲೂ ಕಡಿಮೆಯಾಗುತ್ತದೆ.

ಈ ವಿದ್ಯಮಾನವನ್ನು ಹೀಗೆ ವಿವರಿಸಬಹುದು: ಬಳಕೆಯ ಸರಕುಗಳ ಉತ್ಪಾದನಾ ವಲಯದ ಬೆಳವಣಿಗೆಯ ದರ ಸೊನ್ನೆ ಎಂದಿಟ್ಟುಕೊಳ್ಳೋಣ. ಅಂತಹ ಪರಿಸ್ಥಿತಿಯಲ್ಲಿ, ಬಂಡವಾಳಗಾರರು ಆ ವಲಯದ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾವುದೇ ಹೂಡಿಕೆ ಮಾಡುವುದಿಲ್ಲ. ಆದ್ದರಿಂದ, ಅರ್ಥವ್ಯವಸ್ಥೆಯಲ್ಲಿ ಆಗುವ ಹೂಡಿಕೆ ಸೊನ್ನೆ. ಹಾಗಾಗಿ, ಮೂಲ ಸರಕುಗಳ ಉತ್ಪತ್ತಿಯೂ ಸೊನ್ನೆ.

ಬಳಕೆಯ ಸರಕುಗಳ ವಲಯದಲ್ಲಿ ಬೆಳವಣಿಗೆಯ ದರ ಸೊನ್ನೆಗೆ ಇಳಿದಾಗ ಅದು ಮೂಲ ಸರಕುಗಳ ಸೊನ್ನೆ ಉತ್ಪತ್ತಿಗೆ ಕಾರಣವಾಗುತ್ತದೆ ಎಂಬುದನ್ನು ಈ ಸರಳ ಉದಾಹರಣೆ ತಿಳಿಸುತ್ತದೆ. ಒಂದು ಬಿಕ್ಕಟ್ಟು ಉಂಟಾದಾಗ, ಮೂಲ ಸರಕುಗಳ ಉತ್ಪಾದನೆಯ ಮಟ್ಟವು ಬಳಕೆಯ ಸರಕುಗಳ ಉತ್ಪಾದನೆಯ ಮಟ್ಟಕ್ಕಿಂತಲೂ ಬಹಳವಾಗಿ ಕುಗ್ಗುತ್ತದೆ. ಅದೇ ರೀತಿಯಲ್ಲಿ, ಮೂಲ ಸರಕುಗಳ ಉತ್ಪಾದನಾ ದರ ಹೆಚ್ಚುತ್ತಾ ಹೋದಂತೆ ಮತ್ತು ಆ ವಲಯದ ಉತ್ಪಾದನಾ ಸಾಮರ್ಥ್ಯದ ಬಳಕೆ ಹೆಚ್ಚುತ್ತಾ ಹೋದಂತೆ ನೈಜ ಚೇತರಿಕೆಯೂ ಆಗುತ್ತದೆ. ಆಗ ಬಂಡವಾಳಗಾರರು ಹೂಡಿಕೆಗೆ ಮುಂದಾಗುತ್ತಾರೆ. ಇಂತಹ ಒಂದು ಪ್ರಕ್ರಿಯೆ ಎಲ್ಲಿಯೂ ಜರುಗುತ್ತಿಲ್ಲ. ಹಾಗಾಗಿ, ಇದು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಮುಂದುವರಿಯುತ್ತಿದೆ ಎಂಬುದನ್ನು ಒತ್ತಿ ಹೇಳುತ್ತದೆ.

ವಿಶ್ವದ ಎಲ್ಲ ದೇಶದ ಎಲ್ಲ ಬಂಡವಾಳಗಾರರು ಯಾವುದೇ ಹೂಡಿಕೆ ಮಾಡಲು ಹಿಂಜರಿಯುತ್ತಿರುವ ಸಮಯದಲ್ಲಿ ಮೋದಿ ಸರ್ಕಾರದ “ಮೇಕ್ ಇನ್ ಇಂಡಿಯಾ” (ಭಾರತದಲ್ಲಿ ಹೂಡಿಕೆ ಮಾಡಿ) ಕರೆಗೆ ಯಾರೂ ಸೊಪ್ಪು ಹಾಕುತ್ತಿಲ್ಲ. ಈ ಕಾರ್ಯಕ್ರಮವು ಭಾರತದ ಹದಗೆಟ್ಟಿರುವ ಅರ್ಥವ್ಯವಸ್ಥೆಯನ್ನು ಮೊದಲಿನ ಆರೋಗ್ಯಕ್ಕೆ ತರುವ ಒಂದು ಮೂಲೆಗಲ್ಲಾಗುತ್ತದೆ ಎಂದು ಭಾವಿಸಿರುವುದು ಮೋದಿ ಸರ್ಕಾರದ ಬುದ್ದಿಗೇಡಿತನವನ್ನು ಸೂಚಿಸುತ್ತದೆ. “ಮೇಕ್ ಇನ್ ಇಂಡಿಯಾ” ಘೋಷಣೆ ಮಾಡಿದ ಬಳಿಕ ಬಂಡವಾಳಗಾರರಿಗೆ ಅನೇಕ ರಿಯಾಯ್ತಿಗಳನ್ನು ನೀಡಿದ ನಂತರವೂ ಕೈಗಾರಿಕಾ ಸ್ಥಗಿತತೆ ಉಂಟಾಗಿರುವುದು ಮತ್ತು ಇಡೀ ಅರ್ಥವ್ಯವಸ್ಥೆ ಮುಗ್ಗರಿಸುತ್ತಿರುವುದು ಸರ್ಕಾರದ ನೀತಿಗಳ ವಿಚಾರಹೀನತೆಗೆ ಸಾಕ್ಷಿಯಾಗಿದೆ.

(ಇದು ‘ಪೀಪಲ್ಸ್ ಡೆಮಾಕ್ರಸಿ’ ಪತ್ರಿಕೆಯಲ್ಲಿ ಪ್ರಕಟವಾಗಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ India’s Industrial Stagnation ಲೇಖನದ ಭಾವಾನುವಾದ)



ಚಿತ್ರಕೃಪೆ:ಲೈವ್‌ಮಿಂಟ್

ಕೇರಳದ ಎಲ್.ಡಿ.ಎಫ್. ಜಯಭೇರಿ

ಕೇರಳದಲ್ಲಿ ಎಲ್.ಡಿ.ಎಫ್. ಜಯಭೇರಿ ಎಷ್ಟು ವ್ಯಾಪಕ ಮತ್ತು ಆಳವಾಗಿತ್ತು ಎಂದು ಅರಿಯಬೇಕಾದರೆ ಈ ಕೆಳಗಿವನ್ನು ಗಮನಿಸಬೇಕು:

- ಕೊಲ್ಲಂ ಜಿಲ್ಲೆಯಲ್ಲಿ ಎಲ್.ಡಿ.ಎಫ್. ಎಲ್ಲಾ 11 ಸೀಟುಗಳನ್ನು ಗೆದ್ದಿದೆ
- 14 ಜಿಲ್ಲೆಗಳಲ್ಲಿ 11ರಲ್ಲಿ ಎಲ್.ಡಿ.ಎಫ್. ಬಹುಪಾಲು ಸೀಟುಗಳನ್ನು ಗಳಿಸಿದೆ. 6 ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಸೀಟುಗಳನ್ನು ಬಾಚಿಕೊಂಡಿದೆ. (ಜಿಲ್ಲೆಗಳಲ್ಲಿ ರಂಗಗಳ ಸ್ಥಾನ ಕೋಷ್ಟಕದಲ್ಲಿ ನೋಡಬಹುದು)
- ಕಾಂಗ್ರೆಸ್‌ನ ಎರ್ನಾಕುಲಂ ಮತ್ತು ಮುಸ್ಲಿಂ ಲೀಗಿನ ಮಲಪ್ಪುರಂ ಗಳ ಭದ್ರಕೋಟೆಯನ್ನು ಎಲ್.ಡಿ.ಎಫ್. ಬೇಧಿಸಿದೆ
- 13 ಎಲ್.ಡಿ.ಎಫ್. ಅಭ್ಯರ್ಥಿಗಳು 30 ಸಾವಿರಕ್ಕೂ ಹೆಚ್ಚು ಅಂತರದಿಂದ ಗೆದ್ದಿದ್ದಾರೆ
- ರಾಜ್ಯದಲ್ಲಿ ಗೆದ್ದಿರುವ ಎಲ್ಲಾ 8 ಮಹಿಳಾ ಅಭ್ಯರ್ಥಿಗಳು ಎಲ್.ಡಿ.ಎಫ್.(5 ಸಿಪಿಐ(ಎಂ), 3 ಸಿಪಿಐ)ನವರು
- ಯು.ಡಿ.ಎಫ್. ನ ಭ್ರಷ್ಟಾಚಾರ ಆಪಾದನೆ ಹೊತ್ತ ಮಂತ್ರಿಗಳು (ಕೆ. ಬಾಬು, ಬೇಬಿ ಜಾನ್, ಜಯಲಕ್ಷ್ಮಿ, ಮೋಹನನ್) ಪರಾಭವಗೊಂಡಿದ್ದಾರೆ. ಯು.ಡಿ.ಎಫ್.ಗೆ ಸೇರಿದ್ದ ಸ್ಪೀಕರ್, ಉಪ ಸ್ಪೀಕರ್ ಮತ್ತು ಮುಖ್ಯ ಸಚೇತಕರೂ ಪರಾಭವಗೊಂಡಿದ್ದಾರೆ. ಮಾಜಿ ಮುಖ್ಯ ಸಚೇತಕ ಪಿ ಸಿ ಜಾರ್ಜ್ ಪಕ್ಷೇತರರಾಗಿ ಸ್ಪರ್ಧಿಸಿ ಎರಡೂ ರಂಗಗಳನ್ನು ಸೋಲಿಸಿದ್ದಾರೆ
- ಬಿಜೆಪಿ ಪ್ರಧಾನಿ ಮತ್ತಿತರ ಹೈಪರ್ ಪ್ರಚಾರ ಮತ್ತು ಎಸ್.ಎನ್.ಡಿ.ಪಿ. ಜತೆ ಮೈತ್ರಿಯ ನಂತರವೂ ನೇಮಮ್ ನಲ್ಲಿ ಕೇವಲ 1 ಸೀಟು ಗಳಿಸಲು ಸಾಧ್ಯವಾಯಿತು. ಅದೂ ಕಾಂಗ್ರೆಸ್ ಜತೆ ಮತ–ಟ್ರಾನ್ಸ್ ಫರ್ ನ ಒಳ ಒಪ್ಪಂದದ ನಂತರವೇ. (ವಿವರಗಳಿಗೆ ಬಾಕ್ಸ್ ನೋಡಿ). ಕೇವಲ 7 ಸ್ಥಾನಗಳಲ್ಲಿ 2ನೇ ಸ್ಥಾನ ಪಡೆಯಲು ಸಾಧ್ಯವಾಯಿತು.

ಜಿಲ್ಲೆಗಳಲ್ಲಿ ರಂಗಗಳ ಸ್ಥಾನ (ಪ–ಪಕ್ಷೇತರ)

ಜಿಲ್ಲೆ	ಎಲ್.ಡಿ.ಎಫ್	ಯು.ಡಿ.ಎಫ್.	ಇತರ.
ಕಾಸರಗೋಡು	3	2	0
ಕಣ್ಣೂರು	8	3	0
ವಾಯ್ನಾಡು	2	1	0
ಕಲ್ಲಿಕೋಟೆ	11	2	0
ಮಲ್ಲಪ್ಪುರಂ	4	12	0
ಪಲಕ್ಕಾಡ್	9	3	0
ತ್ರಿಸೂರ್	12	1	0
ಎರ್ನಾಕುಲಂ	5	9	0
ಇಡುಕ್ಕಿ	3	2	0
ಕೊಟ್ಟಾಯಂ	2	6	1(ಪ)
ಅಲಪ್ಪುಳ	8	1	0
ಪತಾನಂತಿಟ್ಟ	4	1	0
ಕೊಲ್ಲಂ	11	0	0
ತಿರುವನಂತಪುರಂ	9	4	1(ಬಿಜೆಪಿ)
ಒಟ್ಟು	**91**	**47**	**2**

ನೇಮಂ ಅಪವಾದ ಹೇಗೆ?

ನೇಮಂನಲ್ಲಿ ಬಿಜೆಪಿ ಸ್ವಂತ ಬಲದಿಂದ ಗೆದ್ದಿಲ್ಲ. ಬದಲಾಗಿ ಅದರ ಗೆಲುವು ಒಂದು ಅಪವಾದ. ಇದು ಕಳೆದ ಎರಡು ಚುನಾವಣೆಗಳು ಮತ್ತು ಈ ಚುನಾವಣೆಗಳಲ್ಲಿ ಮೂರು ರಂಗಗಳ ಮತಗಳಿಕೆಯನ್ನು (ಜತೆಗಿರುವ ಕೋಷ್ಟಕದಲ್ಲಿದೆ) ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ. ನೇಮಂ ಮತ್ತು ತಿರುವನಂತಪುರ ಪೂರ್ವದ ಭಾಗಗಳು ಸೇರಿ ಈಗಿನ ನೇಮಂ 2011ರಲ್ಲಿ ಪುನರ್ರಚಿತವಾಯಿತು.

ನೇಮಂನಲ್ಲಿ ಕಾಂಗ್ರೆಸ್ 2001 ಮತ್ತು 2006ರಲ್ಲಿ 57–61 ಸಾವಿರ ಮತ ಗಳಿಸಿ ಗೆದ್ದಿತ್ತು. ತಿರುವನಂತಪುರ ಪೂರ್ವದಲ್ಲೂ ಕಾಂಗ್ರೆಸ್ 2001 ವರೆಗೆ 40 ಸಾವಿರ ಮತ ಗಳಿಸಿ ಗೆಲ್ಲುತ್ತಿತ್ತು. 2006ರಲ್ಲಿ ಸಿಪಿಐ(ಎಂ) 35 ಸಾವಿರ ಗಳಿಸಿ ಗೆದ್ದಿತ್ತು. 2011ರಲ್ಲಿಯೇ ಪುನರ್ರಚನೆಯಾದ ನೇಮಂನಲ್ಲಿ ಓ.ರಾಜಗೋಪಾಲನ್ ಸ್ಪರ್ಧಿಸಿ ಬಿಜೆಪಿ ಪಡೆಯ ಬಹುದಾದ ಗರಿಷ್ಟ ಮತ (ಸುಮಾರು 20 ಸಾವಿರ) ಪಡೆದಿತ್ತು.

ಆದ್ದರಿಂದ 2016ರಲ್ಲಿ ಬಿಜೆಪಿಯನ್ನು ಗೆಲ್ಲಿಸಿದ ಸುಮಾರು 40 ಸಾವಿರದಲ್ಲಿ ಬಹುಪಾಲು ಕಾಂಗ್ರೆಸ್ ಮತಗಳ 'ಮತಾಂತರ'ದಿಂದ ಆಗಿರಬೇಕು ಅಥವಾ ಕಾಂಗ್ರೆಸ್ ಬೆಂಬಲಿಗರ ಸೆಕ್ಯುಲರ್ ಮನೋಧರ್ಮ ಅಷ್ಟು ತೆಳುವಾಗಿರಬೇಕು. ಆದರೆ ಮೊದಲನೇಯದ್ದರ ಸಾಧ್ಯತೆಯೇ ಹೆಚ್ಚು. ಆದರೆ ಈ 'ಮತಾಂತರ'ದ ಆಟ ಯಾವಾಗಲೂ ನಡಯಲ್ಲ. ನೇಮಂನಲ್ಲಿ ಬಿಜೆಪಿಯ ವಿಜಯ ಒಂದು ಅಪವಾದ. ಅದು ಒಂದು ಅಪವಾದವಾಗಿಯೇ ಉಳಿಯುತ್ತದೆ.

ಪಕ್ಷ	2006	2011	2016
ಕಾಂಗ್ರೆಸ್	60,884	50,076	13,860
ಸಿಪಿಐ(ಎಂ)	50,135	43,661	59,142
ಬಿಜೆಪಿ	6,705	20,248	67,813

ಮಾಧ್ಯಮ ದೊರೆಯನ್ನು ಸೋಲಿಸಿದ ಹಾಲು ಮಾರುವವ



ಈತ ಹಾಲು ಮಾರುವವ. ಬೆಳಗ್ಗೆನೇ ಬರಿಗಾಲಲ್ಲಿ ಹಾಲು ಮಾರುತ್ತಾ ಕಲಪೆಟ್ಟ (ವಾಯ್ನಾಡು ಜಿಲ್ಲೆಯ ಸಣ್ಣಪಟ್ಟಣ) ಇಡೀ ಸುತ್ತುತ್ತಾನೆ. ತನ್ನ ಸಣ್ಣ ತುಂಡು ಭೂಮಿಯಲ್ಲಿ ಕೃಷಿಯನ್ನು ಮಾಡುತ್ತಾನೆ. ಆದರೆ ತನ್ನ ಉಳಿದ ಸಮಯವೆಲ್ಲ ಜನರಿಗೇ ಮಿಸಲು. ಈತ ಜನರಿಗೆ ಚಿರಪರಿಚಿತ. ಜನರ ಸಮಸ್ಯೆಗಳಿಗೆ ಪರಿಹಾರ ಹುಡುಕುವುದೇ ಈತನ ಹವ್ಯಾಸ. ಬಿ.ಎ. ಪದವೀಧರನಾದ ಈತ ಸಿಪಿಐ(ಎಂ) ವಾಯ್ನಾಡು ಜಿಲ್ಲಾ ಕಾರ್ಯದರ್ಶಿ– ಕಳೆದ ಮೂರು ಅವಧಿಗಳಿಂದ. ಈತ ಸಿಪಿಐ(ಎಂ) ಅಭ್ಯರ್ಥಿ. ಈತನ ಹೆಸರು ಸಸೀಂದ್ರನ್.

ಈತನ ಕಾಂಗ್ರೆಸ್ ಪ್ರತಿಸ್ಪರ್ಧಿ ಶ್ರೇಯಂಕುಮಾರ್ ಮಾತೃಭೂಮಿ ಮಾಧ್ಯಮ ಗುಂಪಿನ ಒಡೆಯ. ಈ ಪ್ರದೇಶದಲ್ಲಿ ಈತನ ಒಡೆತನದ ಟೀ ಎಸ್ಟೇಟ್ ಇದೆ. ಕಳೆದ ಎರಡು ಬಾರಿ ವಿಧಾನಸಭೆಗೆ ಚುನಾಯಿತನಾಗಿದ್ದಾನೆ. 2011 ರಲ್ಲಿ 18 ಸಾವಿರ ಅಂತರದಿಂದ.

ಆದರೆ ಈ ಬಾರಿ? ಸಸೀಂದ್ರನ್ 13 ಸಾವಿರ ಅಂತರದಿಂದ ಗೆದ್ದಿದ್ದಾನೆ. ಮಾಧ್ಯಮ ದೊರೆ ಸೋತಿದ್ದಾನೆ.

ಬಿಜೆಪಿ ಅಲೆಯೂ ಇಲ್ಲ, ಕಾಂಗ್ರೆಸ್–ಎಡ ಪಕ್ಷಗಳ ಪತನವೂ ಅಲ್ಲ

ಐದು ರಾಜ್ಯಗಳಲ್ಲಿ ನಡೆದ ಚುನಾವಣೆಯ ಫಲಿತಾಂಶಗಳ ಬಗೆಗೆ ಮಾಧ್ಯಮಗಳಲ್ಲಿ ಕೇಳಿ ಬಂದ ಸಾಮಾನ್ಯ ಅಂಶವೆಂದರೆ – ಬಿಜೆಪಿ ದೇಶವ್ಯಾಪಿ ನೆಲೆಯಿರುವ ಪಕ್ಷವಾಗಿ ವಿಸ್ತರಿಸಿದೆ, ಕಾಂಗ್ರೆಸ್–ಎಡ ಪಕ್ಷಗಳು ನೆಲ ಕಚ್ಚಿವೆ ಇನ್ನೆಂದೂ ಚೇತರಿಸಕೊಳ್ಳಲಿಕ್ಕಿಲ್ಲ. ಇದು ಮಾಧ್ಯಮ–ಪ್ರಣೀತ ವಾಸ್ತವವೇ ?

ಚುನಾವಣೆಯ ಫಲಿತಾಂಶಗಳ ಅಂಕೆಸಂಖ್ಯೆಗಳು ಏನನ್ನು ಹೇಳುತ್ತವೆ? ಐದು ರಾಜ್ಯಗಳಲ್ಲಿ ಎರಡು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರ ಉಳಿಸಿಕೊಂಡಿವೆ. ಕಾಂಗ್ರೆಸ್ 3 ರಲ್ಲಿ 1 ರಾಜ್ಯದಲ್ಲಿ ಅಧಿಕಾರ ಉಳಿಸಿಕೊಂಡಿದೆ. ಎಡ ಪಕ್ಷಗಳು ಒಂದು ರಾಜ್ಯವನ್ನು ಗೆದ್ದುಕೊಂಡಿವೆ. ಬಿಜೆಪಿ 5 ರಾಜ್ಯಗಳಲ್ಲಿ 1 ರಲ್ಲಿ ಮಾತ್ರ ಗೆದ್ದು ಅಧಿಕಾರ ಪಡೆದಿದೆ. ಎರಡು ರಾಜ್ಯಗಳಲ್ಲಿ ಕೇವಲ 5 ಸೀಟು ಪಡೆದಿದೆ. ಎರಡು ರಾಜ್ಯಗಳಲ್ಲಿ ಯಾವುದೇ ಸೀಟು ಪಡೆದಿಲ್ಲ.

ರಾಷ್ಟ್ರೀಯ ಪಕ್ಷಗಳು – ಬಿಜೆಪಿ, ಕಾಂಗ್ರೆಸ್, ಎಡ ಪಕ್ಷಗಳು – ಸ್ಪರ್ಧಿಸಿದ ಸೀಟುಗಳು, ಗೆದ್ದ ಸೀಟುಗಳ ಪ್ರಮಾಣ ಕೆಳಗಿನ ಕೋಷ್ಟಕದಲ್ಲಿದೆ. ಈ ಅಂಕೆ ಸಂಖ್ಯೆಗಳ ಪ್ರಕಾರ ಬಿಜೆಪಿಯ ಗೆಲುವಿನ 'ಹಿಟ್ ರೇಟ್' ಅತ್ಯಂತ ಕಡಿಮೆ.

ಪಕ್ಷ	ಬಿಜೆಪಿ	ಎಡಪಕ್ಷಗಳು	ಕಾಂಗ್ರೆಸ್
ಸ್ಪರ್ಧಿಸಿದ ಸೀಟುಗಳು	696	452	363
ಗೆದ್ದ ಸೀಟುಗಳು	64	124	115
'ಹಿಟ್ ರೇಟ್'	9.1 %	27.4%	31.6%

ಮತಗಳಿಕೆಯಲ್ಲೂ ಅಷ್ಟೇ. 2014ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಒಂದು ರಾಜ್ಯ (ಕೇರಳ) ಬಿಟ್ಟರೆ ಎಲ್ಲಾ ರಾಜ್ಯಗಳಲ್ಲೂ ಬಿಜೆಪಿಯ ಶೇಕಡಾ ಮತಗಳಿಕೆ ಕಡಿಮೆ ಆಗಿದೆ. ಕಾಂಗ್ರೆಸ್ ಶೇಕಡಾ ಮತಗಳಿಕೆ ಒಂದು ರಾಜ್ಯ (ಕೇರಳ) ಬಿಟ್ಟರೆ ಇತರ ಎಲ್ಲಾ ರಾಜ್ಯಗಳಲ್ಲೂ ಹೆಚ್ಚಾಗಿದೆ.

ಕೇರಳದಲ್ಲಿ ಎಡ ಪಕ್ಷಗಳು 2011 ವಿಧಾನಸಭೆ ಮತ್ತು 2014 ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ ತಮ್ಮ ಮತಗಳಿಕೆ ಹೆಚ್ಚಿಸಿಕೊಂಡಿವೆ.

'ಬಿಜೆಪಿ ವಿಸ್ತರಿಸಿದೆ, ಕಾಂಗ್ರೆಸ್–ಎಡ ಪಕ್ಷಗಳು ನೆಲ ಕಚ್ಚಿವೆ' ಎಂಬ ಮಾಧ್ಯಮ–ಪ್ರಣೀತ ಹುಸಿ ವಾಸ್ತವಕ್ಕೆ ಈ ಅಂಕೆಸಂಖ್ಯೆಗಳು 'ಫಿಟ್' ಆಗುವುದಿಲ್ಲವಲ್ಲ?

ರಾಜ್ಯ	ಕಾಂಗ್ರೆಸ್ ಮತಗಳಿಕೆ ಶೇ.		ಬಿಜೆಪಿ ಮತಗಳಿಕೆ ಶೇ.	
	2014ಲೋ.ಸ.	2016 ವಿ.ಸ.	2014ಲೋ.ಸ.	2016 ವಿ.ಸ.
ಆಸ್ಸಾಮ್	29.5	31.0	36.6	29.5
ಕೇರಳ	31.1	23.7	10.3	10.7
ತಮಿಳುನಾಡು	4.3	6.6	5.5	2.8
ಪಶ್ಚಿಮ ಬಂಗಾಳ	9.6	12.3	16.8	10.2
ಪುದುಚೇರಿ	26.4	30.6		

ನಾಳಿನ ಕಾರ್ಯಕ್ರಮಗಳು

ಮೇ 30 : ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ ವಜ್ರಮಹೋತ್ಸವ, ಸಕಲೇಶಪುರ, ಹಾಸನ.

ಮೇ 29 : ದಲಿತ ಮಾನವ ಅಭಿವೃದ್ಧಿ : ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳು ಮತ್ತು ಸವಾಲುಗಳ ಬಗ್ಗೆ ವಿಚಾರ ಸಂಕಿರಣ, ಬೆ. 10.30ಕ್ಕೆ ಸೆನೆಟ್ ಹಾಲ್, ಬೆಂಗಳೂರು. ದಲಿತ ಹಕ್ಕುಗಳ ಸಮಿತಿ, ಕರ್ನಾಟಕ

ಮೇ 30 : ಸಿಐಟಿಯು ಸಂಸ್ಥಾಪನ ದಿನ, ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನುಗಳ ಕುರಿತು ಉಪನ್ಯಾಸ, ಜ್ಯೋತಿಬಸು ಭವನ, ಬಸವನಗುಡಿ, ಬೆಂಗಳೂರು. – ಬೆಂ. ದಕ್ಷಿಣ ವಲಯ ಸಮಿತಿ

ಜೂನ್ 06 – ಎಡಪಕ್ಷಗಳ ರಾಜ್ಯ ಮಟ್ಟದ ಪ್ರತಿಭಟನಾ ಸಭೆ, ಬೆಂಗಳೂರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜೂನ್ 5, 6, 7 : ದಕ್ಷಿಣ ಕನ್ನಡ ಜಿಲ್ಲೆ
ಜೂನ್ 11–12 : ಬೆಂಗಳೂರು ಉತ್ತರ ಜಿಲ್ಲೆ
ಜೂನ್ 24–25 : ಬೆಂಗಳೂರು ದಕ್ಷಿಣ ಜಿಲ್ಲೆ
ಜೂನ್ 26–27 : ಬಳ್ಳಾರಿ ಜಿಲ್ಲೆ
ಜುಲೈ 8–9 : ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17 : ಮೈಸೂರು ಜಿಲ್ಲೆ
ಜುಲೈ 21–22 : ದಾವಣಗೆರೆ ಜಿಲ್ಲೆ
ಜುಲೈ 29–30 : ಕಲಬುರಗಿ ಜಿಲ್ಲೆ
ಜುಲೈ 30 : ಯಾದಗಿರಿ ಜಿಲ್ಲೆ
ಜುಲೈ 31– ಆಗಸ್ಟ್ 01 : ಕೋಲಾರ ಜಿಲ್ಲೆ
ಆಗಸ್ಟ್ 6–7 : ತುಮಕೂರು ಜಿಲ್ಲೆ
ಆಗಸ್ಟ್ 6–7 : ಹಾಸನ ಜಿಲ್ಲೆ

ನನ್ನ ಅಪ್ಪ ಮೊದಲು ಗಾಂಧಿ ಅವರ ಅಭಿಮಾನಿ ಆಗಿರಲಿಲ್ಲ. ಅಪ್ಪ ತಮ್ಮ ಒಂದು ಲೇಖನದಲ್ಲಿ ಗಾಂಧಿ ಹೇಗೆ ತಮ್ಮ ಜೀವನದ ವಿವಿಧ ಕಾಲ್ಲಘಟ್ಟದಲ್ಲಿ ಪ್ರಭಾವ ಬೀರಿದರು ಎಂದು ವಿವರಿಸಿದ್ದಾರೆ. ಅದರಲ್ಲಿ ಮುಖ್ಯವಾದದ್ದು ನನ್ನ ಅಪ್ಪನಂತಹವರು ತುರ್ತುಪರಿಸ್ಥಿತಿಯಲ್ಲಿ ಗಾಂಧಿಯನ್ನು ಹೇಗೆ ಮರು ವ್ಯಾಖ್ಯಾನ ಮಾಡಿದರು ಮತ್ತು ಆಗಿನ ಪರಿಸ್ಥಿತಿಯಲ್ಲಿ ಗಾಂಧಿ ಹೇಗೆ ಸೈದ್ಧಾಂತಿಕ ಅಸ್ತ್ರವಾದರು ಎಂಬುದು. ಉದಾಹರಣೆಗೆ, ತುರ್ತುಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ವಿರುದ್ಧ ಮಾತನಾಡಿದರೆ ಜೈಲುಪಾಲಾಗಬೇಕಿತ್ತು. ಆಗ ಅಪ್ಪ ಹೇಳಿರುವಂತೆ ಅವರು ಮತ್ತು ಅವರ ಸೋಷ್ಯಲಿಸ್ಟ್ ಮಿತ್ರರು ಮಹಾತ್ಮಾ ಗಾಂಧಿಯನ್ನು ಉಲ್ಲೇಖಿಸಿ ಇಂದಿರಾ ವಿರುದ್ಧ ಮಾತನಾಡುತ್ತಿದ್ದರು. ಇಂದಿರಾಗೆ ಆಗ ಇಂಥವರನ್ನು ಜೈಲಿಗೆ ಹಾಕಲು ಸಾಧ್ಯವಿರಲಿಲ್ಲ. ಅಂದರೆ ಆಗ ಇಂದಿರಾ ವಿರುದ್ಧದ ಹೋರಾಟದಲ್ಲಿ ಗಾಂಧಿ ಪರ್ಯಾಯ ಶಕ್ತಿಯಾಗಿ ರೂಪಗೊಂಡರು. ಈಗ ನಾವೂ ಅಂತಹ ಸಂದರ್ಭದಲ್ಲಿ ಇದ್ದೇವೆ. ಆಗ ಹೇಗೆ ಅಪ್ಪನಂತಹ ಸೋಷ್ಯಲಿಸ್ಟರು ಮಹಾತ್ಮಾ ಗಾಂಧಿಯ ಸಿದ್ಧಾಂತಗಳನ್ನೇ ಅಸ್ತ್ರವಾಗಿಸಿಕೊಂಡರೋ ನಾವೀಗ ಅಂಬೇಡ್ಕರ್ ಅವರ ನಿಲುವನ್ನೇ ನಮ್ಮ ಹೋರಾಟದ ಮೂಲ ಅಸ್ತ್ರವಾಗಿಸಿಕೊಳ್ಳಬೇಕಿದೆ.

– ಗೌರಿ ಲಂಕೇಶ್

ಹೊಸ 'ತ್ರಿಮೂರ್ತಿ'ಯ ಕೊಳಕು ಮುಖಗಳು

ಪುಟ 11 ರಿಂದ

ಈ ಕುರಿತ ಮಾಹಿತಿಯನ್ನು ಬಹಿರಂಗಪಡಿಸಲೇ ಸರಕಾರ ಸಿದ್ಧವಿಲ್ಲ. ಆದರೆ ಇದೇ ಮಂದಿ 5000 ರೂಪಾಯಿ ಸಾಲವನ್ನು ತೀರಿಸಲಾಗದ ಬಡ ರೈತನ ಪಾತ್ರೆ ಪಗಡೆಗಳನ್ನೂ ಹರಾಜು ಹಾಕಲು ಹಿಂದೆ ಮುಂದೆ ನೋಡುವುದಿಲ್ಲ, ಅದಕ್ಕಾಗಿ ಅವರಿಗೆ ಯಾವುದೇ ಪಶ್ಚಾತ್ತಾಪವೂ ಇರುವುದಿಲ್ಲ. ಚವುಚಾ ಬಂಡವಾಳಗಾರರಿಗೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ನೀಡಿದ ಈ ಸಾಲ ಜನರ ತೆರಿಗೆಯಿಂದ ಸಂಗ್ರಹವಾದ ಬಂಡವಾಳ ಎನ್ನುವುದನ್ನು ನೆನೆಪಿನಲ್ಲಿಟ್ಟುಕೊಳ್ಳಬೇಕು.

ದುಡಿಯುವ ಜನರು ಕೂಡ ಸರಕಾರದ ಹೆಚ್ಚುವರಿ ತೆರಿಗೆಗಳ ಹೊರೆಯಿಂದ ತತ್ತರಿಸಿದ್ದಾರೆ. ಎಲ್ಲಾ ಹೆಚ್ಚಳಗಳನ್ನು ಪರೋಕ್ಷ ತೆರಿಗೆಗಳಲ್ಲೇ, ಅಂದರೆ ತೆರಿಗೆಗಳು, ಸೆಸ್‌ಗಳು ಮತ್ತು ಲೆವಿಗಳಲ್ಲಿಯೇ ಮಾಡಲಾಗುತ್ತಿದೆ. ಈ ರೀತಿಯಲ್ಲಿ ಸಂಗ್ರಹವಾದ ಮೊತ್ತ 20,600 ಕೋಟಿ ರೂಪಾಯಿ. ಇದರಿಂದ ಹೆಚ್ಚಿನ ಹೊರೆ ಬೀಳುವುದು ಬಡಜನರ ಮೇಲೆಯೇ. ಅತ್ತ ನೇರ ತೆರಿಗೆಗಳನ್ನು ಇನ್ನಷ್ಟು ಕಡಿಮೆ ಮಾಡಿ ಶ್ರೀಮಂತರಿಗೆ ಅನುಕೂಲ ಮಾಡಿಕೊಡಲಾಗಿದೆ: ಅವರಿಗೆ 1,600 ಕೋಟಿ ರೂಪಾಯಿಯಷ್ಟು ನೇರ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಅಷ್ಟಾಗಿಯೂ ನಿಗದಿತ ಗುರಿಯನ್ನು ತಲುಪಲಾಗಿಲ್ಲ. ಆರು ಲಕ್ಷ ಕೋಟಿ ರೂಪಾಯಿಯಷ್ಟಿರುವ ತೆರಿಗೆ ಬಾಕಿಯನ್ನು ವಸೂಲಿ ಮಾಡಲು ಅಥವಾ ಬಜೆಟ್‌ನಲ್ಲಿ ಘೋಷಿಸಿದ ಆರು ಲಕ್ಷ ಕೋಟಿ ರೂಪಾಯಿಗಳಷ್ಟು ಇಪ್ರೋತ್ಸಾಹಕ'ಗಳೆಂದು ನೀಡಿರುವ ತೆರಿಗೆ ಸೌಲಭ್ಯವನ್ನು ತುಂಬಲು ಸರಕಾರ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ.

ಇದರ ಜತೆ ಜನರಿಗೆ ಹಣದುಬ್ಬರದ ಹೊರೆ ಬೇರೆ. ಗ್ರಾಹಕ ಬೆಲೆ ಸುಚ್ಯಂಕ ಎಪ್ರಿಲ್‌ನಲ್ಲಿ ಶೇಕಡ 5.4ರಷ್ಟು ಏರಿತು ಹಾಗೂ ಗ್ರಾಮೀಣ ಹಣದುಬ್ಬರ 6.1 ಶೇಕಡಾ ಆಗಿತ್ತು. ಎಪ್ರಿಲ್‌ನಲ್ಲಿ ಆಹಾರಧಾನ್ಯಗಳ ಬೆಲೆ 6.2 ಶೇಕಡಾದಷ್ಟು ಮತ್ತು ಬೇಳೆಗಳ ಬೆಲೆ 34 ಶೇಕಡಾದಷ್ಟು ಏರಿಕೆಯಾದವು. ಆಘಾತಕಾರಿ ಎನ್ನುವಷ್ಟು ನಿಯಮಿತವಾಗಿ ಪೆಟ್ರೋಲ್, ಡೀಸೆಲ್ ಬೆಲೆಗಳು ಏರುತ್ತಿವೆ. ಬಹಳಷ್ಟು ಏರಿಳಿಕೆ ಕಾಣುವ ಆಹಾರ ಮತ್ತು ಇಂಧನ ಖರ್ಚುಗಳನ್ನು ಬಿಟ್ಟ ಮೂಲ ಹಣದುಬ್ಬರದ ಪ್ರಮಾಣ ಶೇಕಡಾ 6.8 ಆಗಿದೆ.

ನಿಜವಾದ ಅಂಕಿಸಂಖ್ಯೆಗಳನ್ನು ಮರೆಮಾಚುವ ಸರಕಾರದ ಅಂಕಿ–ಅಂಶಗಳ ಪ್ರಕಾರವೂ ಕಳೆದ ವರ್ಷ ದೇಶದಲ್ಲಿ 2,997 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಈಗಾಗಲೇ 116 ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಈ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ, ಪ್ರಧಾನಿಯವರು ವಿವಿಧ ಸಂದರ್ಭಗಳಲ್ಲಿ ಬಾಯಿ ಮಾತಿನಲ್ಲಿ ಸಹಾನೂಭೂತಿ ವ್ಯಕ್ತಪಡಿಸುವುದನ್ನು ಬಿಟ್ಟರೆ ಇನ್ನೇನನ್ನೂ ಮಾಡುತ್ತಿಲ್ಲ. ದುರಂತವೆಂದರೆ, ಕೃಷಿ ಸಚಿವಾಲಯ ಸಾಮಾಜಿಕ ಜಾಲತಾಣದಲ್ಲಿ ತನ್ನ ವಿಚಾರಗಳನ್ನು ಜನಪ್ರಿಯಗೊಳಿಸಲು ಬ್ರಾಂಡ್ ರಾಯಭಾರಿ ಬೇಕು ಎಂದು ಒಂದು ಟೆಂಡರ್ ಕರೆದಿದೆ!



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಿಜಯ ಕರ್ನಾಟಕ

ಕಳೆದ ಎರಡು ವರ್ಷಗಳಲ್ಲಿ ನಿಜ ಅರ್ಥದಲ್ಲಿ ಕೂಲಿಯಲ್ಲಿ ಕುಸಿತ ಕಂಡಿರುವ ಗ್ರಾಮೀಣ ಬಡವರಿಗೆ ಇದು ದುಪ್ಪಟ್ಟು ಹೊಡೆತವೇ ಸರಿ. ರೈತರಿಗೆ ಉತ್ಪಾದನೆ ವೆಚ್ಚದ ಮೇಲೆ ಶೇಕಡಾ 50ರಷ್ಟು ಲಾಭ ಒದಗಿಸುವುದಾಗಿ ಚುನಾವಣೆ ಪ್ರಚಾರದ ವೇಳೆ ಮೋದಿ ಭರವಸೆ ನೀಡಿದ್ದರು. ಆದರೆ ಲಾಭ' ಬರುವುದು ಬಿಡಿ, ಕಳೆದ ಎರಡು ವರ್ಷಗಳಿಂದ ಈ ಸರಕಾರದಡಿ ರೈತರು ಹೂಡಿದ ಬಂಡವಾಳವೇ ವಾಪಸ್ ಬರುತ್ತಿಲ್ಲ. ಹತಾಶೆಯಿಂದ ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವುದು ಹೆಚ್ಚುತ್ತಿದೆ. ಮಳೆ ಕಡಿಮೆಯಾಗುವುದು ಮತ್ತು ಬರಗಾಲ ಯಾರ ಕೈನಲ್ಲೂ ಇಲ್ಲ. ಆದರೆ, ಅದಕ್ಕೆ ಸ್ಪಂದಿಸುವುದು ಖಂಡಿತಾ ಸರಕಾರದ ನಿಯಂತ್ರಣದಲ್ಲಿದೆ. ಗ್ರಾಮೀಣ ಭಾರತದ ಜನರು ನಲುಗುತ್ತಿರುವಾಗ, ಸುಪ್ರೀಂಕೋರ್ಟ್ ನಿರ್ದೇಶನ ನೀಡುವವರೆಗೂ ಕಳೆದ ವರ್ಷದ ಉದ್ಯೋಗ ಖಾತ್ರಿ ಯೋಜನೆಯಡಿಯ ಬಾಕಿ ಹಣವನ್ನು ಕೇಂದ್ರ ಸರಕಾರ ಬಿಡುಗಡೆ ಮಾಡಲಿಲ್ಲ. "ಪ್ರಭುತ್ವವು ಸಂವಿಧಾನವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ" ಎಂದು ತನ್ನ ತೀರ್ಪಿನಲ್ಲಿ ಆಕ್ರೋಶ ವ್ಯಕ್ತಪಡಿಸಿದ ಸುಪ್ರೀಂಕೋರ್ಟ್, "ಭಾರತ ಸರಕಾರ ಸಾಮಾಜಿಕ ನ್ಯಾಯವನ್ನು ಕಿಟಕಿಯಾಚೆ ಎಸೆದಿದೆ" ಎಂದೂ ಹೇಳಿದೆ.

ಆದರೆ ಸರಕಾರಕ್ಕೆ ಸುಪ್ರೀಂಕೋರ್ಟ್‌ನ ಈ ಛೀಮಾರಿಯ ಪರಿವೆಯೂ ಇಲ್ಲ. ಅದು ತನ್ನದೇ ರೀತಿಯಲ್ಲಿ ಬೇಕಾಬಿಟ್ಟಿಯಾಗಿ ಕೆಲಸ ಮುಂದುವರೆಸುತ್ತಿದೆ. ಸಂಭ್ರಮಾಚರಣೆಗೆ, ಜಾಹಿರಾತುಗಳು ಮತ್ತು ಮಾರ್ಕೆಟಿಂಗ್‌ಗೆ ಅಪಾರ ಹಣ ಸುರಿಯುತ್ತಿದೆ. ಭಾರತೀಯರು ಮಾರ್ಕೆಟಿಂಗ್ ವಿಚಾರದಲ್ಲಿ ಅಷ್ಟೇನೂ ಹುಷಾರಲ್ಲ ಎಂದು ಪ್ರಧಾನಿ ಹೇಳಬಹುದು, ಆದರೆ ಖಂಡಿತವಾಗಿಯೂ ಈ ಮಾತು ಅವರ ಸರಕಾರಕ್ಕೆ ಅನ್ವಯ ವಾಗುವುದಿಲ್ಲ. ಅವರ ಸರಕಾರ ಜಾಹಿರಾತು ಖರ್ಚನ್ನು ಶೇಕಡಾ 20ರಷ್ಟು ಹೆಚ್ಚಿಸಿದ್ದು ಆ ಮೊತ್ತ 1,200 ಕೋಟಿ ರೂಪಾಯಿ ಆಗಿದೆ.

ಈ ರೀತಿಯಾಗಿ, ಈ ಎರಡು ವರ್ಷಗಳು ದೇಶದ ಬಹುಪಾಲು ಜನರ ಮೇಲೆ ತೀವ್ರವಾದ ಆರ್ಥಿಕ ಹೊರೆಗಳು ಹೇರಿಕೆಯಾಗಿದ್ದನ್ನು ಕಂಡಿವೆ. ಎಲ್ಲಾ ಮೂರು ಪ್ರಧಾನ ವಿಷಯಗಳಲ್ಲಿ ಕಡೆಯಲಾಗುತ್ತಿರುವ ಈ ಹೊಸ 'ತ್ರಿಮೂರ್ತಿ' ಎಂದರೆ, ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಭಾರತಕ್ಕೆ ಹಿನ್ನಡೆ ಹಾಗೂ ದೇಶದ ಬಹುತೇಕ ಜನಗಳ ಜೀವನೋಪಾಯದ ಮೇಲೆ ದೊಡ್ಡ ಆಕ್ರಮಣ ಎಂಬುದು ಇಷ್ಟು ಹೊತ್ತಿಗೆ ಸುಸ್ಪಷ್ಟವಾಗುತ್ತಿದೆ.

> ಕಳೆದ ವರ್ಷ ಎಪ್ರಿಲ್‌ನಿಂದ ಜೂನ್ ನಡುವೆ ವಾಸ್ತವವಾಗಿ 43,000ದಷ್ಟು ಉದ್ಯೋಗಗಳು ಕುಸಿದಿವೆ. ಅದೇ ವರ್ಷ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಉದ್ಯೋಗಗಳ ಸಂಖ್ಯೆಯಲ್ಲಿ ಅತಿಹೆಚ್ಚಿನ ಕುಸಿತ ದಾಖಲಾಗಿದೆ: ಪ್ರತಿವರ್ಷ 2 ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುವುದಾಗಿ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ, ಭಾರತದ ಜನಸಂಖ್ಯೆಯ ಅನುಕೂಲವನ್ನು ಜನಸಂಖ್ಯೆಯ ದುರಂತವನ್ನಾಗಿ ಪರಿವರ್ತಿಸಲು ಟೊಂಕ ಕಟ್ಟಿ ನಿಂತಂತೆ ಕಾಣುತ್ತದೆ.

ವ್ಯಾಪಕವಾದ ಪ್ರಬಲ ಜನತಾ ಹೋರಾಟಗಳ ಮೂಲಕ ಮಾತ್ರವೇ ಇಂಥ ಆಕ್ರಮಣಗಳನ್ನು ಹಿಮ್ಮೆಟ್ಟಿಸಬಹುದಾಗಿದೆ. ಹೀಗಾಗಿ, ಈ ಸರಕಾರ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ, ಭಾರತೀಯ ಜನತೆಯ ಮುಂದಿರುವ ಕಾರ್ಯಭಾರಗಳು ಸ್ಪಷ್ಟವಾಗಿವೆ– ಜನತೆಯ ಘನತೆಯ ಬಾಳ್ವೆಯ ಹಕ್ಕಿನ ರಕ್ಷಣೆಗಾಗಿ ಮತ್ತು ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿತವಾಗಿರುವ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಪ್ರತಿರೋಧವನ್ನು ಹೆಚ್ಚಿಸುವುದು. ಈ ಪ್ರತಿರೋಧ, ಮುಂದಿನ ವರ್ಷಗಳಲ್ಲಿ ಸರಕಾರದ ದುರಂತಮಯ ಕ್ರಮಗಳನ್ನು ವಾಪಸ್ ತಿರುಗಿಸುವ ಹಾಗೂ ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ನಿರಾಕರಿಸುವ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸುವ ಮಟ್ಟವನ್ನು ಮುಟ್ಟಬೇಕು

ಈ ಹಿನ್ನೆಲೆಯಲ್ಲಿ, ಆರ್‌ಎಸ್‌ಎಸ್ / ಬಿಜೆಪಿ ಮತ್ತು ಪ್ರಧಾನಿ ಮೋದಿಯವರ 'ಸಂಭ್ರಮಾಚರಣೆ' ಒಂದು ಅವಾಸ್ತವಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ●

ಅತಿಥಿ ಉಪನ್ಯಾಸಕರನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಮುಂದುವರೆಸಲು ತೀರ್ಮಾನ



ಪ್ರಸ್ತುತ ಶೈಕ್ಷಣಿಕ ವರ್ಷ ಅಂತ್ಯಗೊಳ್ಳುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷಕ್ಕೂ ಹಾಲಿ ಸೇವೆಯಲ್ಲಿರುವ ಅತಿಥಿ ಉಪನ್ಯಾಸಕರನ್ನು ಮುಂದಿನ 2016–17ನೇ ಶೈಕ್ಷಣಿಕ ವರ್ಷಕ್ಕೆ ಮುಂದುವರೆಸಬೇಕು. ವೇತನ ಹೆಚ್ಚಿಸಬೇಕೆಂದು ಮೇ 2ರಂದು ಉನ್ನತ ಶಿಕ್ಷಣ ಸಚಿವರಾದ ಟಿ.ಬಿ. ಜಯಚಂದ್ರರವರ ನಿವಾಸದ ಎದುರು ಅತಿಥಿ ಉಪನ್ಯಾಸಕರು ಧರಣಿ ನಡೆಸಿದರು.

ಅತಿಥಿ ಉಪನ್ಯಾಸಕರ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ ಬಿ ಮಾನ್ಪಡೆ, ರಾಜ್ಯಾಧ್ಯಕ್ಷರಾದ ಶ್ರೀನಿವಾಸ ಚಾರ್, ಉಡುಪಿಯ ಜಿಲ್ಲಾಧ್ಯಕ್ಷರಾದ ರಂಜಿತ್, ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧ್ಯಕ್ಷರಾದ ಎನ್.ಟಿ.ನಾಯಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖಂಡರಾದ ಸವಿತಾ ಹಾಗೂ ತುಮಕೂರು ಜಿಲ್ಲೆಯ ಡಾ. ಮಂಜುಳ ಸೇರಿ 7 ಜನರ ನಿಯೋಗದ ಜೊತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಕಾಸ ಸೌಧದಲ್ಲಿ ಮಾತುಕತೆಗೆ ಆಹ್ವಾನಿಸಿ ಸಭೆಯನ್ನು ನಡೆಸಿದರು.

ಸಚಿವರ ಜೊತೆ ವಾಗ್ವಾದ: ಉನ್ನತ ಶಿಕ್ಷಣ ಸಚಿವರ ಜೊತೆ ನಿಯೋಗ ಚರ್ಚೆ ಮಾಡುವ ಸಂದರ್ಭದಲ್ಲಿ ವಾಗ್ವಾದ ನಡೆದು, ತಾವು ಇಚ್ಛಾಶಕ್ತಿಯನ್ನು ವ್ಯಕ್ತಪಡಿಸುತ್ತಿದ್ದೀರಿ, ಆದರೆ ಜಾರಿಯಾಗುತ್ತಿಲ್ಲ. ನಮ್ಮನ್ನು ಮುಂದುವರೆಸುತ್ತೇವೆ ಅಥವಾ ಮುಂದುವರೆಸುವುದಿಲ್ಲ ಎಂಬ ತೀರ್ಮಾನಕ್ಕೆ ಬನ್ನಿ ಎಂದು ನಿಯೋಗ ಒತ್ತಾಯಿಸಿತು.

ಈ ಸಂಧರ್ಭದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಬರಮಾಡಿಕೊಂಡು ಸಭೆಯನ್ನು ಮುಂದುವರೆಸಿದ ಮಾನ್ಯ ಉನ್ನತ ಶಿಕ್ಷಣ ಸಚಿವರು, ನಮ್ಮ ಬೇಡಿಕೆಗೆ ಸ್ಪಂದಿಸಿ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯವಿರುವಷ್ಟು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವಾಗ, ಪ್ರಸಕ್ತ ವರ್ಷ ಸೇವೆಯಲ್ಲಿರುವವರನ್ನು ವಯೋಮಿತಿ ಮತ್ತು ಸೇವಾ ಹಿರಿತನದ ಆಧಾರದಲ್ಲಿ ಮುಂದುವರೆಸಲಾಗುವುದು. ಇದರ ಜೊತೆಗೆ ಕಳೆದ ಜನವರಿ ತಿಂಗಳಲ್ಲಿ ಪ್ರತಿಭಟನೆ ನಿರತ ಉಪನ್ಯಾಸಕರ ವೇತನ ತಡೆಹಿಡಿದಿದ್ದನ್ನು, ನಂತರದ ದಿನಗಳಲ್ಲಿ ಪಾಠ ಪ್ರವಚನಗಳನ್ನು ಮಾಡಿ ಮುಗಿಸಿರುವ ಉಪನ್ಯಾಸಕರಿಗೆ ವೇತನ ಕೊಡಲಾಗುವುದೆಂದು ತೀರ್ಮಾನಕ್ಕೆ ಬಂದರು.

ನಂತರದಲ್ಲಿ ಧರಣಿ ನಿರತ ಅತಿಥಿ ಉಪನ್ಯಾಸಕರು ರಾಜ್ಯ ಮಟ್ಟದ ಸಭೆ ನಡೆಸಿ, ಮುಂದೆ ರಾಜ್ಯ ಸರಕಾರದ ನಡೆಯನ್ನು ನೋಡಿಕೊಂಡು ಮುಂದಿನ ಹೋರಾಟವನ್ನು ತೀರ್ಮಾನಿಸೋಣ ಎಂದು ಅಭಿಪ್ರಾಯಕ್ಕೆ ಬರಲಾಗಿದೆ.

ಹೆಂಡ ಇಳಿಸುವವನ ಮಗ ಮುಖ್ಯಮಂತ್ರಿ......... ಪುಟ 16 ರಿಂದ

ಅವರ ರಾಜಕೀಯ ಜೀವನದ ಕೆಲವು ಮೇಲಿಗಲ್ಲುಗಳು ಹೀಗಿವೆ:

- 1964ರಲ್ಲಿ ಕೇರಳ ಸ್ಟುಡೆಂಟ್ಸ್ ಫೆಡರೇಶನ್ (ಎಸ್.ಎಫ್.ಐ.ಗೆ ಹಿಂದಿನ ವಿದ್ಯಾರ್ಥಿ ಸಂಘಟನೆ)ನ ಕಣ್ಣೂರು ಜಿಲ್ಲಾ ಕಾರ್ಯದರ್ಶಿ
- 1967ರಲ್ಲಿ ತಲಸೇರಿ ವಿದಾನಸಭಾ ಕ್ಷೇತ್ರದ ಸಿಪಿಐ(ಎಂ) ಕಾರ್ಯದರ್ಶಿ
- 1968ರಲ್ಲಿ ಕಣ್ಣೂರು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ
- 1970ರಲ್ಲಿ ಕಣ್ಣೂರಿನ ಕೂತುಪರಂಬು ಕ್ಷೇತ್ರದಿಂದ ತಮ್ಮ 26ನೇ ವಯಸ್ಸಿನಲ್ಲೇ ವಿಧಾನಸಬಾ ಸದಸ್ಯ
- 1972ರಲ್ಲಿ ಕಣ್ಣೂರು ಸಿಪಿಐ(ಎಂ) ಜಿಲ್ಲಾ ಸೆಕ್ರೆಟಾರಿಯಟ್ ಸದಸ್ಯ
- ತುರ್ತು ಪರಿಸ್ಥಿತಿಯಲ್ಲಿ (1975–77) 18 ತಿಂಗಳುಗಳಲ್ಲಿ ಜೈಲುವಾಸ
- 1977ರಲ್ಲಿ ಕೂತುಪರಂಬು ಕ್ಷೇತ್ರದಿಂದ 2ನೇ ಬಾರಿ ಶಾಸಕರಾಗಿ ಆಯ್ಕೆ
- 1996ರಲ್ಲಿ ಇ ಕೆ ನಯನಾರ್ ಮಂತ್ರಿಮಂಡಲದಲ್ಲಿ ವಿದ್ಯುತ್ ಮಂತ್ರಿ
- 1998ರಲ್ಲಿ ಕಾ. ಚಡಯನ್ ಗೋವಿಂದನ್ ಮರಣದ ನಂತರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆ
- 2002ರಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ
- 2005, 2008, 2011ರಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಪುನಃ ಆಯ್ಕೆ
- 2016ರಲ್ಲಿ ಧರ್ಮಾಡಮ್ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ: ಮುಖ್ಯಮಂತ್ರಿ ಪದಗ್ರಹಣ

ನಮ್ಮ ಚುರು-ಟ್ವೀಟ್

@SitaramYechury

ಆಫ್ರಿಕನ್ ರಾಯಭಾರಿಗಳು ಬಹಿಷ್ಕಾರ ಹಾಕಬೇಕಾಯಿತು ಬಿಜೆಪಿ ಸರಕಾರ ಪ್ರತಿಸ್ಪಂದಿಸಲು #ಗರಿಷ್ಟ–ಭಾಷಣ–ಕನಿಷ್ಟ–ಶಾಸನ(2/2)


ದೆಹಲಿಯ ಭದ್ರತೆ ಕೇಂದ್ರ ಸರಕಾರದಡಿ ನೇರವಾಗಿ ಬರುತ್ತದೆ. ದೆಹಲಿಯ ಹದಗೆಟ್ಟ ಕಾನೂನು–ವ್ಯವಸ್ಥೆಯನ್ನು 'ಜಂಗಲ್ ರಾಜ್' ಎಂದು ದೆಹಲಿ ಹೈಕೋರ್ಟು ಕರೆದಿದೆ.(1/2)

– ಸೀತಾರಾಂ ಯೆಚುರಿ

(ದೆಹಲಿಯಲ್ಲಿ ಕಾಂಗೋ ವಿದ್ಯಾರ್ಥಿಯೊಬ್ಬನ ಕೊಲೆಯ ಹಿನ್ನೆಲೆಯಲ್ಲಿ ಆಫ್ರಿಕನ್ ವಿಧ್ಯಾರ್ಥಿಗಳ ಭದ್ರತೆ ಬಗ್ಗೆ ಆಫ್ರಿಕನ್ ರಾಯಭಾರಿಗಳು ಪ್ರತಿಭಟಿಸಿ 'ಆಫ್ರಿಕನ್ ದಿನ'ದ ಸಮಾರಂಭಕ್ಕೆ ಬಹಿಷ್ಕಾರ ಹಾಕಿದ್ದರ ಬಗ್ಗೆ)

JANASHAKTHI KANNADA VARA PATRIKE JUNE 5, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283





ಪಿಣರಾಯಿ ವಿಜಯನ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವುದು

ಕೇರಳ ಹೊಸ ಬೆಳಗಿನತ್ತ

ಕೇರಳದಲ್ಲಿ ಪಿಣರಾಯಿ ವಿಜಯನ್ ಅವರ ನೇತೃತ್ವದಲ್ಲಿ 18 ಮಂತ್ರಿಗಳ ಮಂತ್ರಿ ಮಂಡಲ, ತಿರುವನಂತಪುರದ ಕೇಂದ್ರೀಯ ಸ್ಟೆಡಿಯಂನಲ್ಲಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡಿದೆ. 30 ಸಾವಿರಕ್ಕೂ ಹೆಚ್ಚು ಜನ ಇದನ್ನು ನೋಡಲು ಹಾಜರಿದ್ದರು. ಇವರಲ್ಲಿ 13 ಜನ ಹೊಸಬರು, ಮೊದಲ ಬಾರಿಗೆ ಮಂತ್ರಿಗಳಾಗುತ್ತಿರುವವರು. ಇಬ್ಬರು ಮಹಿಳೆಯರು. ಮಂತ್ರಿಮಂಡಲದಲ್ಲಿ 12 ಸಿಪಿಐ(ಎಂ), 3 ಸಿಪಿಐ, ತಲಾ 1 ಜೆಡಿ(ಎಸ್), ಎನ್.ಸಿ.ಪಿ., ಕೇರಳ ಕಾಂಗ್ರೆಸ್(ಬಿ) ಗಳಿಗೆ ಸೇರಿದವರು. 18 ಮಂತ್ರಿಗಳ ಪಟ್ಟಿ ಹೀಗಿದೆ:

ಇವರು ಎಲ್.ಡಿ.ಎಫ್. ಮಂತ್ರಿಗಳು

ಪಿಣರಾಯಿ ವಿಜಯನ್	: **ಮುಖ್ಯಮಂತ್ರಿ,** ಗೃಹ ಖಾತೆ
ಥೋಮಸ್ ಐಸಾಕ್	: ಹಣಕಾಸು (2ನೇ ಬಾರಿ ಅದೇ ಖಾತೆಗೆ)
ಪಿ ತಿಲೋತ್ತಮನ್	: ಸಾರ್ವಜನಿಕ ಹಂಚಿಕೆ (3ನೇ ಬಾರಿ ಶಾಸಕ, ಮೊದಲ ಬಾರಿ ಮಂತ್ರಿ)
ವಿ.ಎಸ್.ಸುನೀಲ್‌ಕುಮಾರ್	: ಕೃಷಿ (3ನೇ ಬಾರಿ ಶಾಸಕ, ಮೊದಲ ಬಾರಿ ಮಂತ್ರಿ)
ಜಿ ಸುಧಾಕರನ್	: ಸಾರ್ವಜನಿಕ ಕಾಮಗಾರಿ (4ನೇ ಬಾರಿ ಶಾಸಕ, 2ನೇ ಬಾರಿ ಮಂತ್ರಿ)
ಕೆ ಕೆ ಶೈಲಜಾ	: ಆರೋಗ್ಯ, ಸಮಾಜ ಕಲ್ಯಾಣ (3ನೇ ಬಾರಿ ಶಾಸಕಿ, ಮೊದಲ ಬಾರಿ ಮಂತ್ರಿ)
ಸಿ ರವೀಂದ್ರನಾಥ್	: ಶಿಕ್ಷಣ (3ನೇ ಬಾರಿ ಶಾಸಕ)
ಟಿ.ಪಿ.ರಾಮಕೃಷ್ಣನ್	: ಅಬಕಾರಿ ಮತ್ತು ಕಾರ್ಮಿಕ (2ನೇ ಬಾರಿ ಶಾಸಕ, ಮೊದಲ ಬಾರಿ ಮಂತ್ರಿ)
ಕೆ. ರಾಜು	: ಅರಣ್ಯ, ವನ್ಯಮೃಗ ಮತ್ತು ಪರಿಸರ
ಎ ಸಿ ಮೊಯಿದ್ದೀನ್	: ಪ್ರವಾಸೋದ್ಯಮ, ಸಹಕಾರ (3ನೇ ಬಾರಿ ಶಾಸಕ, ಮೊದಲ ಬಾರಿ ಮಂತ್ರಿ)
ಜೆ ಮರ್ಸಿಕುಟ್ಟಿ ಅಮ್ಮ	: ಮೀನುಗಾರಿಕೆ (3ನೇ ಬಾರಿ ಶಾಸಕಿ, ಮೊದಲ ಬಾರಿ ಮಂತ್ರಿ)
ಕಡಕಂಪಲ್ಲಿ ಸುರೇಂದ್ರನ್	: ವಿದ್ಯುತ್ ಮತ್ತು ದೇವಸ್ಥಾನಗಳು
ಇ ಪಿ ಜಯರಾಜನ್	: ಕೈಗಾರಿಕೆ ಮತ್ತು ಕ್ರೀಡೆಗಳು
ಕೆ ಟಿ ಜಲೀಲ್	: ಸ್ಥಳೀಯ ಸರಕಾರಗಳು (ಮೊದಲ ಬಾರಿ ಮಂತ್ರಿ)
ಎ ಕೆ ಬಾಲನ್	: ಸಂಸ್ಕೃತಿ, ಹಿಂದುಳಿದ ವರ್ಗಗಳು (2ನೇ ಬಾರಿ ಮಂತ್ರಿ)
ಕದನಪಲ್ಲಿ ರಾಮಚಂದ್ರನ್	: ಬಂದರು, ಮ್ಯೂಸಿಯಂ, ಮೃಗಾಲಯ
ಪಿ ಥೋಮಸ್	: ನೀರು ಪೂರೈಕೆ (2ನೇ ಬಾರಿ ಮಂತ್ರಿ)
ಎ.ಕೆ.ಸಸೀಂದ್ರನ್	: ಸಾರಿಗೆ
ಇ ಚಂದ್ರಶೇಖರನ್	: ರೆವಿನ್ಯೂ

ಎಲ್.ಡಿ.ಎಫ್. ಸರಕಾರದ ತುರ್ತು ಕ್ರಮಗಳು

ಪ್ರಮಾಣ ವಚನ ಸ್ವೀಕರಿಸಿದ ನಂತರ ಸಭೆ ಸೇರಿದ ಮಂತ್ರಿಮಂಡಲ ಕೆಲವು ತುರ್ತು ನಿರ್ಣಯಗಳನ್ನು ತೆಗೆದುಕೊಂಡಿತು. ಅವು ಈ ಕೆಳಗಿನಂತಿವೆ :

1. ಜಿಶಾ ಅತ್ಯಾಚಾರ ಪ್ರಕರಣದಲ್ಲಿ ಎಡಿಜಿಪಿ ಬಿ. ಸಂಧ್ಯಾ ನೇತೃತ್ವದಲ್ಲಿ ಹೊಸ ತಂಡ ರಚನೆ; ಜಿಶಾ ತಾಯಿಗೆ ರೂ. 5 ಸಾವಿರ ಮಾಸಿಕ ಪೆನ್ಶನ್, ಸೋದರಿಗೆ ಸರಕಾರಿ ಕೆಲಸ; 45 ದಿನಗಳಲ್ಲಿ ಕುಟುಂಬಕ್ಕೆ ಮನೆ
2. ಯು.ಡಿ.ಎಫ್. ವಿಧಿಸಿದ್ದ ಸರಕಾರಿ ಉದ್ಯೋಗಗಳ ಮೇಲೆ ನಿಷೇಧ ಕೊನೆಗಾಣಿಸುವತ್ತ, ಈಗ ಇರುವ ಖಾಲಿ ಹುದ್ದೆಗಳ ಪಟ್ಟಿ 10 ದಿನಗಳಲ್ಲಿ
3. ಸಾರ್ವಜನಿಕ ಹಂಚಿಕೆ ಬಲಪಡಿಸಲು, ಅದನ್ನು ವಹಿಸುತ್ತಿರುವ ಸಪ್ಲೈಕೊ ಅನುದಾನ 75 ಕೋಟಿಯಿಂದ 150 ಕೋಟಿ ರೂ.ಗೆ ಇಮ್ಮಡಿ;
4. ಸಾಮಾಜಿಕ ಭದ್ರತೆ ಪೆನ್ಶನ್ ರೂ. 1000ಕ್ಕೆ ಏರಿಸಲಾಗುವುದು ಮತ್ತು ತಕ್ಷಣ ಎಲ್ಲಾ ಬಾಕಿ ಪಾವತಿ; ಹಿರಿಯ ನಾಗರಿಕರಿಗೆ ಮನೆಗೆ ಪೆನ್ಶನ್ ತಲುಪಿಸಲು ವಿಧಾನ ರೂಪಿಸಲು ನಿರ್ದೇಶನ
5. ರಾಜ್ಯ ಯೋಜನಾ ಆಯೋಗ ಮತ್ತು ಯೋಜನಾ ಪ್ರಕ್ರಿಯೆ ಮುಂದುವರಿಕೆ
6. ಮಳೆಗಾಲದ ಮೊದಲು ಸ್ವಚ್ಛತಾ ವ್ಯವಸ್ಥೆ ತ್ವರಿತಗೊಳಿಸುವುದು;
7. ಜನರಿ 2016ರ ನಂತರ ಹಿಂದಿನ ಸರಕಾರ ತೆಗೆದುಕೊಂಡ ನಿರ್ಣಯಗಳ ಪುನರ್ವಿಮರ್ಶೆಗೆ ಎ ಕೆ ಬಾಲನ್ ನೇತೃತ್ವದಲ್ಲಿ ಸಂಪುಟ ಉಪ–ಸಮಿತಿ
8. ಮಂತ್ರಿಗಳ ಸನ್ಮಾನ ಸಮಾರಂಭದಲ್ಲಿ ಮಹಿಳೆಯರು ಮತ್ತು ಮಕ್ಕಳು 'ತಾಲಪ್ಪೊಲಿ' ಹಿಡಿಯುವ ಪದ್ಧತಿ ನಿಲ್ಲಿಸಲು ಸಲಹೆ







ಹೆಂಡ ಇಳಿಸುವವನ ಮಗ ಮುಖ್ಯಮಂತ್ರಿ

ತುರ್ತು ಪರಿಸ್ಥಿತಿಯ ಕರಾಳ ದಿನಗಳವು. ಆಗ ಶಾಸಕರಾಗಿದ್ದ ಪಿಣರಾಯಿ ವಿಜಯನ್ ಅವರನ್ನು ಕಾಂಗ್ರೆಸಿನ ಕುಖ್ಯಾತ ಗೃಹಮಂತ್ರಿ ಕರಣಾಕರನ್ ಮುಗಿಸಿ ಬಿಡಲು ಯೋಜಿಸಿದಂತಿತ್ತು. ಪಿಣರಾಯಿ ಅವರನ್ನು ಜೈಲಿನಲ್ಲಿ ಬೆತ್ತಲೆ ಮಾಡಿ ಅವರಿಗೆ ದನ ಬಡಿದಂತೆ ಬೆನ್ನ ಚರ್ಮ ಸುಲಿದು ಹೋಗುವ ವರೆಗೆ ಪ್ರಜ್ಞೆ ತಪ್ಪಿ ಹೋಗುವವರೆಗೆ ಬಡಿಯಲಾಯಿತು. ಆಗ ಮುಖ್ಯಮಂತ್ರಿಯಾಗಿದ್ದ ಅಚ್ಯುತ ಮೆನನ್ ಅವರನ್ನು ಇ.ಎಂ.ಎಸ್. ಮತ್ತು ಎಕೆ.ಜಿ.ಯಂತಹ ಹಿರಿಯ ನಾಯಕರು ಘೇರಾವೋ ಮಾಡಿದ ಮೇಲೆ ಅವರು ಗೃಹಮಂತ್ರಿಗೆ ವೈಯಕ್ತಿಕವಾಗಿ ದಾಳಿ ನಿಲ್ಲಿಸುವಂತೆ ಆಜ್ಞೆ ಮಾಡುವವರೆಗೆ ವಿಜಯನ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಜೈಲಿನಲ್ಲಿ ರಕ್ತಸಿಕ್ತವಾಗಿದ್ದ ತಮ್ಮ ಬಟ್ಟೆಗಳನ್ನು ವಿಜಯನ್ ಜೋಪಾನವಾಗಿ ಇಟ್ಟು ಕೊಂಡಿದ್ದರು. ತುರ್ತು ಪರಿಸ್ಥಿತಿಯ ನಂತರ ವಿಧಾನಸಭೆಯ ಅಧಿವೇಶನದಲ್ಲಿ ಅವರು ಈ ಬಟ್ಟೆಗಳನ್ನು ಪ್ರದರ್ಶಿಸಿ ತುರ್ತು ಪರಿಸ್ಥಿತಿಯ ದಮನಕಾರ್ಯಗಳ ಬಗ್ಗೆ ಮಾಡಿದ ಭಾಷಣ ಚಾರಿತ್ರಿಕವೆನಿಸಿದೆ.

ವಿಜಯನ್ ಕಣ್ಣೂರಿನ 'ಪಿಣರಾಯಿ' ಎಂಬ ಹಳ್ಳಿಯ ಹೆಂಡ ಇಳಿಸುವ ಕುಟುಂಬದಲ್ಲಿ ಮುಂಡಾಯಿಲ್ ಕೋರನ್ ಮತ್ತು ಕಲ್ಯಾಣಿ ಅವರ ಕೊನೆಯ ಮಗನಾಗಿ 1944ರಲ್ಲಿ ಹುಟ್ಟಿದರು. ಅವರ ಹಳ್ಳಿಯ ಹೆಸರು ಜನತೆಯ ನಡುವೆ ಮತ್ತು ರಾಜಕೀಯ ವಲಯಗಳಲ್ಲಿ ಅವರ ಅನ್ವರ್ಥನಾಮ ಆಯಿತು. ರಾಜಕೀಯವಾಗಿ ಸಕ್ರಿಯವಾದ ಕಣ್ಣೂರಿನಲ್ಲಿ ವಿಜಯನ್ ಅವರ ಮೇಲೆ ಹದಿ ಹರೆಯದಲ್ಲೇ ಕಮ್ಯುನಿಸ್ಟ್ ಪ್ರಭಾವ ತಟ್ಟಿತು. ಅವರು ತಮ್ಮ ಹೈಸ್ಕೂಲು ನಂತರ ಒಂದು ವರ್ಷ ಕೈಮಗ್ಗದಲ್ಲಿ ಕೆಲಸ ಮಾಡಿದರು. ಆ ನಂತರ ಪಿಯು ಮತ್ತು ಡಿಗ್ರಿ ಶಿಕ್ಷಣ ಪಡೆಯುತ್ತಿರುವಾಗಲೇ ವಿದ್ಯಾರ್ಥಿ ರಾಜಕೀಯ ಪ್ರವೇಶಿಸಿದರು.

ಪುಟ 15 ನೋಡಿ

JANASHAKTHI KANNADA VARA PATRIKE: Printed by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**